ಕರ್ನಾಟಕ ಲೋಚನ

ಷಾಣ್ಮಾಸಿಕ ವಿದ್ವತ್ ಪತ್ರಿಕೆ

ಸಂಪುಟ : ೨೬ ಜನವರಿ-ಡಿಸೆಂಬರ್ ೨೦೧೨ ಸಂಚಿಕೆ : ೦೧-೦೨

ಸಂಪಾದಕರು

ಪ್ರೊ. ಜಿ. ಅಬ್ದುಲ್ ಬಷೀರ್

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ

ಎಂ.ವಿ.ಸೀ. ಸಂಶೋಧನ ಕೇಂದ್ರ

ಬಿ.ಎಂ.ಶ್ರೀ ಕಲಾಭವನ (ರಿ.)

೩ನೇ ಮುಖ್ಯ ರಸ್ತೆ, ನರಸಿಂಹರಾಜ ಕಾಲೋನಿ

ಬೆಂಗಳೂರು - ೧೯, ದೂರವಾಣಿ : ೨೬೬೧೫೮೭೭

ಕರ್ನಾಟಕ

ಲೋಚನ

ಷಾಣ್ಮಾಸಿಕ ವಿದ್ವತ್ ಪತ್ರಿಕೆ

ಸಂಪುಟ : ೨೬ ಜನವರಿ-ಡಿಸೆಂಬರ್ ೨೦೧೨ ಸಂಚಿಕೆ : ೦೧-೦೨

ಸಂಪಾದಕರು

ಪ್ರೊ. ಜಿ. ಅಬ್ದುಲ್ ಬಷೀರ್

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ

ಬಿ.ಎಂ.ಶ್ರೀ ಕಲಾಭವನ (ರಿ)

೩ನೆಯ ಮುಖ್ಯರಸ್ತೆ, ನರಸಿಂಹರಾಜ ಕಾಲೋನಿ, ಬೆಂಗಳೂರು - ೫೬೦ ೦೧೯

ದೂರವಾಣಿ : ೨೬೬೧೫೮೭೭, ೨೬೬೭೬೭೭೩

ಇಮೇಲ್: bmsritrust@gmail.com

ಪರಿವಿಡಿ

೧. ವಿಜಯದಾಸರು ೧
– ಪ್ರೊ॥ ಡಿ. ಲಿಂಗಯ್ಯ

೨. ಸ್ತ್ರೀವಾದಿ ನೆಲೆಯಲ್ಲಿ ಕನ್ನಡ ಜನಪದ ಮಹಾಕಾವ್ಯಗಳು–ಒಂದು ನೋಟ ೧೭
– ಎಂ. ರೇಖಾ

೩. ತುಳುನಾಡಿನ ಭೂತಗಳಾಗಿ ಆರಾಧಿಸಲ್ಪಡುವ ಕನ್ನಡಿಗರು ೨೩
– ಡಾ॥ ಲಕ್ಷ್ಮೀ ಜಿ. ಪ್ರಸಾದ

೪. ನಾನು ಕಂಡಂತೆ – ಡಾ॥ ಶ್ರೀನಿವಾಸ ಹಾವನೂರ ೨೮
– ಎಸ್. ವಿ. ಶ್ರೀನಿವಾಸರಾವ್

೫. ಬೆಂಗಳೂರಿನಲ್ಲಿ ರವೀಂದ್ರನಾಥ ಠಾಗೂರ್ ೩೨
– ವೇಮಗಲ್ ಸೋಮಶೇಖರ್

೬. ಧನಂಜಯನ ದಶರೂಪಕ ಮತ್ತು ಶೀರ್ಷಿಕೆಯ ಔಚಿತ್ಯ ೪೦
– ಎನ್. ಎಚ್. ಶಿವಗಂಗಮ್ಮ

೭. ಕರ್ನಾಟಕ ಕವಿರತ್ನ ಹೊಸಕೆರೆ ಚಿದಂಬರಯ್ಯ–ಗ್ರಂಥಪರಿಚಯ ೪೬
– ಪ್ರೊ॥ ಎಸ್. ಬಿಳಿಗಿರಿ ವಾಸನ್

೮. ಉದ್ಘಾಟನಾ ಭಾಷಣ–
೨ನೇ ರಾಷ್ಟ್ರೀಯ ಹಸ್ತಪ್ರತಿ ಸಮಾವೇಶ–ಶ್ರೀರಾಮಚಂದ್ರಾಪುರ ೫೦
– ಪ್ರೊ॥ ಎನ್. ಬಸವಾರಾಧ್ಯ

೯. ಎರಡು ಟಿಪ್ಪಣಿಗಳು ೫೬
– ಪ್ರೊ॥ ಸಿ. ಮಹಾದೇವಪ್ಪ

೧೦. ಸಿದ್ಧವನದಲ್ಲಿ ಸಾರ್ಥಕತೆ ಕಂಡ ರಾಷ್ಟ್ರೀಯ ಹಸ್ತಪ್ರತಿ ಸಮಾವೇಶ ೬೧
– ಡಾ॥ ಕೆ. ಎಸ್. ಎನ್. ಉಡುಪ

೧೧. ಲಿಂ. ಟಿ. ಎನ್. ಮಹಾದೇವಯ್ಯನವರ ಬದುಕು–ಬರಹ ೬೪
– ಹೀ. ಚಿ. ಶಾಂತವೀರಯ್ಯ

೧೨. ಶ್ರೀ ಉತ್ಸವ ೭೫
– ಪ್ರೊ॥ ಎಲ್.ಎಸ್. ಶೇಷಗಿರಿರಾವ್

೧೩. ಮೈದುನ ರಾಮಯ್ಯನ ಕಥೆ ೮೧
– ಪ್ರೊ॥ ಜೆ. ಅಬ್ದುಲ್ ಬಷೀರ್

ಕರ್ನಾಟಕ ಲೋಚನ
ಸಂಪುಟ ೨೬, ಸಂಚಿಕೆ ೧–೨
ಜನವರಿ–ಡಿಸೆಂಬರ್

೧. ವಿಜಯದಾಸರು

–ಪ್ರೊ॥ ಡಿ. ಲಿಂಗಯ್ಯ

ಕಾಲ 1682–1755. ಹರಿದಾಸ ಪರಂಪರೆಯನ್ನು ಮುಂದುವರಿಸಿದವರಲ್ಲಿ ಅಗ್ರಗಣ್ಯರು; ಹಾಗೆಯೇ ಕೀರ್ತನ ರಚನೆಯನ್ನು ಮುಂದುವರಿಸಿದವರಲ್ಲಿ ಕೂಡ.

ಹದಿನೇಳನೇ ಶತಮಾನದಲ್ಲಿ ಹುಟ್ಟಿದ ವಿಜಯದಾಸರು ಹದಿನೆಂಟನೇ ಶತಮಾನದಲ್ಲಿ ಗಮನಾರ್ಹವಾದ ಸಾಧನೆಯನ್ನು ಮಾಡಿದರು. ಇವರು ಎಪ್ಪತ್ತಮೂರು ವರ್ಷ ಬದುಕಿದ್ದರು. ಜೀವನದ ಸುಮಾರು ಅರ್ಧದಷ್ಟು ಕಾಲ ಹರಿದಾಸ ಪರಂಪರೆಯ ಪುನರುದ್ಧಾರಕ್ಕೆ ಶ್ರಮಿಸಿದರು. ಸಮಕಾಲೀನರು ಹಾಗೂ ಅನಂತರದವರು–ದಾಸ ಪರಂಪರೆಯ ನಿಷ್ಠರು, ಭಕ್ತರು, ಅಭಿಮಾನಿಗಳು–ಅವರನ್ನು ದಾಸಶ್ರೇಷ್ಠರ ಸಮಾನವಾಗಿ ಕಂಡು ಕೊಂಡಾಡಿದ್ದಾರೆ. ವಾದಿರಾಜರಿಗಿಂತಲೂ ಸರ್ವಶ್ರೇಷ್ಠರೆಂಬ ನಂಬಿಕೆಯೂ ಇದೆ. ಒಟ್ಟಿನಲ್ಲಿ ಹರಿದಾಸ ಪ್ರಾಜ್ಞರಲ್ಲಿ ಗಮನಾರ್ಹ ಮಹನೀಯರೆಂಬುದರಲ್ಲಿ ಸಂಶಯವಿಲ್ಲ. ಅಂದಿನ ಭಕ್ತಕುಲವನ್ನು ಬಹಳವಾಗಿ ಆಕರ್ಷಿಸಿದ್ದವರಲ್ಲಿ ವಿಜಯದಾಸರೂ ಒಬ್ಬರಾಗಿದ್ದರು. ಒಂದು ಶ್ಲೋಕ ಹೀಗಿದೆ :

ನಮಃ ಶ್ರೀಪಾದರಾಜಾಯ ನಮಸ್ತೇ ವ್ಯಾಸಯೋಗಿನೇ
ನಮಃ ಪುರಂದರಾರ್ಯಾಯ ವಿಜಯಾರ್ಯಾಯ ತೇ ನಮಃ

–ಅಜ್ಞಾತ ಕವಿ

ಕನ್ನಡ ಹರಿದಾಸ ಸಂಸ್ಕೃತಿಯ ಪ್ರಮುಖರು : ಶ್ರೀಪಾದರಾಯ, ವ್ಯಾಸರಾಯ, ಪುರಂದರದಾಸ ಮತ್ತು ವಿಜಯದಾಸರು. ಅವರಿಗೆ ನಮಸ್ಕಾರ.

ಆಧ್ಯಾತ್ಮಕ ಸಾಹಿತ್ಯದ ಆದಿ ಪ್ರವರ್ತಕರು ಶ್ರೀಪಾದರಾಜರು. ಅದನ್ನು ಸುವ್ಯವಸ್ಥೆಗೊಳಿಸಿದವರು ವ್ಯಾಸರಾಜರು. ಅಪಾರ ಕೀರ್ತಿ ಗಳಿಸಿದವರು ಪುರಂದರ ದಾಸರು. ಹರಿದಾಸ ಪರಂಪರೆಯನ್ನು ಪುನರುಜ್ಜೀವನಗೊಳಿಸಿದವರು ವಿಜಯದಾಸರು. ಇವರು ಹರಿದಾಸ ಭಕ್ತಿಪಂಥದ ಹರಿಕಾರರು.

ಶ್ರೀ ಮಧ್ವಾಚಾರ್ಯರ ಶಿಷ್ಯರಾದ ನರಹರಿತೀರ್ಥರಿಂದ ಕನ್ನಡ ಹರಿದಾಸ ಸಾಹಿತ್ಯ ಅಥವಾ ಕೀರ್ತನ ಸಾಹಿತ್ಯ ಪ್ರಾರಂಭವಾಯಿತು. ನರಹರಿತೀರ್ಥರು ಕ್ನಡದಲ್ಲಿ ಕೀರ್ತನೆಗಳನ್ನು ರಚಿಸಿದರೂ ಅವರಿಗೆ ಹರಿದಾಸ ಪಂಥದ ಬೆಳವಣಿಗೆಯಲ್ಲಿ ಅಷ್ಟಾಗಿ ಆಸಕ್ತಿ ಇರಲಿಲ್ಲವೆಂದು ಹೇಳುತ್ತಾರೆ. ಆಧ್ಯಾತ್ಮಿಕ ತತ್ವವಿಚಾರಗಳ ಶಾಸ್ತ್ರವ್ಯಾಸಂಗ ಕನ್ನಡಕ್ಕಿಂತ ಸಂಸ್ಕೃತ ಭಾಷೆಯಲ್ಲೇ ಇರಬೇಕೆಂಬ ಭಾವನೆ ಅವರಿಗೆ ಇದ್ದಂತೆ ಕಾಣುತ್ತದೆ. ಆದ್ದರಿಂದ ಅವರ ಕಾಲದಲ್ಲಿ ಹೆಚ್ಚು ಕನ್ನಡ ಕೀರ್ತನೆಗಳು ರಚನೆಯಾಗಲಿಲ್ಲ. ಮಧ್ವ ಪರಂಪರೆಯ ಪೀಠಾಧಿಕಾರಿಗಳೆಲ್ಲ ಸಂಸ್ಕೃತ ಪಂಡಿತರು. ಸಂಸ್ಕೃತದಲ್ಲೇ ಪೂಜೆ ಪುರಸ್ಕಾರ, ಶಾಸ್ತ್ರಗ್ರಂಥ ರಚನೆ, ವ್ಯಾಖ್ಯಾನ, ವಿಶ್ಲೇಷಣೆ, ಪಠನ ಮೊದಲಾದವು ನಡೆಯುತ್ತಿದ್ದವು. ಗೀರ್ವಾಣ ಭಾಷೆ ಮುಖ್ಯವಾಗಿತ್ತು. ಕನ್ನಡ ಭಾಷೆ ಗೌಣವಾಗಿತ್ತು. ಆ ಕಾಲಕ್ಕೆ ಸಂಸ್ಕೃತ ಭಾಷೆ ಜನಸಾಮಾನ್ಯರಿಗೆ ಭಯಾನಕವಾಗಿತ್ತು. ಬ್ರಾಹ್ಮಣರು ಮಾತ್ರ ಪುರಸ್ಕೃತರಾಗುತ್ತಿದ್ದರು. ಇತರರು ಪ್ರೇಕ್ಷಕರು ಮಾತ್ರ. ಬ್ರಾಹ್ಮಣರ ರಕ್ಷಣೆಗೆ ಸಂಸ್ಕೃತ, ಬ್ರಾಹ್ಮಣ ಮಠ, ಮಧ್ವ ಸಂಸ್ಥೆಗಳು ನಿರತವಾಗಿದ್ದವು.

ಆಗ ಪ್ರಾದೇಶಿಕ ಭಾಷೆ ಕನ್ನಡ ಅಷ್ಟೊಂದು ಮನ್ನಣೆಗೆ ಪಾತ್ರವಾಗಿರಲಿಲ್ಲ. ಧಾರ್ಮಿಕ ವಿಧಿ ವಿಧಾನ ಆಚರಣೆ ಅನುಸರಣೆಗೆ ಸಂಸ್ಕೃತವೇ ಮುಂದಾಗುತ್ತಿತ್ತು. ಭಕ್ತಕೋಟಿಗೆ, ಜನಸಾಮಾನ್ಯರಿಗೆ ತಿಳಿಯಲಿ ತಿಳಿಯದಿರಲಿ ಸಂಸ್ಕೃತವೇ ಪೂಜಾದಿಗಳಲ್ಲಿ ವಿಜೃಂಭಿಸುತ್ತಿತ್ತು. ತಾತ್ತ್ವಿಕ ವಿಚಾರ ಬರಹಕ್ಕೂ ಅದೇ ಬಳಕೆಯಾಯಿತು. ಕನ್ನಡ ಭಾಷೆ ಹಿಂದೆ ಉಳಿಯಿತು.

ಶ್ರೀ ವಿಜಯದಾಸರ ಹುಟ್ಟು ಹೆಸರು ದಾಸಪ್ಪ. ಇವರ ಜನನ ಕ್ರಿ.ಶ. 1682. ಉತ್ತರ ಕರ್ನಾಟಕದ ರಾಯಚೂರು ಜಿಲ್ಲೆಯ ಮಾನವಿ ತಾಲ್ಲೂಕಿನ 'ಚೀಕನಪರವಿ' ಗ್ರಾಮ. ತಂದೆಯ ಹೆಸರು : ಶ್ರೀನಿವಾಸಪ್ಪ. ತಾಯಿಯ ಹೆಸರು : ಕೂಸಮ್ಮ. ಬ್ರಾಹ್ಮಣರ ಮನೆತನದ ಮಾಧ್ವ ದಂಪತಿಗಳ ಮಗ. ಭಾರದ್ವಾಜ ಗೋತ್ರದ ಋಕ್ ಶಾಖೆಗೆ ಸೇರಿದವರು. ಬಡ ವೈಷ್ಣವರು.

ಬಾಲ್ಯದಲ್ಲಿ ಬಡತನದ ಜೀವನ. ನಿತ್ಯದ ಗಂಜಿಗೂ ತೊಂದರೆ. ಹೆಚ್ಚು ವಿದ್ಯಾಭ್ಯಾಸ ನಡೆಯಲಿಲ್ಲ. ಬ್ರಹ್ಮೋಪದೇಶವಾದ ಮೇಲೆ 'ಅರಳಮ್ಮ' ಎಂಬ ಬಾಲಿಕೆಯೊಡನೆ ಮದುವೆ. ದಾರಿದ್ರ್ಯ ಕಳೆಯಲಿಲ್ಲ.

ಸಂಸಾರ ನೀಸಲು ಆಗದೆ, ಮನೆಯಲ್ಲಿ ಯಾರಿಗೂ ತಿಳಿಸದೆ, ಹದಿನಾರನೇ ವಯಸ್ಸಿನಲ್ಲಿ ಮನೆಯನ್ನು ಬಿಟ್ಟು ಹೊರಟುಹೋದ. ಆಕಸ್ಮಿಕ ಅಲೆದಾಟದಿಂದ ತೀರ್ಥ ಕ್ಷೇತ್ರ ಪರ್ಯಟನೆ ಮಾಡಿದ. ನಾಲ್ಕು ವರ್ಷ ಅಲೆದು ಇಪ್ಪತ್ತನೇ ವಯಸ್ಸಿಗೆ ಮನೆಗೆ ಬಂದ.

ಮನೆಗೆ ಬಂದ ದಾಸಪ್ಪ ಶ್ರೀಹರಿಯ ಕೃಪೆಯಿಂದ ಹದಿನೆಂಟು ಹಳ್ಳಿಗಳಿಗೆ ಶಾನುಭೋಗರಾದರು. ಹನ್ನೆರಡು ವರ್ಷ ಆ ಕಾರ್ಯ ನಿರ್ವಹಿಸಿದರು. ಸರಕಾರದ ಹಣದ ಲೆಕ್ಕ ತಪ್ಪಿ ಆಪಾದನೆ ಹೊರಬೇಕಾಯಿತು. ಕೆಲಸ ಬಿಟ್ಟರು. ಅದೇ ಕಾಲಕ್ಕೆ ತಂದೆ

ತೀರಿಕೊಂಡು, ಸಂಸಾರದ ಹೊರೆ ಅಧಿಕವಾಯಿತು. ಸಂಸಾರದಲ್ಲಿ ಬೇಸರ ಬಂತು. ಮತ್ತೆ ಮನೆಯನ್ನು ತ್ಯಜಿಸಿ ಗಂಗಾನದಿಯ ಕಡೆಗೆ ಹೊರಟರು. ಅವರು ಕಾಶಿಯ ಕಡೆಗೆ ಹೊರಟಾಗ ಅವರಿಗೆ ಮೂವತ್ತೆರಡನೇ ವಯಸ್ಸು. (ಕ್ರಿ.ಶ. 1714).

ದಾಸಪ್ಪ ಕಾಶಿಯಲ್ಲಿದ್ದಾಗ ಒಮ್ಮೆ ಅದ್ಭುತವಾದ ಕನಸು ಕಂಡರು. ಶ್ರೀ ಪುರಂದರದಾಸರು ಕಾಣಿಸಿಕೊಂಡು, ದಾಸಪ್ಪನನ್ನು ಕರೆದುಕೊಂಡು ಹೋಗಿ ಶ್ರೀ ವೇದವ್ಯಾಸರ ದರ್ಶನ ಮಾಡಿಸಿದರು. ಮಧ್ವ ತತ್ವಶಾಸ್ತ್ರದ ಉಪದೇಶವಾಯಿತು. ಪುರಂದರದಾಸರು ತಂಬೂರಿ, ತಾಳ, ಗೆಜ್ಜೆಕೊಟ್ಟು "ವಿಜಯ ವಿಠ್ಠಲ" ಎಂದು ಅಂಕಿತವನ್ನು ನೀಡಿದರು. ಅಂದಿನಿಂದ 'ದಾಸಪ್ಪ' 'ವಿಜಯವಿಠ್ಠಲ' ಅಂಕಿತದಿದ ವಿಜಯದಾಸರೆಂದು ಹೆಸರಾದರು.

ಪುರಂದರದಾಸರಿಗೂ ವಿಜಯದಾಸರಿಗೂ ಒಂದುನೂರ ಐವತ್ತು ವರ್ಷಗಳ ಅಂತರವಿದೆ. ಆದರೂ ಸ್ವಪ್ನದಲ್ಲಿ ಅಂಕಿತೋಪದೇಶವಾಯಿತು. ಅನಂತರ ವಿಜಯದಾಸರು ಹರಿದಾಸ ತತ್ವ ಪ್ರಚಾರಕ್ಕೆ ತೊಡಗಿದರು. ಸಂಸಾರಕ್ಕೆ ನೇರ್ಪು ಮಾಡಿದರೂ ಸಂಸಾರಕ್ಕೆ ಅಂಟಿಕೊಳ್ಳಲಿಲ್ಲ. ಅನಂತರದ ಅವರ ಜೀವನ ವೃತ್ತಾಂತಗಳು ಕರಾರುವಕ್ಕಾಗಿ ಅಧಿಕ ಪ್ರಮಾಣದಲ್ಲಿ ದಾಖಲೆಯಾಗಿಲ್ಲ. ಅವರ ಹೆಂಡತಿ ಮಕ್ಕಳು, ಸಂಸಾರ, ಪೀಠಾರೋಹಣ ಮೊದಲಾದವುಗಳ ಸ್ಪಷ್ಟ ಚಿತ್ರಣವಿಲ್ಲ. ದಿನ ಕಳೆದಂತೆ ಶ್ರೀ ವಿಜಯದಾಸರು ತತ್ತ್ವಾಭಿಮುಖಿಯಾದರು. ಉಪನಿಷತ್ತು, ಪುರಾಣ, ಶಾಸ್ತ್ರಗಳಲ್ಲಿ ತನ್ಮಯರಾದರು. ಶ್ರೀಹರಿಯ ವಿಶಿಷ್ಟ ಗುಣಗಳಿಗೆ ಮಾರುಹೋಗಿ ಭಾವಪರವಶರಾಗುತ್ತಿದ್ದರು. ದೇವರನ್ನು ಕುರಿತು ಆಶುಕವಿತೆಗಳನ್ನು ಕಟ್ಟಿದರು.

ಶಿಷ್ಯರನ್ನು ಗಳಿಸಿದರು. ಗುರುಪೀಠವನ್ನು ಏರಿದರು. ಬಡತನದ ಬವಣೆ ತಪ್ಪಿ ಸುಖದ ದಿನ ಕಾಣಿಸಿಕೊಂಡವು. ಅವರ ತತ್ತ್ವೋಪದೇಶ, ಔದಾರ್ಯ, ಆಯುರ್ದಾನ, ಪವಾಡ ಸದೃಶ ಕಾರ್ಯಗಳಿಂದ ಅನೇಕರು ಶಿಷ್ಯರಾದರು. ಅವರಲ್ಲಿ ತಿಮ್ಮಣ್ಣ ಮಂತ್ರಿಯೂ ಒಬ್ಬ. ಭಾಗಣ್ಣ, ಗೋಪಣ್ಣ ಎನ್ನುವವರೂ ಸೇರಿದ್ದಾರೆ.

ಬ್ರಾಹ್ಮಣತಿಯೊಬ್ಬಳ ಕಜ್ಜಿಹತ್ತಿದ ಮಗುವನ್ನು ಸಾಕುಮಗನನ್ನಾಗಿ ಪಡೆದು ಆರೈಕೆ ಮಾಡಿ ದಾಸದೀಕ್ಷೆ ನೀಡಿದರು. 'ಮೋಹನ' ಎಂದು ಹೆಸರಿಟ್ಟು, 'ಮೋಹನ ವಿಠ್ಠಲ'ನೆಂದು ಅಂಕಿತೋಪದೇಶ ಮಾಡಿದರು. ಮೋಹನದಾಸರನ್ನು ಅಪಮೃತ್ಯುವಿನಿಂದ ಬದುಕಿಸಿದರು. ವಿಜಯದಾಸರ ಹೆಸರಿನೊಡನೆ ಕೆಲವು ಪವಾಡಗಳು ತಳಕುಹಾಕಿಕೊಂಡಿವೆ.

ಶ್ರೀ ವಿಜಯದಾಸರು ದಕ್ಷಿಣ ಭಾರತದ ಮನ್ನಾರ್‌ನಲ್ಲಿ ಶ್ರೀಕೃಷ್ಣ ದರ್ಶನ ಪಡೆದರು ಎಂಬ ಪ್ರತೀತಿಯೂ ಉಂಟು. ಅವರು ಅನೇಕ ತೀರ್ಥ ಕ್ಷೇತ್ರಗಳನ್ನು ಸಂದರ್ಶಿಸಿರುವ ಬಗೆಗೆ ಅವರ ಹಾಡುಗಳಲ್ಲಿ ಆಧಾರಗಳಿವೆ.

ಶ್ರೀ ವಿಜಯದಾಸರು ತಮ್ಮ ತಪೋಬಲವನ್ನು ಪರೋಪಕಾರಕ್ಕೆ ಬಳಿಸಿದರು. ಇದಕ್ಕೆ ಸಂಬಂಧಿಸಿದಂತೆ ಅನೇಕ ದಂತ ಕಥೆಗಳು ಪ್ರಚಾರದಲ್ಲಿವೆ. ಬೇಡಿಕೊಂಡ ಬ್ರಾಹ್ಮಣರಿಗೆ, ಪಂಡಿತರಿಗೆ ಆಯುರ್ದಾನ ಕೊಡುವುದು; ಇತರರಿಂದ ಆಯುರ್ದಾನ ಕೊಡಿಸುವುದು; ಕಾಯಿಲೆ ಕಸಾಲೆ, ಮಾರಕರೋಗ ಬಂದವರಿಗೆ, ಶ್ರೀಹರಿಯ ಪ್ರಾರ್ಥನೆಯಿಂದ ಗುಣಪಡಿಸುವುದು; ಸಂಕಲ್ಪಿಸಿದಂತೆ ಸಹಾಯ ಮಾಡುವುದು ಕಂಡುಬಂದಿದೆ. ಇದೆಲ್ಲಾ ಪರೋಪಕಾರದ ಹಿನ್ನೆಲೆಯಲ್ಲಿ ನಡೆದಿದೆ. ಅವರ ಲೋಕಹಿತ ಭಾವನೆಯಲ್ಲಿ ಔದಾರ್ಯವಿದೆ. ಆದರೆ ಅದು ಬ್ರಾಹ್ಮಣರಿಗೆ ಮಾತ್ರ ಸೀಮಿತವಾಗಿರುವುದು ಅವರ ಸಂಕುಚಿತ ದೃಷ್ಟಿಗೆ ಸೂಚನೆಯಾಗಿದೆ. ಇದು ಅವರ ತಪೋಶಕ್ತಿಯ ಮಿತಿಯೂ ಹೌದು. ಸ್ವಜಾತಿ ರಕ್ಷಣೆಗೆ ಮಾತ್ರ ತಪೋಬಲವನ್ನು ಬಳಸಿರುವುದು ಕಂಡುಬರುತ್ತದೆ. ಹರಕೆಯ ಭೋಜನಗಳೂ ಬ್ರಾಹ್ಮಣರಿಗೆ ಮೀಸಲಾಗಿರುವುದು ವಿಚಿತ್ರವಾಗಿ ಕಾಣುತ್ತದೆ. ಆ ಕಾಲಕ್ಕೆ ಈ ನಿಯಮಗಳನ್ನು ಮೀರುವುದು ಸಾಧ್ಯವಿರಲಿಲ್ಲವೆಂದು ಭಾವಿಸಬೇಕಾಗುತ್ತದೆ. ಅಂದು ಮಠ, ಮಠಾಧೀಶರು ನಿರ್ದಿಷ್ಟವರ್ಗದ ಉದ್ಧಾರಕ್ಕೆ ಶ್ರಮಿಸುವುದು ಅನಿವಾರ್ಯವಾಗಿರಬಹುದು.

ಶ್ರೀ ವಿಜಯದಾಸರು ಭೃಗುಮಹರ್ಷಿಗಳ ಅವತಾರವೆಂದು, ಅವರ ಸಾಕು ಮಗ ಶ್ರೀ ಮೋಹನದಾಸರು ಹೇಳಿದ್ದಾರೆ.

ಶ್ರೀ ವಿಜಯದಾಸರು ಶ್ರೀಮನ್ಮಧ್ವ ಸಿದ್ಧಾಂತದ ಸಾರವನ್ನು ಕನ್ನಡದಲ್ಲಿ, ಸುಳಾದಿಯ ರೂಪದಲ್ಲಿ, ವಿವರವಾಗಿ ನೀಡಿದರು. ಈ ನೆಪದಲ್ಲಿ ಕನ್ನಡ ಭಾಷೆಯನ್ನು ಬಳಸಿದ್ದು ವಿಶೇಷ. ಅವರ ಕೃತಿಗಳಲ್ಲಿ ಭಕ್ತನ ಮೊರೆ ಅಧಿಕವಾಗಿದೆ. ಅಪಾರ ಶಿಷ್ಯ ಸಂಪತ್ತನ್ನು ಗಳಿಸಿದರು. ಅವರಿಂದ ಅಂಕಿತ ಪಡೆದ ಶಿಷ್ಯರು ಅರವತ್ತಕ್ಕೂ ಹೆಚ್ಚು.

ಉತ್ತಮ ಸಾಮಾಜಿಕ, ಸಾಹಿತ್ಯಿಕ, ತಾತ್ವಿಕ ದೃಷ್ಟಿಯ ಕೃತಿಗಳನ್ನು ರಚಿಸಿದರು. ಇಂಥವುಗಳ ಸಂಖ್ಯೆ ಸಾವಿರಾರು. ಹದಿನೆಂಟನೇ ಶತಮಾನದಲ್ಲಿ ಹರಿದಾಸ ಸಾಹಿತ್ಯ ಶ್ರೀಮಂತವಾಗಿ ಮುಂದುವರಿಯಲು ಶ್ರಮಿಸಿದರು. ಹರಿದಾಸ ಚರಿತ್ರೆಯಲ್ಲಿ ಇದು ಗಮನಾರ್ಹ ಅಂಶವಾಗಿದೆ.

ಮೂವತ್ತೆರಡು ಅಕ್ಷರಗಳ ಸಮೂಹಕ್ಕೆ ಒಂದು ಗ್ರಂಥವೆನ್ನುವರು. ಇಂತಹ 75,000 ಗ್ರಂಥಗಳನ್ನು ವಿಜಯದಾಸರು ರಚಿಸಿದ್ದಾರೆ ಎಂದು ಹೇಳಲಾಗಿದೆ. ಎಲ್ಲವೂ ಸಿಕ್ಕಿಲ್ಲ. ಶಿಷ್ಯರು ನೆನಪಿಟ್ಟುಕೊಂಡಷ್ಟು, ಅನಂತರ ಬರಹದಲ್ಲಿ ದಾಖಲಿಸಿದಷ್ಟು ಲಭ್ಯವಾಗಿವೆ. ಹರಿದಾಸರು ಆಶುಕವಿಗಳು. ತಾವೇ ಸ್ವತಃ ಕುರಿತು ಬರೆದದ್ದು ಇಲ್ಲ ಅಥವಾ ಕಡಮೆ. ಕೇಳಿದವರು ಬರೆದದ್ದೇ ಹೆಚ್ಚು.

ಹರಿದಾಸ ಚತುಷ್ಟಯರು : ಪುರಂದರದಾಸ, ವಿಜಯದಾಸ, ಗೋಪಾಲದಾಸ, ಜಗನ್ನಾಥದಾಸ. ಇದು ಸಂಪ್ರದಾಯಸ್ಥರ ಹೇಳಿಕೆ. ಈ ಗುಂಪಿನಲ್ಲಿ

ಕನಕದಾಸರ ಹೆಸರು ಇಲ್ಲ. ಬಹುಶಃ ಅವರು ಶೂದ್ರರಾಗಿದ್ದುದರಿಂದ, ಅವರಲ್ಲಿ ಮಧ್ವತತ್ವ ವಿಚಾರಕ್ಕಿಂತ ಶ್ರೀವೈಷ್ಣವ ತತ್ವ ವಿಚಾರ ಅಧಿಕವಾಗಿರುವುದರಿಂದ ಸಂಪ್ರದಾಯಸ್ಥರು ಅಥವಾ ಬ್ರಾಹ್ಮಣದಾಸರು ಕನಕದಾಸರನ್ನು ಸಮಾನತೆಯಿಂದ ಪರಿಗಣಿಸಿಲ್ಲವೆಂದು ಕಾಣುತ್ತದೆ. ಜಾತಿ ತಾರತಮ್ಯ ವೈದಿಕ ವಿಚಾರವಂತರನ್ನೂ ಬಿಟ್ಟಿಲ್ಲ. ಸ್ವಜಾತಿ ರಕ್ಷಣೆ, ಹೊಗಳಿಕೆ ಪ್ರಧಾನವಾದಾಗ ಇಂತಹ ತಪ್ಪುಗಳು ಸಂಭವಿಸುತ್ತವೆ. ಧಾರ್ಮಿಕ ಕ್ಷೇತ್ರದಲ್ಲಿ ಇಂತಹ ಉದಾಹರಣೆಗಳು ಸಾಕಷ್ಟು ದೊರೆಯುತ್ತವೆ. ಹಿಂದೂ ಧರ್ಮದಲ್ಲಿ ಒಗ್ಗಟ್ಟು ಇಲ್ಲದಿರುವುದಕ್ಕೆ, ಹಿಂದೂ ಧರ್ಮವನ್ನು ಎಲ್ಲರೂ ಸಮಾನ ಮನಸ್ಕರಾಗಿ ಅನುಸರಿಸದೆ ಇರುವುದಕ್ಕೆ, ಸನಾತನ ಹಿಂದೂ ಧರ್ಮದ ಮಹತ್ವ ಎಲ್ಲರಿಗೂ ತಲುಪದೆ ಇರುವುದಕ್ಕೆ ಹಿಂದೂ ಧರ್ಮದ ಮುಂಚೂಣಿಯಲ್ಲಿದ್ದವರೇ ಕಾರಣರಾಗಿರುವುದು ಸುಳ್ಳಲ್ಲ. ಧರ್ಮವನ್ನು ಕೆಲವೇ ಜನರು ಪಾಲುಮಾಡಿಕೊಳ್ಳಬಾರದು. ವೈದಿಕ ಧರ್ಮವೇ ಹಿಂದೂ ಧರ್ಮವಲ್ಲ; ಹಿಂದೂ ಧರ್ಮದಲ್ಲಿ ವೈದಿಕ ಧರ್ಮವೂ ಒಂದು ಎಂಬುದು ಮುಖ್ಯ.

ಶ್ರೀ ವಿಜಯದಾಸರು ಅಪಾರ ಸಂಖ್ಯೆಯ ಕೀರ್ತನೆ, ಉಗಾಭೋಗ ಮತ್ತು ಸುಳಾದಿಗಳನ್ನು ರಚಿಸಿದ್ದಾರೆ. ಅಧಿಕ ಸಂಖ್ಯೆಯ ಸುಳಾದಿಗಳನ್ನು ಬರೆದಿರುವುದರಿಂದ ಅವರನ್ನು 'ಸುಳಾದಿಗಳ ದಾಸ'ರೆಂದೇ ಕರೆಯುವುದು ರೂಢಿಯಾಗಿದೆ. ಒಂದು ಸಾವಿರಕ್ಕೂ ಮೇಲ್ಪಟ್ಟು ಅವರ ಕೃತಿಗಳು ಲಭ್ಯವಾಗಿವೆ. ಸಂಸ್ಕೃತ ವೇದಾಂತ ಗ್ರಂಥಗಳಲ್ಲಿ ತುಂಬಿಕೊಂಡಿದ್ದ ಸನಾತನವಾದ ಆಧ್ಯಾತ್ಮಿಕ ವಿಚಾರಗಳನ್ನು ಕನ್ನಡ ಭಾಷೆಯಲ್ಲಿ ಅಭಿವ್ಯಕ್ತಿಸಿದವರಲ್ಲಿ ವಿಜಯದಾಸರು ಅದ್ವಿತೀಯರಾಗಿದ್ದಾರೆ. ಹಾಗಾಗಿ ಕನ್ನಡ ಭಾಷಿಕರಿಗೆ ಹೆಚ್ಚು ಪ್ರಿಯರಾಗಿದ್ದಾರೆ.

ವಿಜಯದಾಸರ ಕೃತಿಗಳು ರಾಗ, ತಾಳ, ಲಯಬದ್ಧವಾಗಿವೆ. ಇವು ಸರಳವಾದ, ಸುಂದರವಾದ, ಶೈಲಿಯಲ್ಲಿ ರಚನೆಯಾಗಿವೆ; ಓದಲು, ಹಾಡಲು, ತತ್ವದರ್ಶನ ಪಡೆಯಲು ಅನುವಾಗಿವೆ. ಹಾಗಾಗಿ ಆಸ್ತಿಕ ಜನರನ್ನು ಆಕರ್ಷಿಸಿವೆ.

ಹಾಗೆ ನೋಡಿದರೆ ವಿಜಯದಾಸರು ಕನ್ನಡ ಹರಿದಾಸ ಕೀರ್ತನಗಳ ಪರಂಪರೆಯನ್ನು–ಸಂಖ್ಯೆ ಹಾಗೂ ಸತ್ವದಲ್ಲಿ–ಯಶಸ್ವಿಯಾಗಿ ಮುದುವರಿಸಿದರು, ಶ್ರೀಮಂತಗೊಳಿಸಿದರು ಎಂದು ಧಾರಾಳವಾಗಿ ಹೇಳಬಹುದು. ಹಿಂದಿನ ದಾಸ ಶ್ರೇಷ್ಠರಿಗಿಂತ ಹೆಚ್ಚು ಪಾತ್ರರಾಗಲು ಇದೂ ಒಂದು ಪ್ರಮುಖ ಕಾರಣವಾಗಿದೆ.

ಹರಿದಾಸ ಸಾಹಿತ್ಯ ಹಾಗೂ ಸಂಗೀತಕ್ಕೆ ಅದರದೇ ಆದ ಸ್ಥಾನ, ಮಾನ, ಇತಿಹಾಸವಿದೆ. ಸಾಹಿತ್ಯ ಪ್ರಸಾರಕ್ಕೆ ಸಂಗೀತವನ್ನು ವಿಶೇಷವಾಗಿ ಬಳಸಿದವರು ಕನ್ನಡ ಹರಿದಾಸರು. ಇದರಿಂದ ಕರ್ನಾಟಕ ಸಂಗೀತ ಅಸ್ತಿತ್ವಕ್ಕೆ ಬಂತು.

ದೇವರಿಗೆ ಸಲ್ಲಿಸುವ ಷೋಡಶ ಪೂಜೆಗಳಲ್ಲಿ ಸಂಗೀತವೂ ಒಂದು. ಧ್ಯಾನ, ಯಜ್ಞ, ಅರ್ಚನೆಗಿಂತ ಸಿರಿಸಂಗೀತದಿಂದ ಅಥವಾ ಗಾನದಿಂದ ದೇವರನ್ನು ಸುಲಭವಾಗಿ ಒಲಿಸಿಕೊಳ್ಳಬಹುದೆಂದು ಶ್ರೀಪಾದರಾಜರು ಹಾಡಿದ್ದಾರೆ. ಶಿವದಾಸರ

'ಸ್ವರ ವಚನ'ಗಳೂ ಗೇಯ ಗೀತೆಗಳೆಂದು ಹೆಸರಾಗಿವೆ. ಗಾಯನ ಎಲ್ಲರನ್ನೂ ಸುಲಭವಾಗಿ ಆಕರ್ಷಿಸುತ್ತದೆ. ಇದರಿಂದ ಭಕ್ತಿಸಾಹಿತ್ಯ ವಿಪುಲವಾಗಿ ಸೃಷ್ಟಿಯಾಗಲು, ಬೆಳೆಯಲು ಕಾರಣವಾಗಿದೆ.

ಕನ್ನಡ ಸಾಹಿತ್ಯದ ಸಮೃದ್ಧ ಇತಿಹಾಸದಲ್ಲಿ ಅಭಿವ್ಯಕ್ತಿ ಮಾಧ್ಯಮದಲ್ಲಿ ಶಿವದಾಸರು ಮತ್ತು ಹರಿದಾಸರು ಕನ್ನಡ ಭಾಷೆಯನ್ನು–ಅದರಲ್ಲೂ ಜನಸಾಮಾನ್ಯರ ಆಡು ಭಾಷೆಯನ್ನು–ಅಧಿಕ ಪ್ರಮಾಣದಲ್ಲಿ ಬಳಸಿರುವುದು ಇತಿಹಾಸ ಸತ್ಯವಾಗಿದೆ. ಇದರಿಂದ ತಿಳಿಗನ್ನಡದ ಅಂತಃಸತ್ವ, ಧ್ವನಿಪ್ರಚುರತೆ ಎಷ್ಟೊಂದು ಸತ್ವಶಾಲಿಯಾದುದು, ಅರ್ಥಪೂರ್ಣವಾದುದು ಎಂಬುದು ವೇದ್ಯವಾಗುತ್ತದೆ.

ಹರಿದಾಸ ಸಂಗೀತದಲ್ಲಿ ಕೃತಿ, ಕೀರ್ತನೆ, ಪದಗಳು ರೂಢಿಯಲ್ಲಿವೆ.

ಕೀರ್ತನೆ

ಭಕ್ತಿ ಪ್ರಧಾನವಾದ ಸಂಗೀತ ರೂಪ. ಪಲ್ಲವಿ, ಅನುಪಲ್ಲವಿ ಮತ್ತು ಚರಣ (ಪಲ್ಲವಿ–ಚರಣ)ಗಳಿಂದ ಕೂಡಿರುತ್ತದೆ. ಕೀರ್ತನೆಯಲ್ಲಿ ಚರಣ ಪ್ರಧಾನ ಭಾಗ. ಚರಣಗಳಲ್ಲಿ ಸಾಹಿತ್ಯ ಮುಖ್ಯ.

ಕೃತಿ

ಇದರಲ್ಲಿ ಸಾಹಿತ್ಯಕ್ಕಿಂತ ಸಂಗೀತ ಪ್ರಾಧಾನ್ಯ. ಮಾತಿಗಿಂತ ಧಾತುವಿಗೆ ಹೆಚ್ಚು ಪ್ರಾಶಸ್ತ್ಯ. ಕೀರ್ತನೆ ಕೃತಿಯ ಮೂಲರೂಪ.

ಪದ

ಮುಖ್ಯವಾಗಿ ಭಕ್ತಿಗೀತೆ. ಇದರಲ್ಲಿ ಮಧುರ ಭಕ್ತಿ ಮತ್ತು ನಾಯಕ ನಾಯಕಿ ಭಕ್ತಿ ಭಾವ ಅಧಿಕ. ಕನ್ನಡದಲ್ಲಿ ಭಕ್ತಿ ಸಾಮ್ರಾಜ್ಯ ದೊಡ್ಡದು.

ಎಲ್ಲದರಲ್ಲೂ ಭಕ್ತಿ ಭಾವ ಮುಖ್ಯ. ಅದರ ಪ್ರತಿಪಾದನೆಗೆ ಪಲ್ಲವಿ, ಚರಣಗಳು ಪೋಷಕ. ಒಟ್ಟಾರೆಯಾಗಿ ದಾಸರ ಹಾಡುಗಳು ಸಂಪೂರ್ಣವಾಗಿ ಭಕ್ತಿ ರಚನೆಗಳೆಂದು ಪರಿಗಣನೆಯಾಗಿವೆ. ಭಕ್ತಿಪ್ರತಿಪಾದನೆಯಿಲ್ಲದಿದ್ದರೆ ದಾಸರ ಕೀರ್ತನೆಗಳಿಗೆ ಬೆಲೆಯಿರುವುದಿಲ್ಲ.

ಸುಳಾದಿ

ರಾಗ ಏಕವಾಗಿ ವಿವಿಧ ತಾಳಗಳು ಸಮಾವೇಶಹೊಂದಿದವು. ಇದೊಂದು ಸಂಗೀತ ಸಂಯೋಜನೆ. ಇದೊಂದು ತಾಳ ಮಾಲಿಕೆ. ವಿವಿಧ ತಾಳಗಳು ಇದರ ವೈಶಿಷ್ಟ್ಯ. ಇದರಲ್ಲಿ ಸಾಮಾನ್ಯವಾಗಿ ಸಪ್ತತಾಳಗಳಿರುತ್ತವೆ. ಅವು : ಧ್ರುವ, ಮಟ್ಟ, ರೂಪಕ, ಝಂಪೆ, ತ್ರಿಪುಟ, ಅಟ್ಟ, ಏಕತಾಳ. ಐದು ತಾಳಗಳ ಸುಳಾದಿಗಳೂ ಉಂಟು. ಶ್ರೀ ವಿಜಯದಾಸರು ಪಂಚತಾಳ ಮತ್ತು ಸಪ್ತತಾಳಗಳೆರಡನ್ನೂ ಬಳಸಿದ್ದಾರೆ. ಸುಳು+ಹಾದಿ=ಸುಳಾದಿ. ಶ್ರೀ ಹರಿಯನ್ನು ಸುಲಭವಾಗಿ ಒಲಿಸಿಕೊಳ್ಳುವ ಮಾರ್ಗ.

ಹರಿದಾಸರ ಒಂದು ನೂರು ದೇವರ ಪದಗಳ ಫಲ ಒಂದೇ ಸುಳಾದಿಯ ಪಠನದಿಂದ ಬರುತ್ತದೆ ಎಂದಿದ್ದಾರೆ.

ಶ್ರೀ ವಿಜಯದಾಸರು 'ತತ್ತ್ವವಾದ'ದ ಸಾರವನ್ನು ಸುಳಾದಿಯೆಂಬ ಸಂಕೀರ್ತನ ಸಾಹಿತ್ಯದ ಚೌಕಟ್ಟಿಗೆ ಅಳವಡಿಸಿದ್ದಾರೆ. ಇದರಿಂದ ಸಂಸ್ಕೃತದ ಮಧ್ವಸಿದ್ಧಾಂತ ಕನ್ನಡ ಭಾಷೆಗೆ ಹರಿದುಬರಲು ಸಾಧ್ಯವಾಯಿತು. ಇದೂ ಕೂಡ ವಿಜಯದಾಸರ ಮಹತ್ವದ ಕೊಡುಗೆಗಳಲ್ಲಿ ಒಂದಾಗಿದೆ. ಕನ್ನಡ ಧರ್ಮ ಸಿದ್ಧಾಂತಗಳ ಐತಿಹಾಸಿಕ ಅಧ್ಯಯನದಲ್ಲಿ ಇದನ್ನು ತಪ್ಪದೆ ಪರಿಗಣಿಸಬೇಕಾಗಿದೆ. ಕನ್ನಡತನದ ದನಿ ಬನಿ ಢಾಳಾಗಲು ಇಂಥ ಪ್ರಯತ್ನವೂ ನೆರವಾಗಿದೆ.

ಉಗಾಭೋಗ

ಭಾವಪ್ರಧಾನವಾದ ಗೀತಗಳು. ಚಿಕ್ಕ ಪದ್ಯ. ಸ್ವರಪ್ರಧಾನವಾದ ಗೀತೆ. ಸುಳಾದಿಗಿಂತ ಹೆಚ್ಚು ಪ್ರಸಿದ್ಧಿ. ಉದ್ಗ್ರಾಹ, ಮೇಲಾಪಕ, ಧ್ರುವ, ಅಂತರ, ಆಭೋಗ– ಉಗಾಭೋಗದ ಪಂಚ ಧಾತುಗಳು. ಇವು ಶಿವಶರಣರ ವಚನಗಳನ್ನು ಹೋಲುತ್ತವೆ. ಪುರಂದರದಾಸರ " ಕೆರೆಯ ನೀರನು ಕೆರೆಗೆ ಚೆಲ್ಲಿ" ಪ್ರಸಿದ್ಧವಾದ ಉಗಾಭೋಗವಾಗಿದೆ.

ಒಂದು ನೂರು ಸುಳಾದಿಗಳ ಪಠನದಿಂದ ಬರುವ ಫಲ ಒಂದೇ ಉಗಾಭೋಗದಿಂದ ಲಭ್ಯವಾಗುವುದೆಂದು ವ್ಯಾಖ್ಯಾನಿಸಲಾಗಿದೆ. ಎಲ್ಲಾ ಹರಿದಾಸರಲ್ಲೂ ಉಗಾಭೋಗಗಳಿವೆ. ಇವುಗಳಲ್ಲಿ ದಾಸರ ಕಲ್ಪನೆ, ಕಾವ್ಯತನ, ಪಾಂಡಿತ್ಯ ಪ್ರಧಾನವಾಗಿರುತ್ತದೆ. ಉಗಾಭೋಗ ಕೀರ್ತನಕಾರರ ಪ್ರತಿಭೆಯ ನಿಕಷವಾಗಿದೆ. ಕಾವ್ಯ ಪ್ರಕ್ರಿಯೇಯ ಅಥವಾ ಸೃಜನಶೀಲತೆಯ ನಾನಾ ಪರಿಕರಗಳ ಅಂಶಗಳು ಸಂದರ್ಭೋಚಿತವಾಗಿ, ಅರ್ಥಪೂರ್ಣವಾಗಿ ಸಂಯೋಜನೆ ಗೊಂಡರೇನೇ ಉಗಾಭೋಗದ ಕಾವ್ಯತನ ಗಟ್ಟಿಯಾಗುವುದು. ಧರ್ಮೋಪದೇಶಕರು ಕವಿಗಳಲ್ಲ ; ಕಾವ್ಯ ರಚನೆ ಅವರ ಉದ್ದೇಶವಲ್ಲ. ಆದರೂ ಅವರಲ್ಲಿ ಕವಿ ಮನೋಧರ್ಮದ ಛಾಪು ಮೂಡಿಸಿರುವುದನ್ನು ಮನಗಾಣಬಹುದು.

ದಾಸಕೂಟ

ವೈಷ್ಣವ ತತ್ವಗಳನ್ನು ಛಂದೋಬದ್ಧವಾದ ಕನ್ನಡ ಗೀತೆಗಳ ಮೂಲಕ ಹಾಡುವ ಭಕ್ತರಗುಂಪು. ಇವರು ಸಾಮಾನ್ಯ ಜನರಿಗೆ ಹತ್ತಿರ. ಇವರಿಂದಲೇ ಕನ್ನಡ ಭಾಷೆ ಜನಸಾಮಾನ್ಯರ ಭಾಷೆಯಾದದ್ದು.

ವ್ಯಾಸಕೂಟ

ಶ್ರೀ ವೇದವ್ಯಾಸ ಪ್ರಣೀತ ಗ್ರಂಥಗಳನ್ನು, ಶ್ರೀಮಧ್ವಾಚಾರ್ಯರ ಸಂಸ್ಕೃತ ಭಾಷೆಗಳನ್ನು, ಅನುಸರಿಸುವ ಪಂಡಿತರ ಗುಂಪು. ಇವರು ವಿದ್ವಾಂಸರಿಗೆ ಮಾತ್ರ ಪ್ರಿಯರಾದವರು. ಸಂಸ್ಕೃತ ವ್ಯಾಮೋಹಿಗಳು. ಗೀರ್ವಾಣ ಭಾಷೆಯ ಅನುಸಾರಿಗಳು. ಇವರಿಗೆ ಸಾಮಾನ್ಯ ಜನರ ಕಾಳಜಿ ಅಷ್ಟಾಗಿಲ್ಲ. ಇಂಥವರಿಂದ ಕನ್ನಡ ಭಾಷೆ ತನ್ನ ಸತ್ವವನ್ನು ಸಮಗ್ರವಾಗಿ ಹೊರಹೊಮ್ಮಿಸಲು ಸಾಧ್ಯವಾಗಲಿಲ್ಲ. ಇದೊಂದು ದೊಡ್ಡ ಕೊರತೆ. ಸಂಸ್ಕೃತ ಭಾಷೆ ಕನ್ನಡ ಭಾಷೆಯನ್ನು ಆಳಲು ಪ್ರಯತ್ನಿಸಿದ್ದು

ಯಶಸ್ವಿಮಾರ್ಗವಾಗದಿದ್ದರೂ ಸ್ವಲ್ಪ ಮಟ್ಟಿಗೆ ಕನ್ನಡ ಭಾಷೆಯನ್ನು ಮಂಕಾಗಿಸಿದ್ದು ಸತ್ಯ. ಆ ಬಂಧನವನ್ನು ಮೀರಿ, ಸಂಸ್ಕೃತದ ಸಾರವನ್ನು ಹೀರಿ, ಕನ್ನಡ ಭಾಷೆ ತನ್ನ ಸೋಪಜ್ಞತೆಯನ್ನು ಮೆರೆದದ್ದು ಇತಿಹಾಸ ; ಆ ಮಾತು ಬೇರೆ.

ವಿಜಯದಾಸರು ಅಪ್ಪಟ ಕನ್ನಡ ದಾಸರು. ಅವರು ಮಧ್ವಾಚಾರ್ಯರನ್ನು ಅನುಸರಿಸಿ ಸಂಸ್ಕೃತ ಭಾಷೆಯಲ್ಲಿ ಸಾಹಿತ್ಯ ರಚನೆಗೆ ತೊಡಗಿದ್ದರೆ, ಸಾಗರ ಸದೃಶ ಸಂಸ್ಕೃತ ಸಾಹಿತ್ಯ ಕ್ಷೇತ್ರಕ್ಕೆ ಅಷ್ಟೇನೂ ಲಾಭವಾಗುತ್ತಿರಲಿಲ್ಲ ; ಆದರೆ ಕನ್ನಡ ಭಾಷಾ ಸಾಹಿತ್ಯಕ್ಕೆ ಖಂಡಿತ ನಷ್ಟವಾಗುತ್ತಿತ್ತು. ಅವರ ಅಂಕಿತನಾಮ 'ವಿಜಯ ವಿಠ್ಠಲ'. ಅದರಿಂದಲೇ 'ವಿಜಯದಾಸ' ನಾಮಾಂಕಿತ. ಪುರಂದರ ದಾಸರಿಂದ ಪಡೆದ ಅಂಕಿತವನ್ನು ಸ್ಫೂರ್ತಿಯಾಗಿಟ್ಟುಕೊಂಡು ಕೀರ್ತನ ಪ್ರಕಾರದ ವಿವಿಧ ಮುಖಗಳನ್ನು ವಿಸ್ತರಿಸುವಂತೆ ನಾನಾ ರೀತಿಯ ವೈವಿಧ್ಯಮಯವಾದ ಕೀರ್ತನೆಗಳನ್ನು ರಚಿಸಿದ್ದಾರೆ. ಇವು ಸರಳವಾಗಿಯೂ ಸುಂದರವಾಗಿಯೂ ಅರ್ಥಪೂರ್ಣವಾಗಿಯೂ ವೈಚಾರಿಕ ಹೊಳಹುಗಳನ್ನು ಉಳ್ಳವುಗಳಾಗಿಯೂ ಇದ್ದು ಕೀರ್ತನಾಸಕ್ತರಿಗೆ ತೃಪ್ತಿ ನೀಡಿವೆ.

ವಿಜಯದಾಸರ ಕೆಲವು ಕೀರ್ತನೆಗಳನ್ನು ಮನನ ಮಾಡಬಹುದು :

ಕೃಪಣ ಶ್ರೀಮಂತರ ಟೀಕೆ

ಕೊಡುವವನು ನೀನು ಕೊಂಬುವವನು ನಾನು
ಬಡಮನದ ಮನುಜರನ ಬೇಡಿದರೇನುಂಟು ? ‖ ಪಲ್ಲವಿ ‖

ಹದಿನಾರು ಪಲ್ಲುಗಳ ತೆರೆದು ಆಲ್ಪರಿದರೆ
ಇದು ಸಮಯವಲ್ಲೆಂದು ಪೇಳುವನೊ
ಮದನ ಕೇಳಿಗೆ ನೂರು ಒಂದು ಮಾಡಿ ನೋಡುವನು
ಮದಡ ಮನುಜ ಎನಗೆ ಏನು ಕೊಡುವನೊ ಹರಿಯೇ ?

ಗತಿ ಇಲ್ಲವೆಂದು ನಾನಾ ಪ್ರಕಾರದಿಂದ
ಮತಿಗೆಟ್ಟು ಪೊಗಳಿದರೆ ಅವನು ತನ್ನ
ಸತಿಸುತರ ಕೇಳಬೇಕೆನುತ ಮುಖದಿರುಹುವನು
ಅತಿ ದುರುಳ ಮತ್ತೇನು ಕೊಡುವನೊ ಹರಿಯೆ ?

ಹೀನ ವೃತ್ತಿ ಜನರ ಆಶೆಯನು ಮಾಡುವದು
ಗಾಣದೆತ್ತು ತಿರುಗಿ ಬಳಲಿದಂತೆ
ಭಾನು ಕೋಟಿ ತೇಜ ವಿಜಯ ವಿಠ್ಠಲರೇಯ
ನೀನಲ್ಲದನ್ಯತ್ರ ಕೊಡುವ, ಕೊಂಬುವರುಂಟೆ ?

ಜಿಪುಣ ಹಾಗೂ ಶ್ರೀಮಂತರ ಟೀಕೆ. ಅವರ ಸ್ವಭಾವದ ವರ್ಣನೆ. ಶ್ರೀಹರಿಯ ಔದಾರ್ಯದ ಕೊಂಡಾಟ ಈ ಕೀರ್ತನೆಯಲ್ಲಿ ಪ್ರಧಾನವಾಗಿದೆ.

ಶ್ರೀ ವಿಜಯದಾಸರು ತಿರುಪತಿ ವೆಂಕಟೇಶ್ವರ ಬ್ರಹ್ಮೋತ್ಸವಕ್ಕೆ ಹೋಗಿದ್ದಾಗ ಹಾಡಿದ 'ನಿಂದಾಸ್ತುತಿ' ಒಂದರ ಪಠ್ಯ ಹೀಗಿದೆ :

ಜಯ ಮಂಗಳಂ ನಿತ್ಯ ಶುಭ ಮಂಗಳಂ ॥ ಪಲ್ಲವಿ ॥

ತೊಳಸದಕ್ಕಿಯ ತಿಂಬ ಕಿಲುಬು ತಳಿಗೆಯಲುಂಬ
ಕೊಳಗದಲಿ ಹಣಗಳನು ಅಳೆಸಿಕೊಂಬ
ಇಲ್ಲ ತನಗೆಂದು ಸುಳ್ಳು ಮಾತಾಡಿದರೆ
ಎಲ್ಲವನು ಕಸುಕೊಂಬ ಕಳ್ಳ ದೊರೆಗೆ.

ತನ್ನ ನೋಡುವೆನೆಂದು ಮುನ್ನೂರ್ಗಾವುದ ಬಂದು
ತನ್ನ ಗುಡಿಯ ಪೊಕ್ಕ ಜನರಿಗೆಲ್ಲ
ಹೊನ್ನು ಹಣ ಕಸುಕೊಂಡು ತನ್ನ ದರುಶನ ಕೊಡದೆ
ಬೆನ್ನೊಡೆಯ ಹೊಡೆಸುವ ಅನ್ಯಾಯಕಾರಿಗೆ.

ಗಿಡ್ಡ ಹಾರುವನಾಗಿ ಸೆರಗೊಡ್ಡಿ ದಾನವ ಬೇಡಿ
ದುಡ್ಡು ಕಾಸುಗಳಿಗೆ ಕೈಯ ನೀಡಿ
ಅಡ್ಡಬಿದ್ದ ದಾಸರಿಗೆ ವಿಡ್ಡೂರಗಳ ಕಳೆದು
ದೊಡ್ಡವ ಮಾಳ್ಪ ಸಿರಿ ವಿಜಯ ವಿಠಲಗೇ.

ಕೀರ್ತನಗಳಲ್ಲಿ ಕಂಡು ಬರುವ 'ನಿಂದಾಸ್ತುತಿ' ಪರಂಪರೆ ಒಂದು ರೋಚಕ ಅಧ್ಯಾಯ. ಇವುಗಳನ್ನು ಗಮನವಿಟ್ಟು ಪರಿಶೀಲಿಸಿದರೆ ಕುತೂಹಲಕಾರಿಯಾದ ಅಂಶಗಳು ಗೋಚರಿಸುತ್ತವೆ.

ಚೀಕನ ಪರಿವಿಯ ಹತ್ತಿರದ ಹಿರೇಚಾಗಿ ಎಂಬಲ್ಲಿ ದೇಸಾಯಿ ಚಾಗಿ ಕೇಶವರಾಯ ತೀರಿಕೊಂಡಿದ್ದ. ಅವನ ಹೆಂಡತಿಯ ಆರ್ತನಾದದ ಪ್ರಾರ್ಥನೆಯಂತೆ ಶ್ರೀ ವಿಜಯದಾಸರು ತಮ್ಮ ಆಯಸ್ಸಿನ ಮೂರು ವರ್ಷ ದಾನಮಾಡಿ, ಶ್ರೀ ಹರಿಯನ್ನು 13 ಉಗಾಭೋಗಗಳಿಂದ ಸ್ತುತಿಸಿ, ಸತ್ತವನನ್ನು ಬದುಕಿಸಿದರು. 1000 ಜನ ಬ್ರಾಹ್ಮಣರಿಗೆ ಭೋಜನ ಮಾಡಿಸುವ ಹರಕೆಯನ್ನೂ ಕಟ್ಟಿಕೊಂಡರು :

ದೇವ ನಿನ್ನ ಪಾದದಾಣೆ

ದೇವ ನಿನ್ನ ಪಾದದಾಣೆ ಭಕ್ತರಾಣೆ
ಈ ವಚನ ಸತ್ಯ ಮಾಡುವುದು ಎನಗೆ.

ಇವನ ಜೀವನದಾನ ಕೊಡು ಇದೇ ದೇಹದಲಿ
ಮೂರು ವರುಷ ಎನ್ನಾಯುಷ್ಯದೊಳಿತ್ತು
ಕಾವುದಲ್ಲದೆ ಇನ್ನು ಸುಮ್ಮನಿಪ್ಪುದು ಸಲ್ಲ
ಸಾವಿರ ಬ್ರಾಹ್ಮಣ ಭೋಜನ ಮಾಡಿಸುವೆ.

ದೇವ ನಿನ್ನ ಪಾದದಾಣೆ ಭಕ್ತರಾಣೆ
ಈ ವೇಳೆಗೆ ಬಂದ ಅಪಮೃತ್ಯು ಓಡಿಸು.

ಭೂವಿ ಬುಧರೆಲ್ಲರ ಕಷ್ಟಪಡುವದ ನೋಡಿ
ಕೋವಿದರಾಯ ಎನ್ನಾಣೆ ಕೇಳಿದು ಸತ್ಯ
ಪಾವನ್ನ ಮೂರುತಿ ವಿಜಯ ವಿಠ್ಠಲರೇಯ
ಜೀವೇಶನಿಂದಲಿ ರಕ್ಷಣೆ ಮಾಡಿಸೋ.

ಶ್ರೀ ವಿಜಯದಾಸರ ಔದಾರ್ಯ ಹಾಗೂ ಸಂಕುಚಿತ ದೃಷ್ಟಿ ಎರಡಕ್ಕೂ ಇದು ಉದಾಹರಣೆಯಾಗಿದೆ.

ಅಹಂಕಾರದ ಬಗೆಗೆ

ಅಹಂಕಾರವೆಂಬೊ ಪಾಪಿಯು ಬೆನ್ನು ಬಿದ್ದರೆ
ಅಹಂಕಾರ ವಲ್ಲದೆ ಒಂದಿಷ್ಟಿ ಸುಖವಿಲ್ಲ.

ಕಡಿಯಲು ಕೊನೆಯಿಂದ ಬುಡ ನಾಶವಿಲ್ಲ
ಬುಡ ಹೊಯ್ದರೆ ಕೊನೆ ಒಡನೆ ಒಣಗುವುದು.

ಧೃಢವಾದ ಅಹಂಕಾರ ಕಡಿದರೆ ಬಿಂಕದ
ಬಿಡಿ ಪಾಪಗಳೆಲ್ಲ ಅಡಗಿ ದೂರಾಗುವುವು
ತಡಿಯದೆ ವಿಶಿಷ್ಟ ವಿಜಯ ವಿಠ್ಠಲ ನಿನ್ನ
ಅಡಿಗಳ ರುಚಿದೋರಿ ಬಿಡಿಸುವುದಹಂಕಾರ.

ಅಹಂಕಾರದಿಂದ ಬೀಗಬಾರದು. ಸಾತ್ವಿಕ ಚೇತನಗಳನ್ನು ನೋಯಿಸಬಾರದು. ಎಲ್ಲಾ ಪಾಪಕರ್ಮಗಳಿಗೆ ಅಹಂಕಾರವೇ ಕಾರಣ. ಅಹಂಕಾರದಿಂದಾಗುವ ಅಪಾಯ ಅಧಿಕ. ಈ ಸಾಮಾಜಿಕ ವಿಡಂಬನೆ ಆರೋಗ್ಯಕರವಾದ ಅಭಿವ್ಯಕ್ತಿಯಾಗಿದೆ.

ವಿಜಯದಾಸರು ತಮ್ಮ ಅಭಿವ್ಯಕ್ತಿಗೆ ಜನಸಾಮಾನ್ಯರ ಆಡುನುಡಿಯನ್ನೇ ವಿಶೇಷವಾಗಿ ಬಳಸಿಕೊಂಡಿದ್ದಾರೆ. ಕನ್ನಡ ಭಾಷೆಯ ನುಡಿ ಬನಿಯ ಬಗೆಗೆ ಅವರಿಗೆ ಸ್ಪಷ್ಟವಾದ ಅರಿವಿದ್ದಂತೆ ಕಾಣುತ್ತದೆ.

ಅತಿ ಆಸೆಯ ವಿಡಂಬನೆ

ಸಪ್ಪಡಿ ಮೆಲುವಾಗ ಉಪ್ಪಿನ ಯೋಚನೆ
ಉಪ್ಪು ದೊರೆತಾಗ ಸೊಪ್ಪಿನ ಯೋಚನೆ.
ಸೊಪ್ಪು ದೊರಕಿದಾಗ ತುಪ್ಪದ ಯೋಚನೆ
ತುಪ್ಪ ದೊರಕಿದಾಗ ಕುಪ್ಪೆಯ ಯೋಚನೆ
ಕುಪ್ಪೆ ದೊರಕಿದಾಗ ಕೊಪ್ಪರಿಗೆ ಯೋಚನೆ
ಕೊಪ್ಪರಿಗೆ ಉಂಟಾಗೆ ಸಪ್ತದ್ವೀಪದ ಚಿಂತೆ.

ಮನುಷ್ಯ ಜೀವನದಲ್ಲಿ ಸಾಮಾನ್ಯವಾಗಿ ಕಾಣಿಸಿಕೊಳ್ಳುವ ಮನೋಸ್ಥಿತಿ ಆಸೆ. ಭಾಷಿಕ ಜನಪದದಲ್ಲೂ ಸನಾತನ ಕಾಲದಿಂದ ಆಸೆಯನ್ನು ಕುರಿತ ಗಾದೆಗಳಿವೆ. ಭಗವಾನ್ ಬುದ್ಧ ಚಿಂತನಗಂಗಾದಲ್ಲಿ ಆಸೆಯ ನಿವಾರಣೆಗೆ ಆದ್ಯತೆ ನೀಡಿದೆ. ಪ್ರಾಚೀನ ವಿಷಯಕ್ಕೆ ವಿಜಯದಾಸರ ಕನ್ನಡ ನುಡಿಯನ್ನು ತಳಕುಹಾಕಿದ್ದಾರೆ. ಸಣ್ಣ ಪುಟ್ಟ ವಿಷಯಗಳಿಗೂ ಕೀರ್ತನೆಗಳಲ್ಲಿ ದನಿ ತೆರೆದಿರುವುದು ವಿಶೇಷ. ಸರಳವಾದ ಶಬ್ದಜೋಡಣೆಗೂ ಇವು ಉದಾಹರಣೆಗಳಾಗಬಲ್ಲವು. ಈ ಹಿನ್ನೆಲೆಯಲ್ಲಿ ಕೀರ್ತನೆಗಳ ಅಧ್ಯಯನ ವ್ಯರ್ಥವಾಗುವುದಿಲ್ಲ.

ಮನಸ್ಸಿನ ಅಂಕುಶ ಕಷ್ಟ

ಮನಸು ನಿಲ್ಲಿಸುವುದು ಬಹಳ ಕಷ್ಟ
ಗುಣಿಸುವುದು ನಿಮ್ಮೊಳಗೆ ನೀವೆ ನೆಲೆ ಬಲ್ಲವರು ॥ ಪ ॥

ಮುರಿದೋಡಿ ಬರುವ ರಣರಂಗ ನಿಲಿಸಬಹುದು
ಹರಿವ ನದಿಗಳ ತಿರುಹಿ ನಿಲ್ಲಿಸಬಹುದು
ಕರಿ ಸೊಕ್ಕಿ ಬರುತಿರುಲು ತಡೆದು ನಿಲ್ಲಿಸಬಹುದು
ದುರುಳ ಮನ ನಿಲಿಸುವುದು ಸುರರಿಗಳವಲ್ಲ.

ಭೈರವನ ದಾಡೆಯನು ಬಡಿದು ನಿಲಿಸಬಹುದು
ಮಾರುತನ ತರುಬಿ ನಿಲ್ಲಿಸಲುಬಹುದು
ಮಾರಿಗಳ ಮುಂಜೆರಗು ತುಡುಕಿ ನಿಲ್ಲಿಸಬಹುದು
ಹಾರಿ ಹಾರುವ ಮನಸು ನಿಲ್ಲಿಸಲೆನ್ನಳವಲ್ಲ.

ಶರಧಿಗಳು ಭೋರ್ಗರೆವ ಧ್ವನಿಯ ನಿಲ್ಲಿಸಬಹುದು
ಸುರಿವ ಬಿರಿ ಮಳೆಯನ್ನು ನಿಲ್ಲಿಸಬಹುದು
ಹರಿದೋಡುವ ಮನಸು ನಿಲ್ಲಿಸಲೆನ್ನಳವೆ
ಸಿರಿಯರಸ ವಿಜಯ ವಿಠ್ಠಲ ತಾನೆ ಬಲ್ಲ.

ಮನಸ್ಸು ಚಂಚಲ. ಅದರ ನಿಯಂತ್ರಣ ಕಷ್ಟಸಾಧ್ಯ. ಸಂಯಮದಿಂದ, ದೃಢಪ್ರಯತ್ನದಿಂದ ಅದನ್ನು ಹಿಡಿತದಲ್ಲಿ ಇಟ್ಟುಕೊಳ್ಳುವುದು ಅಗತ್ಯ. ಬೈರಾಗಿ ದಾಸರಿಗೂ ಇದು ಕಷ್ಟ ಎಂದಮೇಲೆ ಸಾಮಾನ್ಯರ ಪಾಡೇನು ? ವಿಜಯದಾಸರ ಬಿಚ್ಚುನುಡಿ ಆರೋಗ್ಯಕರವಾಗಿದೆ.

ಸಮಾಜದ ಅಂಕುಡೊಂಕುಗಳನ್ನು ಕಟೂಕ್ತಿಯಲ್ಲಿ ಎತ್ತಿ ಆಡಿದ್ದಾರೆ :

ಕೋಪದ ಜಂಬಕ್ಕೆ

ಹಿಗ್ಗದಿರು ಹಿಗ್ಗದಿರು ಮನುಜ ಪಶುವೆ ॥ ಪಲ್ಲವಿ ॥
ಮಗ್ಗಿ ತಗ್ಗುವುದು ಮುಂದರಿಯದಲೆ ಮರುಳಾಗಿ ॥ ಅ.ಪ. ॥

ಶಾಪಗಳ ಕೊಡುವಲ್ಲಿ ದುರ್ವಾಸ ಮುನಿಯೇನೊ
ತಾಪ ತೋರುವಲ್ಲಿ ರವಿ ಅನಲನೇನೊ
ತಾಪಸರ ನಡುವೆ ನೀ ವಸಿಷ್ಠನೇನೊ ?

ಇಲ್ಲಿ ಬಳಸಿಕೊಂಡಿರುವ ಸಾಮತಿಗಳು ಸಮಯೋಚಿತವಾಗಿವೆ. ವಿಷಯ ಪ್ರತಿಪಾಪದನಿಗೆ ಸಮರ್ಥನೀಯವಾಗಿವೆ.

ಹೊಟ್ಟೆಕಿಚ್ಚು ಕೂಡದು

ಪರರ ಶ್ರೇಯಸ್ಸನ್ನು ನೋಡಿ ಸಂಕಟಪಟ್ಟರೆ
ಗಿರಿಗೆ ಮಸ್ತಕವಿಟ್ಟು ಬಳಲಿ ಬೆಂಡಾದಂತೆ.
ಬರಿದೆಯಲ್ಲದೆ ಜನಕೆ ಲಾಭ ಮತ್ತೇನು ಕಾಣೆ
ಶರಧಿ ಮೇಲೆ ಮುನಿದು ಒಂದು ಕುಡತಿ ಧೂಳಿ
ಭರದಿಂದ ತೂರಿದರೆ ತಲ್ಲಣಿಸುವುದೇನೋ ?

ಧಾರ್ಮಿಕ ಪರಿಸರಕ್ಕೆ ತಮ್ಮ ಬದುಕನ್ನು ಅರ್ಪಿಸಿಕೊಂಡ ವಿಜಯದಾಸರಲ್ಲಿ ಕವಿ ಮನೋಧರ್ಮ ಜೀವಜಲವಾಗಿ ಪ್ರವಹಿಸಿರುವನ್ನು ಸ್ಪಷ್ಟವಾಗಿ ಗುರುತಿಸಬಹುದು. ಇದಕ್ಕೆ ಪುಟ್ಟ ಪದಗಳೂ ಪುಷ್ಟಿ ನೀಡುತ್ತವೆ.

ಶಿವಶರಣರವಚನಗಳಿಗೂ ಹರಿದಾಸರ ಕೀರ್ತನೆಗಳಿಗೂ ಹೆಚ್ಚು ಸಾಮ್ಯವಿದೆ. ಸ್ವರ ವಚನಗಳಿಗೂ ಉಗಾಭೋಗಗಳಿಗೂ ಅಭಿವ್ಯಕ್ತಿಯಲ್ಲಿ ಹೊಂದಾಣಿಕೆಯಿದೆ. ಇಬ್ಬರ ಸಾಮಾಜಿಕ ವಿಡಂಬನೆಯ ದೋರಣೆಯೂ ಒಂದೇ ಆಗಿದೆ. ದಾಸಸಾಹಿತ್ಯ ವಚನ ಸಾಹಿತ್ಯಕ್ಕೆ ಸಾಕಷ್ಟು ಋಣಿಯಾಗಿದೆ–ಹೊರ ರೂಪದಲ್ಲಿ, ಒಳ ಹೂರಣದಲ್ಲಿ. ಎರಡೂ ಸಾಹಿತ್ಯ ಪ್ರಕಾರಗಳು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಮಹತ್ವದ ಬೆಳವಣಿಗೆಗಳೇ ಆಗಿವೆ. ಕನ್ನಡ ಭಾಷೆ ಶಿಷ್ಟಪದ ಮಾರ್ಗದ ಜಾಡನ್ನು ಬಿಟ್ಟು, ಜನಪದ ಸಹಜ ನುಡಿಯಲ್ಲೂ ಅತ್ಯುತ್ತಮವಾಗಿ ಸೃಜನಶೀಲ ಅಭಿವ್ಯಕ್ತಿಯನ್ನು ಮೂಡಿಸಬಹುದು ಎಂಬುದಕ್ಕೆ ಇವು ಸಾಕ್ಷಿಯಾಗಿವೆ.

ಎರಡೂ ಕಾವ್ಯ ಪ್ರಕಾರಗಳನ್ನು ಸಮಚಿತ್ತದಿಂದ, ಸಹೃದಯ ಕುತೂಹಲದಿಂದ, ತೌಲನಿಕವಾಗಿ ಅಭ್ಯಸಿಸಿದರೆ, ಗುಣದೋಷ, ಕೊಡುವಿಕೆ ಕೊಳ್ಳುವಿಕೆಗಳ ಬಗೆಗೆ ಕೆಲವು ಅಂಶಗಳನ್ನು ಗುರುತಿಸಬಹುದು. ಒಟ್ಟಾರೆ ಕನ್ನಡ ಕಾವ್ಯ ಪ್ರಪಂಚಕ್ಕೆ ಆಗಿರುವ ಉಪಯೋಗವನ್ನೂ ಅರಿಯಬಹದು.

ದಾಸ ಸಾಹಿತ್ಯದ ಸಾಮಾಜಿಕ ಚಿಂತನೆಯಲ್ಲಿ ವೈಚಾರಿಕತೆಯಿದ್ದರೂ ಪೌರಾಣಿಕ ವಿಷಯದ ಬಳಿಕೆಯಲ್ಲಿ ಹೆಚ್ಚು ಮೌಢ್ಯ ತುಂಬಿಕೊಂಡಿದೆ. ವಿಷ್ಣುವಿನ ಮಹತ್ವವನ್ನು ಮೆರೆಯುವ ಭರದಲ್ಲಿ ಅವನ ಅಸಂಗತ ವಿಷಯಗಳನ್ನೂ ದಾಸರು ಒಪ್ಪಿಕೊಂಡು ಬಳಸಿದ್ದಾರೆ. ಇಂಥದನ್ನು ನಿರ್ಲಕ್ಷಿಸಬೇಕು. ಇಲ್ಲದಿದ್ದರೆ ವಿಷ್ಣುವಿಗೂ ಬೆಲೆ

ಬರುವುದಿಲ್ಲ; ಹಿಂದೂ ಧರ್ಮಕ್ಕೂ ಬೆಲೆ ಬರುವುದಿಲ್ಲ. ಶಿವ ಪುರಾಣದ ಆಧಾರದ ವಚನಗಳಲ್ಲೂ ಇಂಥ ಅಭಾಸಗಳುಂಟು. ಪುರಾಣವೆಂದ ಮೇಲೆ ಯಾವುದಾದರೂ ಒಂದೇ ! ವಿಜಯದಾಸರ ಕೀರ್ತನೆಗಳಲ್ಲೂ ಅಸಂಭವನೀಯ ಮೌಢ್ಯಾಂಶಗಳು ಇವೆ. ಇವುಗಳನ್ನು ಬಿಟ್ಟು ವಿಮರ್ಶಿಸುವುದು ಅಗತ್ಯ. ಹೀಗೆ ಮಾಡುವುದರಿಂದ ವಿಜಯದಾಸರ ವ್ಯಕ್ತಿತ್ವಕ್ಕೇನೂ ಧಕ್ಕೆಯಾಗುವುದಿಲ್ಲ. ಕವಿ ಯಾರೇ ಆಗಿರಲಿ, ಯಾವುದೇ ಪಂಥಕ್ಕೆ ಸೇರಿರಲಿ ಅಲ್ಪಸ್ವಲ್ಪ ದೋಷಗಳಿಂದ ಸಂಪೂರ್ಣವಾಗಿ ಮುಕ್ತರಾಗಿರುವುದಿಲ್ಲ. ಕಾವ್ಯ ಮೀಮಾಂಸೆಯ ಅಂಕುಶ ಇಲ್ಲೂ ಪ್ರವೇಶಿಸಬಹದು.

ದಾಸ ಸಾಹಿತ್ಯವನ್ನು ತೀವ್ರವಾಗಿ ವಿಮರ್ಶೆಗೆ ಒಳಪಡಿಸುವುದು ಅನಿವಾರ್ಯವಾಗಿದೆ. ಅವೈಜ್ಞಾನಿಕ, ಅವೈಚಾರಿಕ, ಪವಾಡ ಸದೃಶ ಪ್ರಸಂಗಗಳನ್ನು, ಹೇಳಿಕೆಗಳನ್ನು, ನಿರ್ಲಕ್ಷಿಸಿ, ಸಮಷ್ಟಿ ಸಮಾಜಕ್ಕೆ ಉಪಯುಕ್ತವಾದ ಅಂಶಗಳನ್ನು ಎತ್ತಿಹಿಡಿಯಬೇಕಾಗಿದೆ. ವಚನಕಾರರದು ಸಮಾಜೋಧಾರ್ಮಿಕ ಕ್ರಾಂತಿಯಾದರೆ, ದಾಸರದು ಧಾರ್ಮಿಕ ಪ್ರತಿಪಾದನೆಯಾಗಿದೆ. ಶಿವದಾಸ ಸಾಹಿತ್ಯ ಸಾಕಷ್ಟು ವಿಶ್ಲೇಷಣೆಗೆ ಒಳಪಟ್ಟಿದೆ. ಆದರೆ ಹರಿದಾಸ ಸಾಹಿತ್ಯ ಆರಾಧನೆಯ ಮೇಲ್ಪದರದಲ್ಲೇ ನಡೆಯುತ್ತಿದೆ. ಈ ಎರಡೂ ಪಂಥಗಳು ಮಂಕಾಗಲು ಸಾಮಾಜಿಕ ಹಿತ ಕಡಮೆಯಾಗಿ, ಸ್ವಾರ್ಥ ಹೆಚ್ಚಾದುದೇ ಕಾರಣವಾಗಿರುವಂತಿದೆ. ವ್ಯಷ್ಟಿ ಚಿಂತನೆ ಸೀಮಿತ ಪಥ; ಸಮಷ್ಟಿ ಚಿಂತನೆ ಸೀಮಾತೀತ ಪಥ. ಆದಿಕಾಲದಿಂದಲೂ ವಿಶ್ವಪಥ ದೃಷ್ಟಿಯೇ ಪ್ರಶಸ್ತವಾಗಿದೆ, ಫಲದಾಯಕವಾಗಿದೆ. ಕಾಲಧರ್ಮಕ್ಕನುಗುಣವಾಗಿ ಆ ದೃಷ್ಟಿಕೋನದ ಪ್ರಮಾಣ ಏರುಪೇರಾಗುವುದು, ಅಷ್ಟೆ. ಸಮಷ್ಟಿ ಹಿತವೇ ಸರ್ವಸಮ್ಮತವಾದ, ಸಾರ್ವಕಾಲಿಕವಾದ ಬದುಕಿನ ಹೂರಣವಾಗಿದೆ.

ಕನ್ನಡದ ಸಂದರ್ಭದಲ್ಲಿ ಶಿವದಾಸ ಚಳುವಳಿಯಾಗಲೀ ಹರಿದಾಸ ಚಳುವಳಿಯಾಗಲೀ ಅಸಂಖ್ಯಾತ ಭಿಕ್ಷುಕರನ್ನು ಸೃಷ್ಟಿಮಾಡಿದೆ. ದೇವರು ಧರ್ಮದ ಹೆಸರಿನಲ್ಲಿ, ಮಠ ಮಾನ್ಯಗಳ ನೆಪದಲ್ಲಿ, ಸಾಮಾನ್ಯ ಜನರನ್ನು ಅಂಧಕಾರದಲ್ಲಿಟ್ಟು, ಕೆಲವೇ ಮಂದಿ ಸಕಲ ಸೌಲಭ್ಯಗಳನ್ನೂ ಅನುಭವಿಸಿರುವುದು ಆಶ್ಚರ್ಯ ಹುಟ್ಟಿಸುತ್ತದೆ. ಈ ವ್ಯಷ್ಠಿಗಳು ಸಾಮಾಜಿಕ ಸಮಾನತೆ, ಸಾಮರಸ್ಯ, ಸೌಹಾರ್ದ ಭಾವಗಳನ್ನು ಹುಟ್ಟಿಸುವುದಕಿಂತ ಹೆಚ್ಚಾಗಿ, ಪ್ರತ್ಯೇಕತೆಯನ್ನು ಪೋಷಿಸಿವೆ, ಸ್ವರಕ್ಷಣೆಯನ್ನು ನೋಡಿಕೊಂಡಿವೆ. ಭಿಕ್ಷೆ ಕಾಣಿಕೆ ಕೊಡುವುದಕ್ಕಾಗಿ ಮಾತ್ರ ಎಲ್ಲ ಜಾತಿಯವರೂ ಬೇಕು, ಸಮಾನವಾಗಿ ವ್ಯವಹರಿಸುವುದಕ್ಕೆ ಮಾತ್ರ ಅಲ್ಲ ! ಭಕ್ತಿ ಸಾಹಿತ್ಯ ಒಳ್ಳೆಯದನ್ನೂ ಮಾಡಿದೆ, ಕೆಟ್ಟದ್ದನ್ನೂ ಮಾಡಿದೆ. ಇದರಿಂದ ಶೂದ್ರರು ಹೆಚ್ಚಾಗಿ ಶೋಷಣೆಗೆ ಒಳಗಾಗಿದ್ದಾರೆ. ಇತ್ತ ಆಧುನಿಕ ವಿಚಾರವಂತರು ಮುಕ್ತವಾಗಿ ಚರ್ಚಿಸಿ ಸರ್ವಸಮಾನತೆ ಕಾಯ್ದುಕೊಳ್ಳುವದರತ್ತ ಗಮನ ಹರಿಸಬೇಕಾಗಿದೆ. ಇದರಿಂದ ಸಮಸ್ತ ಮನುಕುಲಕ್ಕೆ ಶ್ರೇಯಸ್ಸು, ಪ್ರೇಯಸ್ಸು ಲಭ್ಯವಾಗಲು ಸಾಧ್ಯವಾಗುತ್ತದೆ.

ಹರಿದಾಸರು ಭಿಕ್ಷೆ ಬೇಡಿರುವುದುಂಟು. ಯಾರಿಂದ ಭಿಕ್ಷೆ ಪಡೆದಿದ್ದಾರೆ ? ಏನನ್ನು ಭಿಕ್ಷೆ ಪಡೆದಿದ್ದಾರೆ ? ಧವಸ ಧಾನ್ಯ, ದುಡ್ಡು ಕಾಸುಗಳನ್ನು ಎಲ್ಲ ಜಾತಿಯ ಜನರಿಂದಲೂ ಭಿಕ್ಷೆಯಾಗಿ ಪಡೆದಿದ್ದಾರೆ. ಅನ್ನ, ಸಾರು, ಹಿಟ್ಟು, ರೊಟ್ಟಿ ಮೊದಲಾದ ಬೇಯಿಸಿದ ಆಹಾರ ಪದಾರ್ಥಗಳನ್ನು ತಮ್ಮ ಜಾತಿಯವರಿಂದ ಮಾತ್ರ ಭಿಕ್ಷೆಯಾಗಿ ಸ್ವೀಕರಿಸಿದ್ದಾರೆ. ಶೂದ್ರಾತಿ ಶೂದ್ರರಿಂದ ದಲಿತರಿಂದ ಪಡೆದಿಲ್ಲ. ಇಂಥವರಿಂದಲೂ ಬೇಯಿಸಿದ ಆಹಾರ ಪದಾರ್ಥಗಳನ್ನು ಪಡೆದಿದ್ದರೆ, ಮಠಗಳಲ್ಲಿ ಸಹಭೋಜನ ಪಂಕ್ತಿ ಏಕೆ ಜಾರಿಗೆ ಬರಲಿಲ್ಲ ? ಪ್ರತ್ಯೇಕ ಭೋಜನ ವ್ಯವಸ್ಥೆ ಏಕೆ ರೂಢಿಗೆ ಬಂತು. ಜ್ಞಾನಿಗಳು ಎನ್ನಿಸಿಕೊಂಡ ದಾಸವರೇಣ್ಯರು, ಅವರ ಮಾರ್ಗದರ್ಶಕರು, ಇಂಥ ತಾರತಮ್ಯವನ್ನು ಏಕೆ ಒಪ್ಪಿಕೊಂಡರು ? ಇಂಥವರಿಂದ ಕ್ರಾಂತಿಯನ್ನು ನಿರೀಕ್ಷಿಸಬಹುದೆ ? ಗೌತಮ, ಬುದ್ಧ, ಗುರುನಾನಕ್ ಎಲ್ಲಾ ಜಾತಿಯವರಿಂದಲೂ ಭಿಕ್ಷೆ ಪಡೆಯುತ್ತಿದ್ದರು, ಯಾರ ಮನೆಯಲ್ಲಾದರೂ ಊಟ ಮಾಡುತ್ತಿದ್ದರು. ತಮ್ಮ ಸಂಘಗಳಲ್ಲಿ ಸಮಾನ ಸಹಪಂಕ್ತಿ ಭೋಜನವನ್ನು ಏರ್ಪಡಿಸಿದರು. ಹಿಂದೂ ಧರ್ಮದ ತ್ರಿಮತಸ್ತರು ಏಕೆ ಹೀಗೆ ನಡೆದುಕೊಳ್ಳಲಿಲ್ಲ ?

ಶಿವದಾಸ ಸಾಹಿತ್ಯ ಹಾಗೂ ಹರಿದಾಸ ಸಾಹಿತ್ಯ ಎರಡೂ ಸಮೃದ್ಧವಾಗಿವೆ. ಸಾಹಿತ್ಯ ದೃಷ್ಟಿಯಿಂದ ಎರಡೂ ಸ್ವಾಗತಾರ್ಹವೆ. ಆದರೆ, ಪೌರಾಣಿಕ ಹಿನ್ನೆಲೆಯಲ್ಲಿ ಎರಡೂ ಚಿಕಿತ್ಸೆಗೆ ಒಳಪಡಬೇಕು. ಶಿವದಾಸ ಸಾಹಿತ್ಯಕ್ಕಿಂತ ಹರದಾಸ ಸಾಹಿತ್ಯದಲ್ಲಿ ಅವೈಜ್ಞಾನಿಕತೆ, ಅವೈಚಾರಿಕತೆ, ಅಂಧಾನುಕರಣೆ ಹೆಚ್ಚು. ಇವುಗಳನ್ನು ನಿರ್ದಾಕ್ಷಿಣ್ಯವಾಗಿ ತೆಗೆದುಹಾಕಿದರೆ, ಕೀರ್ತನ ಸಾಹಿತ್ಯದ ಉತ್ತಮ ಅಂಶಗಳು ಎಲ್ಲರಿಗೂ ಎಲ್ಲಾ ಕಾಲಕ್ಕೂ ಉಪಯುಕ್ತವಾಗುತ್ತವೆ. ಇದಕ್ಕೆ ವಿಜಯದಾಸರ ಕೀರ್ತನೆಗಳೂ ಹೊರತಲ್ಲ.

ಹಿಂದೂ ವೈದಿಕರಲ್ಲಿ–ತ್ರಿಮತಸ್ಥರಲ್ಲಿ–ಮೂವರು ಧಾರ್ಮಿಕ ಆಚಾರ್ಯರಿದ್ದಾರೆ. ಅವರಿಂದ ಮೂರು ಧಾರ್ಮಿಕ ಸಿದ್ಧಾಂತಗಳು ಪ್ರಚಾರಕ್ಕೆ ಬಂದಿವೆ. ಅವುಗಳನ್ನು ಅವರವರ ಭಕ್ತರು ಹಾಗೂ ಅನುಯಾಯಿಗಳು ನಿಷ್ಠೆಯಿಂದ ಅನುಸರಿಸುತ್ತಾರೆ. ಅವು ಹೀಗಿವೆ :

ಅದ್ವೈತ ಸಿದ್ಧಾಂತ

ಜಗತ್ತು ಮಿಥ್ಯ. ಜೀವ (ಆತ್ಮ)–ಈಶ್ವರ (ಪರಮಾತ್ಮ) ಒಂದೇ. ಸತ್ಕರ್ಮ ಶುದ್ಧಾಂತ : ಕರಣದಿಂದ ಪರಬ್ರಹ್ಮ ಪರೋಕ್ಷದ ಮೂಲಕ ಬ್ರಹ್ಮವಾಗುವರು–ಜೀವರು. ಅಂದರೆ ಆತ್ಮ ಪರಮಾತ್ಮನಾಗಬಹುದು. ಶ್ರೀ ಶಂಕರಾಚಾರ್ಯರು ಈ ಸಿದ್ಧಾಂತದ ಪ್ರತಿಪಾದಕರು.

ವಿಶಿಷ್ಟಾದ್ವೈತ ಸಿದ್ಧಾಂತ

ಜಗತ್ತು ಸತ್ಯ. ಜೀವ–ಈಶ್ವರ ಬೇರೆ ಬೇರೆ. ಮೋಕ್ಷಾನಂತರದಲ್ಲಿ ಜೀವ ಪರಮಾತ್ಮ ಒಂದೇ. ಅಂದರೆ ಭೇದವಿಲ್ಲ. ಶ್ರೀರಾಮಾನುಜಾಚಾರ್ಯರು ಈ ಸಿದ್ಧಾಂತದ ರೂವಾರಿ.

ದ್ವೈತ ಸಿದ್ಧಾಂತ

ಜೀವ–ಜಡ–ಈಶ್ವರ ಬೇರೆ ಬೇರೆ. ಜಗತ್ತು ಸತ್ಯ. ವೇದ–ಜೀವರು–ಈಶ–ಅನಾದಿ ನಿತ್ಯರು. ಶ್ರೀಹರಿ ಸರ್ವೋತ್ತಮ. ವಾಯು ಜೀವೋತ್ತಮ. ಮೋಕ್ಷಾನಂತರವೂ ಜೀವ–ಜೀವರ ಸುಖಾನುಭವದಲ್ಲೂ ತಾರತಮ್ಯ ಉಂಟು. ಜೀವ–ಈಶ್ವರರದು ದಾಸ–ಧಣಿಯರ ಸಂಬಂಧ.

ಇದು ಮಧ್ವಚಾರ್ಯರ 'ತತ್ತ್ವವಾದ'.

'ದ್ವೈತ ಸಿದ್ಧಾಂತ' ಪ್ರತಿಪಾದಕರಾದ ಶ್ರೀ ಮಧ್ವಾಚಾರ್ಯರಿಗೆ (ಮೂಲ–ಹುಟ್ಟು ಹೆಸರು ವಾಸುದೇವ) ಪೂರ್ಣಬೋಧ, (ಪೂರ್ಣಪ್ರಜ್ಞ) ಆನಂದತೀರ್ಥ, ದಶಪ್ರಮತಿ, ಸರ್ವಜ್ಞಾಚಾರ್ಯ, ಅನುಮಾನ ತೀರ್ಥ, ಸುಖತೀರ್ಥ ಎಂದೂ ಹೆಸರುಗಳುಂಟು.

ಇವರು ಉಡುಪಿಯ ಪಾಜಕ ಕ್ಷೇತ್ರದಲ್ಲಿ ಹುಟ್ಟಿದರು. ತಂದೆ : ಮಧ್ಯಗೇಹಭಟ್ಟ (ನಾರಾಯಣ ಭಟ್ಟ), ತಾಯಿ : ವೇದವತಿ. ಹುಟ್ಟಿದ್ದು : ಕ್ರಿ.ಶ. 1205.

37 ಸಂಸ್ಕೃತ ಗ್ರಂಥಗಳನ್ನು ಬರೆದಿದ್ದಾರೆ. ಉಡುಪಿಯ ಅನಂತೇಶ್ವರನ ಸನ್ನಿಧಿಯಲ್ಲಿ ಶ್ರೀಕೃಷ್ಣನ ಪ್ರತಿಮೆಯನ್ನು ಸ್ಥಾಪಿಸಿ ಪೂಜಿಸಿ ಶ್ರೀ ಕ್ಷೇತ್ರವಾಗಿಸಿದರು. ಉಡುಪಿಯ ಮಧ್ವಸರೋವರದ ದಂಡೆಯ ಮೇಲೆ ಶ್ರೀಕೃಷ್ಣನ ವಿಗ್ರಹವನ್ನು ಸ್ಥಾಪಿಸಿದರು.

ಕ್ರಿ.ಶ. 1293 ರಲ್ಲಿ ನಿಧನ–ಅದೃಶ್ಯರಾದರು–ಸಶರೀರರಾಗಿ. 88 ವರ್ಷ ಬದುಕಿದ್ದರು. ತತ್ತ್ವಶಾಸ್ತ್ರಕ್ಕೆ ಅಪಾರ ಕೊಡುಗೆ ನೀಡಿದರು.

ವಿಜಯದಾಸರು ಮಧ್ವಾಚಾರ್ಯರು ಹಾಗೂ ಅವರ ಸಿದ್ಧಾಂತವನ್ನು ಒಪ್ಪಿಕೊಂಡು ಬದುಕು ಸಾಗಿಸಿದರು. ಅದರ ಜೊತೆಯಲ್ಲೇ ತಮ್ಮ ಅಸ್ಮಿತೆಯನ್ನು ಸ್ಥಾಪಿಸಿದರು.

ವಿಜಯದಾಸರು ಕನಕದಾಸರ ಕೆಲವು ಕೀರ್ತನೆಗಳನ್ನು ಪುರಂದರದಾಸರ ಹೆಸರಿಗೆ 'ಮತಾಂತರ' ಮಾಡಿದರೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರ. ಅವರ

ದಾರಿಯಲ್ಲಿ ಮುಂದುವರಿದ ಮುಂದಿನವರು ಕೀರ್ತನ ಮತಾಂತರದಲ್ಲಿ ಅತಿಯಾಗಿ ತೊಡಗಿ ಗೊಂದಲ ಉಂಟುಮಾಡಿದ್ದಾರೆ ಎನ್ನುವುದುಂಟು. ಈ ಬಗೆಗೆ ತಲಸ್ಪರ್ಶಿಯಾಗಿ ಸಂಶೋಧನೆ ನಡೆಸಿ ಸತ್ಯವನ್ನು ಸ್ಥಾಪಿಸಬೇಕಾಗಿದೆ. ಇದು ನಿಷ್ಪಕ್ಷಪಾತ ವಿದ್ವಾಂಸರ ಹೊಣೆ.

ಸಹಾಯಕ ಸಾಹಿತ್ಯ

೧. ಡಾ॥ ಕೆ. ಗೋಕುಲನಾಥ್–ಶ್ರೀ ವಿಜಯದಾಸರು

ಜೀವನ ಮತ್ತು ಕೃತಿಗಳ ಸಮೀಕ್ಷೆ, ೧೯೭೮.

೨. ಶ್ರೀವಿಜಯದಾಸರ ಸುಳಾದಿಗಳು (ಪ್ರಾರ್ಥನಾಭಾಗ) ೧೯೪೬. (ಸಂಗ್ರಾಹಕರು : ಹನುಮಂತರಾವ ಕುಲಕರ್ಣಿ).

೩. ಹರಿದಾಸ ಸಾಹಿತ್ಯ : ಪ್ರೊ॥ ಜಿ. ಅಬ್ದುಲ್ ಬಷೀರ್, ೨೦೦೧.

■

ಕರ್ನಾಟಕ ಲೋಚನ
ಸಂಪುಟ ೨೬, ಸಂಚಿಕೆ ೧-೨
ಜನವರಿ-ಡಿಸೆಂಬರ್

೨. ಸ್ತ್ರೀವಾದಿ ನೆಲೆಯಲ್ಲಿ ಕನ್ನಡ ಜನಪದ ಮಹಾಕಾವ್ಯಗಳು- ಒಂದು ನೋಟ

-ಎಂ. ರೇಖಾ

ಜನಪದ ಸಾಹಿತ್ಯದ ಮೇರು ಬಿಂದುಗಳಲ್ಲಿ ಪ್ರಮುಖವಾದವು ಜನಪದ ಮಹಾಕಾವ್ಯಗಳು. ಕೇವಲ ಮೌಖಿಕ ಪರಂಪರೆಯನ್ನು ಹೊಂದಿರುವ ಜನಪದ ಸಾಹಿತ್ಯವೂ ಶಿಷ್ಟಸಾಹಿತ್ಯದಂತೆ ಎಲ್ಲಾ ಪ್ರಕಾರಗಳಲ್ಲಿಯೂ ತನ್ನನ್ನು ತಾನು ಒಗ್ಗೂಡಿಸಿಕೊಂಡಿದೆ. ಜನಪದರ ವಿಶಿಷ್ಟ ಕಲೆಗಾರಿಕೆಯೊಂದಿಗೆ ತನ್ನದೇ ಆದ ಸಂಸ್ಕೃತಿ, ಸಂಪ್ರದಾಯ, ಆಚಾರ-ವಿಚಾರಗಳ ಹಿನ್ನೆಲೆಯಲ್ಲಿ ರಚನೆಯಾಗಿದ್ದರೂ ಯಾವುದೇ ವಿಮರ್ಶಾ ಮಾದರಿಗೂ ಒಗ್ಗುವಂತಹದ್ದು ಜನಪದದ ವಿಶೇಷವಾಗಿದೆ. ಅದರಲ್ಲಿ ಸ್ತ್ರೀವಾದಿ ನೆಲೆಯೂ ಒಂದಾಗಿದೆ. ಇತ್ತೀಚೆಗೆ ಜಾನಪದವನ್ನು ಅಂತಾರಾಷ್ಟ್ರೀಯ ನೆಲೆಯಲ್ಲಿ ಹಾಗೂ ವಿವಿಧ ಸಿದ್ಧಾಂತಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗುತ್ತಿದೆ. ಇದರಿಂದಾಗಿ ಜಾನಪದವು ಒಂದು ಸಾಂಸ್ಕೃತಿಕ ಸಂಕಥನದ ರೂಪದಲ್ಲಿ ಬೆಳೆಯುತ್ತಿದೆ. ಇದೀಗ ಜೆಂಡರ್ (Gender) ನೆಲೆಯಲ್ಲಿ ನೋಡುವ ಹೊಸ ಪರಿಕಲ್ಪನೆಯಾಗಿ ಸ್ತ್ರೀವಾದಿ ಜಾನಪದ ಬೆಳಕಿಗೆ ಬರುತ್ತಿದೆ.

ಲಿಖಿತ ಸಂದರ್ಭಕ್ಕಿಂತ ಭಿನ್ನವಾಗಿ ಜಾನಪದವು ವಿಶಿಷ್ಟ ಮಹಿಳಾ ಪರಂಪರೆಯನ್ನು ಹೊಂದಿದೆ. ಬಹುತೇಕ ಜಾನಪದ ಪ್ರಕಾರಗಳ ರಚನೆಕಾರರು, ನಿರೂಪಕರು, ಗಾಯಕರು ಮಹಿಳೆಯರಾಗಿದ್ದು; ಅವಳ ಅಭಿವ್ಯಕ್ತಿ ಶಕ್ತಿಯನ್ನು, ಲೋಕದೃಷ್ಟಿಯನ್ನು ದಾಖಲಿಸಿವೆ. 19ನೇ ಶತಮಾನದಲ್ಲಿ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಪಿತೃಪ್ರಧಾನ ವ್ಯವಸ್ಥೆಯ ವಿರುದ್ಧ ತಲೆ ಎತ್ತಿದ ಧ್ವನಿಯೇ 'ಸ್ತ್ರೀವಾದ'. ಇದು ಕ್ರಮೇಣ ಪೌರ್ವಾತ್ಯ ರಾಷ್ಟ್ರಗಳಿಗೂ ವ್ಯಾಪಿಸಿತು. ಸ್ತ್ರೀ-ಪುರುಷರು ಬೇರೆ ಬೇರೆ ಲಿಂಗಕ್ಕೆ ಸೇರಿದವರು ಎಂಬ ಜೈವಿಕ ಸಂಗತಿಯನ್ನು ಆಶ್ರಯಿಸಿ ರಾಜಕೀಯ, ಆರ್ಥಿಕ, ಸಾಮಾಜಿಕ, ಕೌಟುಂಬಿಕ ಮೊದಲಾದ ಕ್ಷೇತ್ರಗಳಲ್ಲಿ 'ಸ್ತ್ರೀ'ಯನ್ನು ಪ್ರತ್ಯೇಕ ನೆಲೆಯಲ್ಲಿ ಪಿತೃಪ್ರಧಾನ ವ್ಯವಸ್ಥೆ ನಿಲ್ಲಿಸಿದೆ. ಇವುಗಳ ವಿರುದ್ಧ ತಲೆಯೆತ್ತಿದ್ದ ಧ್ವನಿಯೇ ಸ್ತ್ರೀವಾದ.

ಸಾಹಿತ್ಯ ಕ್ಷೇತ್ರದಲ್ಲಿಯೂ, ಸಾಹಿತ್ಯ ಕೃತಿಗಳಲ್ಲಿಯೂ 'ಸ್ತ್ರೀ'ಯನ್ನು ಪ್ರಧಾನ ನೆಲೆಗೆ ತರದೆ ಕೇವಲ ಪೂರಕ ಪಾತ್ರಗಳಿಗೆ ಸೀಮಿತಗೊಳಿಸಿರುವುದು ಸಹಜವಾಗಿದೆ. ಇವೆಲ್ಲದರ ವಿರುದ್ಧ ಸ್ತ್ರೀವಾದಿ ನೆಲೆಯ ವಿಮರ್ಶೆ ಅಸ್ತಿತ್ವವನ್ನು ಪಡೆದುಕೊಂಡಿತು. ಕನ್ನಡದ ಜನಪದ ಮಹಾಕಾವ್ಯಗಳೂ ಸಹ ಸ್ತ್ರೀ ಪಾತ್ರಗಳನ್ನು ಅಧೀನತೆಯ ನೆಲೆಯಲ್ಲಿಯೇ ಪೋಷಿಸಿ ಚಿತ್ರಿಸಿವೆ. ಹಾಗೆಂದು ಈ ಪಾತ್ರಗಳಿಗೆ ಯಾವುದೇ ಮನ್ನಣೆ ಇಲ್ಲವೆಂದಲ್ಲ. ಪೂರಕ, ಅಧೀನತೆಯಲ್ಲಿಯೂ ತಮ್ಮ ವಿಶೇಷತೆಯನ್ನು ಕಾಪಾಡಿಕೊಂಡಿರುವುದು ಈ ಪಾತ್ರಗಳ ಔಚಿತ್ಯವಾಗಿದೆ. ಮಲೆಮಾದೇಶ್ವರ ಕಾವ್ಯ, ಮಂಟೇಸ್ವಾಮಿ ಕಾವ್ಯ, ಮೈಲಾರಲಿಂಗನ ಕಾವ್ಯ, ಜುಂಜಪ್ಪನ ಕಾವ್ಯಗಳನ್ನು ಗಮನಿಸಿದರೂ ಈ ಮಹಾ ಕಾವ್ಯಗಳು ಪುರುಷರು-ಪುರುಷರಿಗಾಗಿ ರಚಿಸಿದ ಕಾವ್ಯಗಳೆಂದು ಹೇಳಲು ಸಾಧ್ಯವಿಲ್ಲದಿದ್ದರೂ ಇಲ್ಲಿನ ಕಥಾನಾಯಕರು ಮಾತ್ರ ಪುರುಷರೇ ಆಗಿದ್ದಾರೆ. ಸವದತ್ತಿ ಎಲ್ಲಮ್ಮನ ಕಾವ್ಯವೊಂದೇ ಇದಕ್ಕೆ ಅಪವಾದವಾಗಿ ಸಿಗುವುದಾಗಿದೆ. ಇಲ್ಲಿನ ಕಥಾನಾಯಕರ ವಿಶೇಷವೆಂದರೆ ಐತಿಹಾಸಿಕ ವ್ಯಕ್ತಿಗಳು ದೈವತಕ್ಕೆ ಏರಲ್ಪಟ್ಟಿರುವುದು ಮತ್ತು ಒಂದು ಜನಾಂಗದ ಪ್ರತಿನಿಧಿಗಳು, ರಕ್ಷಕರು ಸೃಷ್ಟಿಯ ಮೂಲವೆನೆಸಿದವರು. ಮನುಷ್ಯಕುಲದ ಪ್ರತಿನಿಧಿಗಳಂತೆಯೂ ಚಿತ್ರಿತವಾಗಿದ್ದಾರೆ. ಪಿತೃಪ್ರಧಾನ ವ್ಯವಸ್ಥೆಯ ಮೌಲ್ಯಗಳನ್ನು ಉಳಿಸುವವರಾಗಿದ್ದಾರೆ. ಪುರುಷನೇ ಈ ಸಮಾಜದ ಕೇಂದ್ರ ಮತ್ತು ನಿಯಂತ್ರಕನಾಗಿ ಕಾಣಬರುತ್ತಾನೆ. ಈ ನಾಯಕರನ್ನು ಪವಾಡಗಳ ಮೂಲಕ ಚಿತ್ರಿಸಿರುವುದು ಇದಕ್ಕೆ ಮತ್ತಷ್ಟು ಪುಷ್ಟಿ ದೊರೆಯುತ್ತದೆ. ಇನ್ನು ಇಲ್ಲಿ ಕಾಣಬರುವ ಸ್ತ್ರೀಪಾತ್ರಗಳು ಪೂರಕ ಪಾತ್ರಗಳಿಗೆ ಸೀಮಿತವಾಗಿದೆ. ಇದರ ಜೊತೆಜೊತೆಯಾಗಿ ಹಲವು ಸ್ವತಂತ್ರ ಸ್ತ್ರೀ ಪಾತ್ರದ ಮಾದರಿಗಳು ಕಾಣಬರುತ್ತವೆಯಾದರೂ ಕಾವ್ಯದ ಮುಖ್ಯ ನೆಲೆಗೆ ಮಾತ್ರ ಬರುವುದಿಲ್ಲ.

'ಮಲೆ ಮಾದೇಶ್ವರ' ಕಾವ್ಯದಲ್ಲಿ ಕಾಣಿಸಿಕೊಳ್ಳುವ 'ಆದಿಶಕ್ತಿ ಮಾದಪ್ಪನ ಸಾಲು', 'ಸುಂಕಮ್ಮನ ಸಾಲು', 'ಬೇವಿನಹಟ್ಟಿ ಕಾಳಿಯ ಸಾಲು' ಪ್ರತ್ಯೇಕ ಸಾಲುಗಳಾಗಿ ಪರಿಗಣಿತವಾದ ಸ್ವತಂತ್ರ ಸ್ತ್ರೀ ಪಾತ್ರಗಳ ಮಾದರಿಗಳು. ಆದರೆ ಕಾವ್ಯದ ಮೂಲ ಉದ್ದೇಶ ಪೂರೈಕೆಯಲ್ಲಿ ಮಾತ್ರ ಪೂರಕ ಪಾತ್ರಗಳೇ ಆಗಿ ಉಳಿಯುತ್ತವೆ. 'ಆದಿಶಕ್ತಿ ಸಾಲಿನ' ಆದಿಶಕ್ತಿಯ ಸ್ತ್ರೀ ಪಾತ್ರ ಸೃಷ್ಟಿಯ ಮೂಲದ ಪ್ರತೀಕ, ಅವಳ ಶಕ್ತಿ ವಿದ್ಯೆ ಬುದ್ಧಿಗಳು ಮಾತೃಪ್ರಧಾನ ವ್ಯವಸ್ಥೆಯ ಪ್ರತೀಕ. ಆದರೆ ಮಾದೇಶ್ವರ ತನ್ನ ಬುದ್ಧಿ ತಂತ್ರಗಳಿಂದ ಆದಿಶಕ್ತಿಯ ಸಕಲ ವಿದ್ಯೆಗಳನ್ನು ಪಡೆದು ಕೊನೆಗೆ ಅವಳನ್ನು ಭಸ್ಮ ಮಾಡುತ್ತಾನೆ. ಇದು ಇಡೀ ಪುರುಷ ಪ್ರಧಾನ ವ್ಯವಸ್ಥೆಯ ಜಾರಿಯನ್ನು ಪ್ರನಿಧಿಸುತ್ತದೆ. ಮಾತೃಪ್ರಧಾನ ವ್ಯವಸ್ಥೆಯಿಂದ ಪಿತೃಪ್ರಧಾನ ವ್ಯವಸ್ಥೆಯಾಗಿ ಪರಿವರ್ತನೆ, ಅಧಿಕಾರ ಹಸ್ತಾಂತರದ ಮೇಲೆ ಸಹಾ ಇದು ಬೆಳಕು ಚೆಲ್ಲುತ್ತದೆ. ಅದೇ ರೀತಿ ಈಡಿಪಸ್ ಕಾಂಪ್ಲೆಕ್ಸ್‌ನ ಚಿತ್ರಣವೂ ಇಲ್ಲಿದೆ. ತಾಯಿ ಮಗನ ಸಂಬಂಧ ಬಯಸುವುದು ಅಸಾಂಪ್ರದಾಯಕವೆನಿಸಿದರೂ ಇದರ ಹಿಂದಿನ ಉದ್ದೇಶ

'ಮುಂದಿನ ಪೀಳಿಗೆ'ಯ ಉಳಿಕೆಯಾಗಿದೆ. "ಬಾಳಾಟ ಮಾಡ್ದೆ ಹೋದ್ರೆ ಪ್ರಪಂಚಕ್ಕೆ ಸುಳಿನೇ ಇರೋಲ್ಲ" ಎಂಬ ಆದಿಶಕ್ತಿಯ ಮಾತಿನಿಂದಲೇ ಇದು ವೇದ್ಯವಾಗುತ್ತದೆ. ಆದರೆ ಮುಂದೆ ಮಾದೇಶ್ವರ ಮಾಡಿದ್ದೇನು? ನಂಬಿಕೆಗೆ ದ್ರೋಹ. ತಾಯಿಯನ್ನು ಸುಟ್ಟು ತಾನು ಜೀವಕೋಟಿಯ ಸೃಷ್ಟಿಕರ್ತನಾಗುತ್ತಾನೆ. ಅಧಿಕಾರ ಹಸ್ತಾಂತರದ ಸಂಪೂರ್ಣ ಚಿತ್ರಣವೇ ಇಲ್ಲಿ ನಮ್ಮ ಕಣ್ಣಮುಂದೆ ಬರುತ್ತದೆ. "ಜಗತ್ತನ್ನು ಗಂಡು ತನಗೆ ಬೇಕಾದಂತೆ ಸೃಷ್ಟಿಸಿದ್ದಾನೆ. ಅವನ ದೃಷ್ಟಿಕೋನಕ್ಕೆ ಅನುಗುಣವಾಗಿ ಜಗತ್ತಿನ ನಿಯಂತ್ರಣವನ್ನು ಮಾಡುತ್ತಾನೆ" ಎಂಬ ಸೈಮನ್ ಡಿಬುವಾರ ನಿಲುವು ಇಲ್ಲಿ ಮನನೀಯ. ಈ ನಿಲುವು ಇಲ್ಲಿಯವರೆಗಿನ ಒಟ್ಟು ನಂಬಿಕೆಗಳನ್ನೇ ಪ್ರಶ್ನಿಸುವಂಥದ್ದು. ಹೊಸ ಆಲೋಚನಾಕ್ರಮವನ್ನು ಸೃಜಿಸುವಂಥದ್ದು ಕೂಡ. ಕಾವ್ಯ ಸ್ತ್ರೀ ಪ್ರಧಾನ ಹಿನ್ನೆಲೆಯಲ್ಲಿ ಪ್ರಾರಂಭವಾದರೂ ಕ್ರಮೇಣ ಆಕ್ರಮಣಕಾರಿ ಧೋರಣೆಯಿಂದ ಪುರುಷನೇ ಕೇಂದ್ರ ಮತ್ತು ನಿಯಂತ್ರಕನಾಗಿ ನಾಯಕ ಸ್ಥಾನವನ್ನು ಭದ್ರಪಡಿಸಿಕೊಳ್ಳುತ್ತಾನೆ.

ಸಮಾಜ ವ್ಯವಸ್ಥೆ ಮತ್ತು ನಿರ್ವಹಣೆಯಲ್ಲಿ ಪುರುಷನಿಗೆ ಪ್ರಾಮುಖ್ಯತೆಯಿದೆ. ಕೌಟುಂಬಿಕ, ಧಾರ್ಮಿಕ, ರಾಜಕೀಯ, ಆರ್ಥಿಕ, ಸಾಮಾಜಿಕ, ನ್ಯಾಯಿಕ, ಕಲಾತ್ಮಕ, ಸಾಂಸ್ಕೃತಿಕ ಮೊದಲಾದ ಎಲ್ಲಾ ಚಟುವಟಿಕೆಗಳಲ್ಲಿ ಹೆಣ್ಣು ಗಂಡಿಗೆ ಅಧೀನಳಾಗಿಯೇ ಬದುಕಬೇಕಾಗಿದೆ. ಪ್ರಾಚೀನ ಸಾಹಿತ್ಯದಿಂದ ಆಧುನಿಕ ತತ್ವಚಿಂತನೆಯಲ್ಲಿಯೂ ಹೆಣ್ಣನ್ನು ನಿಷೇಧಾತ್ಮಕವಾಗಿಯೇ ನಿರ್ವಚಿಸಲಾಗಿದೆ. ಇದಕ್ಕೊಂದು ಉತ್ತಮ ಉದಾಹರಣೆಯಾಗಿ 'ಸುಂಕಮ್ಮನ ಸಾಲು' ನಿರೂಪಿತವಾಗಿದೆ. ಪುರಷ ದೌರ್ಜನ್ಯ, ದಬ್ಬಾಳಿಕೆ, ಸ್ತ್ರೀಯ ಅಸಹಾಯಕತೆಯನ್ನು ಸಾಂಪ್ರದಾಯಿಕವಾಗಿಯೇ ಈ ಸಾಲು ಚಿತ್ರಿಸುತ್ತದೆ. ಕೊನೆಗೆ ಸುಂಕಮ್ಮನ ಕಷ್ಟ ನಿವಾರಣೆಯಾಗುತ್ತದೆಯಾದರೂ ಅದಕ್ಕೆ ಕಾರಣವಾಗುವುದು ಒಬ್ಬ ಪುರುಷ ದೇವರು ಎಂಬುದು ಮಾತ್ರ ವಿಪರ್ಯಾಸ. ಸಂಪ್ರದಾಯವನ್ನು ಮೀರಿದ ಹೆಣ್ಣಿನ ಪಾತ್ರವಾಗಿ ಸಂಕಮ್ಮನ ಪಾತ್ರ ವಿಶಿಷ್ಟವೆನಿಸುತ್ತದೆ. ಸಾಂಸ್ಕೃತಿಕ ಕಟ್ಟಳೆಗಳ ಪರಿಧಿಯಲ್ಲಿಯೇ ಬದುಕುತ್ತ ಗಂಡಸಿನ ಕ್ರೂರತೆಯನ್ನು ಅಧಿಕಾರದ ಪರಿಧಿಯನ್ನು ದಾಟುವ ಹೆಣ್ಣಿನ ಮನಸ್ಸನ್ನು ಮತ್ತು ಕ್ರಿಯೆಗಳನ್ನು ಸೂಕ್ಷ್ಮವಾಗಿ ಇಲ್ಲಿನ ಸಂಕಥನ ನಿರೂಪಿಸುತ್ತದೆ. ಆದರೆ ಅದು ಸಹಾ ನೆರವೇರುವುದು ಸಾಂಪ್ರಾದಾಯಿಕ ನೆಲೆಯಲ್ಲಿ ದೇವರ ಕೃಪೆಯಿಂದ ಎಂಬುದು ಮಾತ್ರ ಮತ್ತೆ ಪುರುಷ ಕೇಂದ್ರಿತ ನೆಲೆಯನ್ನು ಸುತ್ತುವರೆಯುತ್ತದೆ. ಈ ಹಿನ್ನೆಲೆಯಲ್ಲಿ ಸುಂಕಮ್ಮ ಮಾದೇಶ್ವರನ ಹಿರಿಮೆಯನ್ನು ಎತ್ತಿಹಿಡಿಯುವ ಸ್ತ್ರೀ ಪಾತ್ರವಾಗಿ ಕಂಡುಬರುತ್ತಾಳೆ. ಕಾವ್ಯದ ಮೂಲ ಆಶಯವನ್ನು ಹೊರತುಪಡಿಸಿ ನೋಡಿದರೆ ಸುಂಕಮ್ಮನ ಧಾರ್ಮಿಕ ಭಕ್ತಿ, ನಿಷ್ಠೆ, ನಿಲುವುಗಳ ಜೊತೆಗೆ ಆಕೆಯ ತಾಯ್ತನದ ಸಹಜ ಬಯಕೆಯನ್ನು ಸಾಂಪ್ರದಾಯಿಕ ನೆಲೆಯಲ್ಲಿಯೇ ಪೂರೈಸಿಕೊಳ್ಳುವ ಹೆಣ್ಣಾಗಿ ಗಮನಸೆಳೆಯುವ ಪಾತ್ರವಾಗುತ್ತಾಳೆ. ತಾಳ್ಮೆ, ನಿಷ್ಠೆಗಳು ಹೆಣ್ಣಿನ ವಿಶಿಷ್ಟ ಗುಣಗಳು. ಈ ಗುಣಗಳ ಅಭಿವ್ಯಕ್ತಿಯ ರೂಪ ಸಂಕಮ್ಮಳ ಪಾತ್ರವಾಗಿದೆ. ಜೊತೆಗೆ ಪಿತೃಪ್ರಧಾನ

ವ್ಯವಸ್ಥೆಯ ಧೋರಣೆಗಳನ್ನು, ಗಂಡಿನ ಹಿರಿಮೆಯನ್ನು ಅಪ್ರಜ್ಞಾಪೂರ್ವಕವಾಗಿ ಒಪ್ಪಿಕೊಳ್ಳುವಂತೆ ಮಾಡಲಾಗಿದೆ. ಸುಂಕಮ್ಮ ತನ್ನ ಅಧೀನತೆಗೆ ತಾನೇ ಸಹಕರಿಸುವಂತೆ ಮಾಡಲಾಗಿದೆ.

'ಬೇವಿನಹಟ್ಟಿ ಕಾಳಿ'ಯ ಪಾತ್ರ ಆದಿಶಕ್ತಿಮತ್ತು ಸಂಕಮ್ಮನ ಪಾತ್ರಗಳಿಗಿಂತ ಭಿನ್ನವಾದದ್ದು. ಈ ಪಾತ್ರ ಹೆಣ್ಣಿನ ಮತ್ತೊಂದು ವಿಭಿನ್ನ ಮುಖವನ್ನು ತೋರಿಸುತ್ತದೆ. ಉದ್ಧಟತನ, ದರ್ಪ, ಅಟ್ಟಹಾಸ, ಠೇಂಕಾರಗಳ ಪ್ರತೀಕವಾಗಿ ಈ ಪಾತ್ರ ಗಮನ ಸೆಳೆಯುತ್ತದೆ. ಸಂಕಮ್ಮ ತಾಳ್ಮೆ, ಸಂಯಮಗಳ ನಿಧಿಯಾದರೆ, ಬೇವಿಹಟ್ಟಿ ಕಾಳಿ ಇದಕ್ಕೆ ಸಂಪೂರ್ಣ ವಿರುದ್ಧಳು. ಬಹುಶಃ ಹೆಣ್ಣಿನ ಈ ಸ್ವಭಾವ ಸಮಾಜದಲ್ಲಿ ಸ್ವೀಕೃತಕ್ಕಿಂತ ತಿರಸ್ಕೃತವೇ ಹೆಚ್ಚು. ಇದು ಕಾವ್ಯದ ಸಂದರ್ಭದಲ್ಲಿಯೂ ದಿಟವಾದ ಮಾತು. ಸ್ತ್ರೀಯ ಲಕ್ಷಣವೆನ್ನುವ ಅಧೀನತೆ, ಹಿಂಜರಿಕೆಗಳನ್ನೊಳಗೊಂಡ ಸಂಕಮ್ಮ ದರ್ಪದ ಕಾಳಿಗಿಂತ ವಿಶಿಷ್ಟವೆನಿಸುತ್ತಾಳೆ. ಕಾವ್ಯದಲ್ಲಿ ಕಾಳಿಗಿಂತ ಸಂಕಮ್ಮಳೇ ಹೆಚ್ಚು ಮನ್ನಣೆಯನ್ನು ಪಡೆದುಕೊಳ್ಳುತ್ತಾಳೆ. ಇದು ಒಪ್ಪಿತ ಸಮಾಜವೊಂದರ ಮನ್ನಣೆಯೂ ಹೌದು. ಒಟ್ಟಾರೆ ಬೇವಿನಹಟ್ಟಿ ಕಾಳಿಯ ದರ್ಪವನ್ನು ಅಡಗಿಸುವ ಮಾದೇಶ್ವರ, ಸಂಕಮ್ಮನ ಕಷ್ಟ ನಿವಾರಿಸುವ ಮಾದೇಶ್ವರ ಮತ್ತೆ ನಮ್ಮನ್ನು ಪುರುಷ ಪೂರ್ವಗ್ರಹಗಳ ಕಡೆ ಹೋಗುವಂತೆ ಮಾಡುತ್ತದೆ. ಆದರೆ ಅದಕ್ಕಿಂತಲೂ ಇಲ್ಲಿ ಮುಖ್ಯವಾಗಿ ಗಮನಿಸಬೇಕಾಗಿರುವುದು ಸ್ತ್ರೀಯ ದೃಷ್ಟಿಕೋನ, ಕಾಳಜಿ, ಮೌಲ್ಯಗಳು. ಈ ಹಿನ್ನೆಲೆಯಲ್ಲಿ ಆದಿಶಕ್ತಿ, ಸಂಕಮ್ಮ, ಬೇವಿನಹಟ್ಟಿ ಕಾಳಿಯ ಪಾತ್ರಗಳು ಸ್ತ್ರೀ ಸಂವೇದನೆಯ ವಿವಿಧ ಮುಖಗಳಾಗಿವೆ.

'ಮಂಟೇಸ್ವಾಮಿ' ಕಾವ್ಯ ಮಲೆಮಾದೇಶ್ವರ ಕಾವ್ಯಕ್ಕಿಂತ ಸ್ತ್ರೀವಾದಿ ನೆಲೆಯಲ್ಲಿ ವಿಭಿನ್ನವಾಗಿ ಅಭ್ಯಾಸಾರ್ಹವಾದದ್ದು. 12ನೇ ಶತಮಾನದ ಸಾಮಾಜಿಕ, ರಾಜಕೀಯ, ಆರ್ಥಿಕ ಕ್ಷೇತ್ರಗಳಿಗೆ ಪ್ರವೇಶಿಸಿದ ಧಾರ್ಮಿಕ ಕ್ರಾಂತಿ ಸಾಹಿತ್ಯದ ಮೇಲೂ ಪ್ರಭಾವ ಬೀರಿತು. ಕೇವಲ ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ ಸ್ವಾತಂತ್ರ್ಯವೇ ಅಲ್ಲದೆ ಸಾಹಿತ್ಯ ರಚನೆಯಲ್ಲೂ ಸ್ತ್ರೀಯರಿಗೆ ಅವಕಾಶ ದೊರೆಯಿತು. ಒಟ್ಟಾರೆ 'ಸ್ತ್ರೀ'ಯನ್ನು ನೋಡುವ ದೃಷ್ಟಿಕೋನವೇ ಬದಲಾಯಿತು. ಸಮಾನತೆ, ಸ್ವಾತಂತ್ರ್ಯಗಳ ಜೊತೆಗೆ ಅಭಿವ್ಯಕ್ತಿಯ ಸ್ವಾತಂತ್ರ್ಯವೂ ದೊರೆಯಿತು. ಮಂಟೇಸ್ವಾಮಿ ಕಾವ್ಯದ ನಾಯಕ ಪುರುಷನೇ ಆದರೂ, ಆತನ ಹಿರಿಮೆಯನ್ನು ಹೆಚ್ಚಿಸುವಲ್ಲಿ ಸ್ತ್ರೀ ಪಾತ್ರಗಳು ಪ್ರಮುಖವಾಗುತ್ತವೆ. ನೀಲಮ್ಮ, ಚೆನ್ನಾಜಮ್ಮ, ಕಲ್ಯಾಣಮ್ಮ ಇಲ್ಲಿನ ಪ್ರಮುಖ ಸ್ತ್ರೀ ಪಾತ್ರಗಳು. 'ನೀಲಮ್ಮ'ನ ಪಾತ್ರ ಸ್ತ್ರೀಯ ಸ್ವತಂತ್ರ ಅಭಿವ್ಯಕ್ತಿಯ ಪ್ರತೀಕವಾಗಿದೆ. ಧಾರ್ಮಿಕ ಕಾರ್ಯಗಳಲ್ಲಿ ಗಂಡ ಬಸವಣ್ಣನೊಡನೆ ಆಕೆಯ ಸಹಭಾಗಿತ್ವ, ಆಕೆಯ ಆಲೋಚನೆಗಳನ್ನು ಒಪ್ಪಿಕೊಳ್ಳುವ ಬಸವಣ್ಣ ಇವೆಲ್ಲ ಅಂದಿನ ಸಮಾಜದಲ್ಲಿ ಸ್ತ್ರೀ-ಸ್ಥಾನವನ್ನು ನಿರ್ಧರಿಸುವಂತಹದ್ದು. ನೀಲಮ್ಮನ ಭಕ್ತಿಯ ಉತ್ಕಟತೆ, ಧಾರ್ಮಿಕ ನಿಲುವು ಇಲ್ಲಿ ಮುಖ್ಯವಾಗುತ್ತದೆ. ಚೆನ್ನಾಜಮ್ಮ, ಕಲ್ಯಾಣಮ್ಮನ ಪಾತ್ರಗಳು ಕೇವಲ

ನಾಯಕನ ಸಿದ್ಧಿ-ಸಾಧನೆಗಳನ್ನು ಎತ್ತಿಹಿಡಿಯುವ, ಪ್ರಚುರಗೊಳಿಸುವ ಕಾರ್ಯಕ್ಕೆ ಸೀಮಿತಗೊಂಡಿವೆ.

ಮೈಲಾರಲಿಂಗ ಕಾವ್ಯದಲ್ಲಿ ಸ್ತ್ರೀ ಪಾತ್ರಗಳು ಹೆಚ್ಚಾಗಿ ಕಾಣಬರುತ್ತವೆ. 'ಗಂಗಿ ಮಾಳವ್ವನ ಕಥೆ', 'ಕುರುಬರ ಮಾಳವ್ವನ ಕಥೆ', 'ಕೋಮಲಾಯ ಕಥೆ', 'ಶೀಲವಂತಿಕೆಯ ಕಥೆ', ರಡ್ಡೇರ ನೀಲವ್ವನ ಕಥೆ'- ಹೀಗೆ ಒಂದೊಂದು ಸ್ತ್ರೀಪಾತ್ರವೂ ಪ್ರತ್ಯೇಕ ಪ್ರಸಂಗವಾಗಿ ನಿಲ್ಲುವುದು ಈ ಕಾವ್ಯದ ವಿಶೇಷವೆನಿಸುತ್ತದೆ. ಇಲ್ಲಿನ ಸ್ತ್ರೀ ಪಾತ್ರಗಳ ಮುಖಾಂತರ ನಮಗೆ ಪ್ರಾಚೀನ ಸಂಸ್ಕೃತಿಯ ಕುರುಹುಗಳು ದೊರೆಯುತ್ತವೆ. 'ಗಂಗಿಮಾಳವ್ವನ ಕಥೆ' ಮೂಲಕ ನಮಗೆ ಮೊದಲು 'ವಧುದಕ್ಷಿಣೆ' ತೆತ್ತು ವಿವಾಹವಾಗುವ ಪದ್ಧತಿ ಇತ್ತು ಎನಿಸುತ್ತದೆ. ಮಾತೃಪ್ರಧಾನ ಕುಟುಂಬ ವ್ಯವಸ್ಥೆಯಾದ ಬುಡಕಟ್ಟು ಜನಾಂಗದಲ್ಲಿ ಸಹ ಇಂದಿನ ವರದಕ್ಷಿಣೆಯಂತೆ ವಧುದಕ್ಷಿಣೆಯ ಪರಿಪಾಠವಿದ್ದಿರಬೇಕು. " ಏಳು ಕೋಟಿ ಹೊನ್ನು ನೀಡಿದರೆ ಮಾತ್ರ ಹೆಣ್ಣು ನೀಡುವುದಾಗಿ ಹೇಳುವ ತಿಮ್ಮಪ್ಪ ಅದಕ್ಕೆ ಒಪ್ಪುವ ಗೊರವ" ಇದನ್ನು ನೋಡಿದರೆ ಬಹುಶಃ ಗೊಲ್ಲ ಸಂಸ್ಕೃತಿಯಲ್ಲಿಯೇ ಈ ಪದ್ಧತಿ ಇದ್ದಿರಬಹುದು ಎನಿಸುತ್ತದೆ. ಗಂಗಿಮಾಳವ್ವ, ಕುರುಬರಮಾಳವ್ವ ಇಬ್ಬರನ್ನು ಮದುವೆ ಮಾಡಿಕೊಂಡು ಸವತಿಯರ ಜಗಳ ನೋಡುವ ಮೈಲಾರಲಿಂಗನ ಪಾತ್ರ ಸ್ತ್ರೀ ಶೋಷಣೆಯನ್ನು ಕಣ್ಣುಮುಂದೆ ತರುತ್ತದೆ. ಇನ್ನು ಶೀಲವಂತಿಕೆ, ನೀಲವ್ವ, ಕೋಮಲಿ ಪಾತ್ರಗಳು ಮೈಲಾರಲಿಂಗನ ಪವಾಡಗಳನ್ನು, ಮಹಿಮೆಯನ್ನು ಎತ್ತಿಹಿಡಿಯುವ ಪಾತ್ರಗಳಾಗಿ ಹಿಂದಿನ ಸಂಸ್ಕೃತಿಯ ನೆಲೆಯಲ್ಲಿಯೇ ಹೆಣ್ಣನ್ನು ನಿಲ್ಲಿಸುತ್ತವೆ.

ಪುರುಷ ಪಾತ್ರಗಳನ್ನು ಎತ್ತಿಹಿಡಿಯುವ ಸ್ತ್ರೀ ಪಾತ್ರಗಳನ್ನು ಅಲ್ಲಗಳೆಯುವಂತಿಲ್ಲ. ಕಾರಣ ಅಲ್ಲಿ ಸ್ತ್ರೀ ಪ್ರಾತ್ರಗಳ ಚಿತ್ರಣವೇ ವಿಶೇಷ. ಒಂದು ವೇಳೆ ಆಸ್ಥಾನದಲ್ಲಿ ಪುರುಷ ಪಾತ್ರಗಳೇನಾದರೂ ಇದ್ದರೆ ಕಾವ್ಯಕ್ಕೆ ಅಷ್ಟು ಸೊಗಸು ಬರುತ್ತಿರಲಿಲ್ಲ. ಕಾವ್ಯದ ಮೂಲ ಆಶಯವನ್ನು ಪೂರೈಸುವಲ್ಲಿಯೂ ವಿಫಲವಾಗುತ್ತಿದ್ದವು. ತಾಳ್ಮೆ, ಸಂಯಮ, ಸ್ವಾಭಿಮಾನ ಹೆಣ್ಣಿನ ಸ್ವಯಂಸಿದ್ಧಿ ಗುಣವಾಗಿದೆ. ಅಂತೆಯೇ ಆಕೆಯ ಧಾರ್ಮಿಕ ನಿಲುವು, ದೃಢಭಕ್ತಿಯು ಆಕೆಗೆ ಹೇಳಿ ಮಾಡಿಸಿದ ಲಕ್ಷಣದಂತೆ ಇವೆ. ಕಥಾಪುರುಷರ ಪೂರಕತೆಗೆ ಈ ಪಾತ್ರಗಳು ಬಂದಿವೆ ಎಂದು ಮೇಲುನೋಟಕ್ಕೆ ನಮಗೆ ಅನಿಸಿದರೂ ಸೂಕ್ಷ್ಮವಾಗಿ ಗಮನಿಸಿದಾಗ ಸ್ತ್ರೀ ಪಾತ್ರಗಳ ವೈಶಿಷ್ಟ್ಯ ನಮಗೆ ಅರಿವಾಗುತ್ತದೆ. ಸ್ತ್ರೀವಾದದ ಪ್ರಮುಖ ಆಶಯವೂ ಇದೆ. ಈ ವಿಮರ್ಶೆ ಓದುವ ರೀತಿಯನ್ನೇ ಬದಲಿಸುತ್ತದೆ.

ಸಂಪೂರ್ಣವಾಗಿ 'ಸ್ತ್ರೀ' ಕೇಂದ್ರಿತವಾದ ಜನಪದ ಮಹಾಕಾವ್ಯ 'ಸವದತ್ತಿ ಎಲ್ಲಮ್ಮ'ನ ಕಾವ್ಯ. ಎಲ್ಲಮ್ಮನ ಜನನ, ಬಾಲ್ಯ, ವಿವಾಹ, ದಾಂಪತ್ಯ ಜೀವನ ಮೊದಲ ಸಾಮಾನ್ಯ ಘಟ್ಟ. ಆದರೆ ಮುಂದಿನ ಎರಡನೆಯ ಘಟ್ಟ ವಿಶೇಷವಾದದ್ದು. ಇತರೆ

ಎಲ್ಲಾ ಜನಪದ ಮಹಾಕಾವ್ಯಗಳಲ್ಲಿ ಪುರುಷದೇವರು ತಮ್ಮ ಜನಾಂಗದ ರಕ್ಷಕರಾಗಿದ್ದರೆ, ಇಲ್ಲಿ 'ಸ್ತ್ರೀ' ಆಸ್ಥಾನವನ್ನು ಪಡೆದಿದ್ದಾಳೆ. ಪುರುಷನ ಅನುಮಾನಕ್ಕೆ, ದೌರ್ಜನ್ಯಕ್ಕೆ ಬಲಿಯಾಗಿ ಅಗ್ನಿಕುಂಡವನ್ನು ಪ್ರವೇಶಿಸುವ ಅಥವಾ ಚಿತೆಯೇರುವ ಸ್ತ್ರೀ ಪಾತ್ರಗಳನ್ನು ಶಿವಪುರಾಣಗಳಲ್ಲಿ ಕಾಣಬಹುದು. ಆದರೆ ಜನಪದರು ಅದೇ ಹೆಣ್ಣನ್ನು ದೈವತ್ವಕ್ಕೆ ಏರಿಸಿರುವುದು ವಿಶೇಷವಾಗಿದೆ. ಎಲ್ಲಮ್ಮ ದುಷ್ಟರನ್ನು ನಿಗ್ರಹಿಸಿ, ಭಕ್ತರನ್ನು ಸಂಪಾದಿಸಿ ಐತಿಹಾಸಿಕ ವ್ಯಕ್ತಿಯಾಗಿ ನಿಲ್ಲುತ್ತಾಳೆ. ಒಂದು ಜನಾಂಗದ ರಕ್ಷಕಳಾಗಿ, ಕುಲದೈವವಾಗಿ ಇಂದಿಗೂ ತನ್ನ ಸ್ಥಾನವನ್ನು ಎಲ್ಲಮ್ಮ ಉಳಿಸಿಕೊಂಡಿದ್ದಾಳೆ. ಮಾದಿಗ ಜನಾಂಗದ ದೈವವಾಗಿ, ಗ್ರಾಮದೇವತೆಯಾಗಿ ಇಂದಿಗೂ ಜೀವಂತಿಕೆಯ ಕುರುಹಾಗಿದ್ದಾಳೆ. ಮಂಟೇಸ್ವಾಮಿ, ಮಾದೇಶ್ವರ, ಮೈಲಾರ, ಜುಂಜಪ್ಪರಂತೆ ಎಲ್ಲಮ್ಮ ಸಹಾ ಇತಿಹಾಸದ ಪುಟಗಳಲ್ಲಿ ಕಾಣಬುರತ್ತಾಳೆ. ಈಕೆ ಸಾಮಾನ್ಯ ಸ್ತ್ರೀಯಾದರೂ ತದನಂತರದಲ್ಲಿ ಆಕೆಯ ಸಾಹಸ ಜೀವನದಿಂದ ದೈವತ್ವಕ್ಕೆ ಏರಿರಬಹುದು. ಎಲಮ್ಮ ಪ್ರತಾಪರುದ್ರನ ಸಮಕಾಲೀನಳು ಮತ್ತು ರಟ್ಟರಲ್ಲಿ ಯಾರೋ ಒಬ್ಬ ಕಾರ್ತವೀರ್ಯನ ತಂಗಿಯೂ ಆಗಿದ್ದಳೆಂಬುದರಿಂದ ಎಲ್ಲಮ್ಮ 12–13ನೇ ಶತಮಾನಗಳ ಅಂತರದಲ್ಲಿ ಜೀವಿಸಿದ್ದಳೆಂದು ಊಹಿಸಬಹುದಾಗಿದೆ.

ಒಟ್ಟಾರೆ ಜನಪದ ಮಹಾಕಾವ್ಯಗಳಲ್ಲಿ 'ಸ್ತ್ರೀ ಪಾತ್ರ'ಗಳ ಚಿತ್ರಣ ವಿಭಿನ್ನವಾಗಿ ಮೂಡಿಬಂದಿದೆ. ಕಥಾಪುರುಷರೊಂದಿಗೆ ಅವರ ಮಹಿಮೆಯನ್ನು, ಹಿರಿಮೆಯನ್ನು ಎತ್ತಿಹಿಡಿಯುವಲ್ಲಿ ಈ ಪಾತ್ರಗಳ ನೆರವು ಗಮನಾರ್ಹವಾಗಿದೆ. ಸ್ತ್ರೀ ಪಾತ್ರಗಳನ್ನು ಪುರುಷ ಪಾತ್ರಗಳ ಏಳಿಗೆಗೆ ದುಡಿಸಿಕೊಂಡಿರುವುದು ನೋಡಿದರೆ ಕಾಲಾಂತರದಲ್ಲಿ ಸಂದರ್ಭಾನುಸಾರ ಉದ್ದೇಶಪೂರ್ವಕವಾಗಿ ಈ ಅಂಶಗಳು ಸೇರಿದಂತೆ ಇದೆ. ಮಹಾಕಾವ್ಯಗಳ ಬಿಡಿಬಿಡಿ ಭಾಗಗಳು ಹೆಚ್ಚಾಗಿ ಪುರುಷರಲ್ಲಿ ಮೌಲಿಕವಾಗಿ ಹಾಡುವ ಸಂಪ್ರದಾಯವನ್ನು ಗಮನಿಸಿದರೆ ಈ ವಾದಕ್ಕೆ ಮತ್ತಷ್ಟು ಪುಷ್ಟಿ ದೊರೆಯುತ್ತದೆ.

ಆದರೆ ಶಿಷ್ಟ ಮಹಾಕಾವ್ಯಗಳಿಗೆ ಹೋಲಿಸಿಕೊಂಡರೆ ಜನಪದ ಮಹಾಕಾವ್ಯಗಳಲ್ಲಿನ ಸ್ತ್ರೀ ಪಾತ್ರಗಳ ಸ್ಥಾನಮಾನವೇ ನೂರು ಪಾಲು ಲೇಸು ಎನಿಸುತ್ತದೆ. ರಾಮಾಯಣ, ಮಹಾಭಾರತ, ಭಗವದ್ಗೀತೆ, ವೇದಗಳಲ್ಲಿ ಸ್ತ್ರೀ ಶೋಷಿತಳು, ಕೇವಲ ಪುರುಷ ಹಾದಿಯನ್ನೇ ಹಿಡಿದು, ಪುರುಷನ ಸಾಧನೆಗಾಗಿಯೇ ದುಡಿದವಳು. ಆದರೂ ಆ ಪಾತ್ರಗಳಿಗೆ ಅಲ್ಲಿ ನೀಡಿದ ಬಿರುದು ಯಾವುದು? 'ಕರುಣಾಳು ರಾಘವನಲ್ಲಿ ತಪ್ಪಿಲ್ಲ, ಹೆಣ್ಣಾಗಿ ಹುಟ್ಟಿದ ತನ್ನದೇ ತಪ್ಪು' ಎನ್ನುವ ರಾಮಾಯಣ, 'ಹೆಣ್ಣು ಎಲ್ಲಾ ಕೆಡುಕಿನ ಮೂಲ' ಎನ್ನುವ ಮಹಾಭಾರತ, 'ಹೆಣ್ಣು ಪಾಪಿ, ಗುಲಾಮಳು' ಎನ್ನುವ ಭಗವದ್ಗೀತೆ, 'ಎಲ್ಲ ಪ್ರಾರ್ಥನೆಗಳು ಗಂಡು ಮಗುವಿಗಾಗಿ' ಎನ್ನುವ ವೇದಗಳು ಪುರಷಪೂರ್ವಾಗ್ರಹಿತವೂ, ಲಿಂಗಾಧಾರಿತವೂ ಆಗಿದೆಯಲ್ಲದೆ, ಇವು ಪುರುಷರು ಪುರುಷರಿಗಾಗಿ ರಚಿಸಿದ ಸಾಹಿತ್ಯ ಎನ್ನುವುದರಲ್ಲಿ ಎರಡು ಮಾತಿಲ್ಲ.

ಕರ್ನಾಟಕ ಲೋಚನ
ಸಂಪುಟ ೨೬, ಸಂಚಿಕೆ ೧-೨
ಜನವರಿ-ಡಿಸೆಂಬರ್

೩. ತುಳುನಾಡಿನ ಭೂತಗಳಾಗಿ ಆರಾಧಿಸಲ್ಪಡುವ ಕನ್ನಡಿಗರು

-ಡಾ॥ ಲಕ್ಷ್ಮೀ ಜಿ. ಪ್ರಸಾದ

ತುಳುವರ ವಿಶಿಷ್ಟ ಆರಾಧನಾ ಪ್ರಕಾರ ಭೂತಾರಾಧನೆ. ತುಳುನಾಡಿನಲ್ಲಿ ಆರಾಧಿಸಲ್ಪಡುವ ಭೂತಗಳು ಕೆಟ್ಟ ಶಕ್ತಿಗಳಲ್ಲ. ಅವು ದುಷ್ಟ ಶಿಕ್ಷಕ-ಶಿಷ್ಟ ರಕ್ಷಕ ಶಕ್ತಿಗಳು. ಪೂತಂ ಎಂದರೆ ಪವಿತ್ರವಾದದ್ದು ಎಂಬ ಪದವೇ ಪೂತೊ ಆಗಿ ಬೂತೊ ಆಗಿರುವ ಸಾಧ್ಯತೆ ಇದೆ. ಸಂಸ್ಕೃತೀಕರಣದ ಪ್ರಭಾವದಿಂದ ಬೂತೊ ಎಂಬ ಪದ ಭೂತವಾಗಿ ಪರಿವರ್ತನೆಗೊಳಗಾಗಿರುವ ಸಾಧ್ಯತೆ ಇದೆ ಅಥವಾ ತುಳುನಾಡಿನ ಭೂತಗಳಲ್ಲಿ ಹೆಚ್ಚಿನವುಗಳು ಮನುಷ್ಯ ಮೂಲವನ್ನುಹೊಂದಿದ್ದು ಭೂತಕಾಲದಲ್ಲಿ ಇದ್ದವರೇ ಆಗಿದ್ದಾರೆ. ಗತಿಸಿದ ಆತ್ಮಗಳು ಎಂಬರ್ಥದಲ್ಲಿ ಕೂಡ ಭೂತ ಪದ ಪ್ರಯೋಗವಾಗಿರಬಹುದು. ಏನೇ ಆದರೂ ತುಳುನಾಡಿನಲ್ಲಿ ಪ್ರಚಲಿತ ಭೂತ ಶಬ್ದಕ್ಕೆ ಕನ್ನಡದಲ್ಲಿ ಪ್ರಚಲಿತವಿರುವ 'ಭೂತ' ಪದದ ಅರ್ಥವಿಲ್ಲ. ತುಳುವಿನ ಭೂತ ದೇವತಾವಾಚಿ ಶಬ್ದವಾಗಿದೆ. ತುಳುನಾಡಿನಲ್ಲಿ ಆರಾಧಿಸಲ್ಪಡುವ ಭೂತಗಳಲ್ಲಿ ಮೂರು ವರ್ಗಗಳಿವೆ. ಪೌರಾಣಿಕ ದೇವರುಗಳ ರೂಪ ಎಂದು ಪರಿಗಣಿಸಲ್ಪಟ್ಟಿರುವ ಭೂತಗಳದು ಒಂದು ವರ್ಗ. ಗುಳಿಗ, ಚಾಮುಂಡಿ, ಧೂಮಾವತಿ, ವಿಷ್ಣುಮೂರ್ತಿ, ಉಳ್ಳಾಕುಲು ಮೊದಲಾದ ಭೂತಗಳು ಈ ವರ್ಗದಲ್ಲಿ ಸೇರುತ್ತವೆ. ಪ್ರಾಣಿ ಮೂಲ ದೈವಗಳದು ಎರಡನೆಯ ವರ್ಗ. ಮಂಜುರ್ಲಿ, ಎರುಬಂಟ ಪಿಲಿಚಾಮುಂಡಿ ಮೊದಲಾದ ಭೂತಗಳು ಈ ವರ್ಗದಲ್ಲಿ ಸೇರುತ್ತವೆ. ಮೂಲತಃ ಮನುಷ್ಯರಾಗಿ ಹುಟ್ಟಿ ಅಸಾಮಾನ್ಯ ಸಾಹಸ ಮೆರೆದು, ದುರಂತವನ್ನಪ್ಪಿದ ನಂತರ ದೈವತ್ವಕ್ಕೇರಿ ಭೂತತ್ವವನ್ನು ಪಡೆದು ಆರಾಧಿಸಲ್ಪಡುವ ಭೂತಗಳದ್ದು ಮೂರನೆಯ ವರ್ಗ. ಕೋಟಿ-ಚೆನ್ನಯ್ಯ, ಕಲ್ಕುಡ-ಕಲ್ಲುರ್ಟಿ, ಬಿಲ್ಲರಾಯ-ಬಿಲ್ಲಾರ್ತಿ, ಕುಕ್ಕೆತ್ತಿ-ಬಳ್ಳು, ನಾರಳತ್ತಾಯ, ಬೀರ್ನಾಳ್ವ, ಬೀರ್ನಾಚಾರಿ, ಬಿರ್ಮಣ ಬೈದ್ಯ, ಪರವ ಭೂತ, ಪರಿವಾರ ನಾಯಕ, ಮರ್ಲುಮಾಣಿ, ಹಳ್ಳತ್ತಾಯ, ಬಚ್ಚನಾಯಕ ಮೊದಲಾದವರು ಈ ವರ್ಗದಲ್ಲಿ ಸೇರುತ್ತಾರೆ.

ತುಳುನಾಡಿನ ಹೆಚ್ಚಿನ ಭೂತಗಳು ಮಾನವ ಮೂಲವನ್ನು ಹೊಂದಿವೆ. ಇವರು ಮೂಲತಃ ತುಳುನಾಡಿನಲ್ಲಿ ಹುಟ್ಟಿ ಬೆಳೆದು ದುರಂತವನ್ನಪ್ಪಿ ದೈವತ್ವಕ್ಕೇರಿದವರಾಗಿದ್ದಾರೆ. ಇವರಲ್ಲಿ ಹೆಚ್ಚಿನವರು ತುಳುವರೇ ಆಗಿದ್ದಾರೆ. ಆದರೆ ಘಟ್ಟದ ಮೇಲಿನಿಂದ ಕೆಳಗಿಳಿದು ಬಂದು ಇಲ್ಲಿ ಯುದ್ಧ ಮಾಡಿ ಅಥವಾ ಬೇರಾವುದೋ ಕಾರಣದಿಂದ ದುರಂತವನ್ನಪ್ಪಿದ ಕನ್ನಡಿಗರು ಕೂಡ ಇಲ್ಲಿ ದೈವತ್ವಕ್ಕೇರಿ ಆರಾಧಿಸಲ್ಪಡುತ್ತಾರೆ. ಬಚ್ಚನಾಯಕ, ಕರಿಯಣ್ಣ ನಾಯಕ, ಬೈಸು ನಾಯಕ, ಕನ್ನಡಬೀರ, ಕನ್ನಡ ಭೂತ, ಕನ್ನಡಿಗ ಭೂತಗಳು ದೈವತ್ವಕ್ಕೇರಿದ ಕನ್ನಡಿಗರೇ ಆಗಿದ್ದಾರೆ. ಕನ್ನಡ ಮೂಲದ ಈ ಭೂತಗಳ ಪಾಡ್ದನ ಹಾಗೂ ನುಡಿಗಟ್ಟುಗಳು ಕನ್ನಡದಲ್ಲಿಯೇ ಇವೆ.

೧. ಬಚ್ಚನಾಯಕ

ಬಚ್ಚನಾಯಕ ದೈವದ ಕುರಿತಾದ ಪಾಡ್ದನದ ಅನೇಕ ಪಾಠಾಂತರಗಳು ಪ್ರಚಲಿತವಿದೆ. ಯೇನೆಕಲ್ಲು ಮಾಗಣೆಯ ನಾಲ್ಕೂರುಗುತ್ತು ಮನೆಯ ಸುಬ್ಬ ಗೌಡ (ಸುಬ್ಬಣಗೌಡ) ಪಂಜದ ಬಲ್ಲಾಳನಿಗೆ ಕಂದಾಯ ಸಂದಾಯ ಮಾಡುವುದಿಲ್ಲ. ಸುಬ್ಬ ಗೌಡನನ್ನು ಮಣಿಸುವುದಕ್ಕಾಗಿ ಪಂಜದ ಬಲ್ಲಾಳ ಘಟ್ಟದ ಮೇಲಿನಿಂದ ಬಚ್ಚನಾಯಕನನ್ನು ಕರೆಸುತ್ತಾನೆ. ಬಚ್ಚನಾಯಕ ಬರುವುದನ್ನು ತಿಳಿದ ಸುಬ್ಬ ಗೌಡ, ಅವನನ್ನು ದಾರಿಯಲ್ಲಿಯೇ ಕೊಲ್ಲಿಸುತ್ತಾನೆ. ಸುಬ್ಬ ಗೌಡನ ಆಣತಿಯಂತೆ ಮುಗೇರನೊಬ್ಬ ವಿಷ ಸವರಿದ ಬಾಣವನ್ನು ಬಚ್ಚನಾಯಕನ ಮೇಲೆ ಬಿಡುತ್ತಾನೆ. ಬಾಣಕ್ಕೆ ಬಲಿಯಾದ ಬಚ್ಚನಾಯಕ ಹೊಂಡದಲ್ಲಿ ಬಿದ್ದು ನರಳುತ್ತಾನೆ. ಆಗ ಸುಬ್ಬ ಗೌಡನ ಹೆಂಡತಿಯರು ಅವನ ಕೊರಳಿನ ಮೇಲೆ ನಿಂತು, ನಾಲಿಗೆ ತುಂಡರಿಸಿ ಕೊಲ್ಲುತ್ತಾರೆ. ಸಾಯುವ ಸಂದರ್ಭದಲ್ಲಿ ಪಶ್ಚಾತ್ತಾಪಪಟ್ಟು ಕ್ಷಮೆ ಕೇಳುವ ಬಚ್ಚನಾಯಕ ಮುಂದೆ ದೈವತ್ವಕ್ಕೇರಿ ಆರಾಧಿಸಲ್ಪಡುತ್ತಾನೆ. ಸುಳ್ಯ, ಗುತ್ತಿಗಾರು ಯೇನೆಕಲ್ಲುಗಳಲ್ಲಿ ಈತನನ್ನು ಆರಾಧಿಸುತ್ತಾರೆ.

೨. ಕರಿಯಣ್ಣ ನಾಯಕ

ಈತನನ್ನು ಬಚ್ಚನಾಯಕನ ಸಹೋದರನೆಂದು ಭಾವಿಸಲಾಗಿದೆ. ಈತ ಕೂಡ ಸುಬ್ಬ ಗೌಡರೊಂದಿಗೆ ಯುದ್ಧದಲ್ಲಿ ಬಂಧಿಸಲ್ಪಟ್ಟು ಸಾಯುತ್ತಾನೆ. ನಂತರ ದೈವತ್ವಕ್ಕೇರಿ ಆರಾಧಿಸಲ್ಪಡುತ್ತಾನೆ. ಮೊಗ್ರಾಲ್, ಮಡಪ್ಪಾಡಿ ಮೊದಲಾದೆಡೆಗಳಲ್ಲಿ ಈತನಿಗೆ ಆರಾಧನೆ ಇದೆ.

೩. ಬೈಸುನಾಯಕ

ಬಚ್ಚನಾಯಕ, ಕರಿಯಣ್ಣ ನಾಯಕರ ಸಂಧಿಯನ್ನು ಹೋಲುವ ಸಂಧಿಯನ್ನು ಬೈಸುನಾಯಕ ದೈವದ ಆರಾಧನೆಯ ಸಂದರ್ಭದಲ್ಲಿ ಹೇಳುತ್ತಾರೆ. ಬೈಸುನಾಯಕ

ಉಗ್ರ ಸ್ವಭಾವದ ದೈವ. ಬೈಸುನಾಯಕನ ಸಂಧಿಯಲ್ಲಿ ಯುದ್ಧದ ಪ್ರಸ್ತಾಪವಿಲ್ಲ. ಬೈಸುನಾಯಕ ಅಲ್ಲಿಗೆ ಬಂದಾಗ ಸಬ್ಬಣ್ಣ ಗೌಡರು ಮನೆಯಿಂದ ತುಸು ದೂರದಲ್ಲಿರುವ ಮರಕ್ಕೆ ಹತ್ತಿರದ ಬಳ್ಳಿಯಿಂದ ವೀಳ್ಯದೆಲೆ ಕೀಳುತ್ತಾ ಇರುತ್ತಾರೆ. ಬೈಸುನಾಯಕ ಸಬ್ಬಣ್ಣ ಗೌಡರ ಮನೆಗೆ ಹೋಗಿ ನೀರು ಕೇಳುತ್ತಾನೆ. ಆಗ ಚಿನ್ನದ ತಂಬಿಗೆಯಲ್ಲಿ ನೀರು ತಂದು ಕೊಡುತ್ತಾಳೆ. ಸಬ್ಬಣ್ಣ ಗೌಡರ ಮಡದಿ. ಆಕೆ ಆಗ ತುಂಬು ಗರ್ಭಿಣಿ. ತುಂಬು ಗರ್ಭಿಣಿಯಾದ ಅವಳು ತಂದ ನೀರನ್ನು ಬಲಗೈಯಲ್ಲಿ ತೆಗೆದುಕೊಂಡು, ಎಡಗೈಯಲ್ಲಿ ಅವಳನ್ನು ಹಿಡಿದೆಳೆದು ಅವಳ ಹೊಟ್ಟೆ ಸೀಳುತ್ತಾನೆ ಬೈಸುನಾಯಕ, ಅವಳ ಗರ್ಭದಲ್ಲಿರುವ ಮಗುವನ್ನು ಮಡಿಲಲ್ಲಿ ಇಟ್ಟಕೊಳ್ಳುತ್ತಾನೆ. ಅಷ್ಟರಲ್ಲಿ ಮನೆಯ ಹೆಂಗಸರು ಕಳ್ಳ ಕಳ್ಳಾ ಎಂದು ಕೂಗಿಕೊಳ್ಳುತ್ತಾರೆ. ಬೈಸುನಾಯಕ ಓಡಿ ಹೋಗಲು ಪ್ರಯತ್ನಿಸುತ್ತಾನೆ. ಆತ ಓಡುವಾಗ ಸಿಕ್ಕಿ ಹಾಕಿಕೊಳ್ಳುತ್ತಾನೆ. ಆತನ ಕೈ ಕಾಲನ್ನು ತುಂಡು ಮಾಡಿದರು ಎಂದು ಪಾಡ್ದನದಲ್ಲಿ ಹೇಳಿದೆ. ಪಾಡ್ದನದ ಕೊನೆಯಲ್ಲಿ ಆತ ಜಂಗ ಭಂಟನಾಗಿ ಹುಟ್ಟುತ್ತಾನೆ ಎಂದು ಹೇಳಿದೆ. ಕಾಯತರ್ೋಡಿಯ ಜಾಲಾಟದಲ್ಲಿ ಬೈಸುನಾಯಕನಿಗೆ ನೇಮ ನೀಡಿದ ನಂತರ ಜಂಗ ಭಂಟನಿಗೆ ನೇಮವಿರುತ್ತದೆ.

ಬೈಸುನಾಯಕ ಬಚ್ಚನಾಯಕನಂತೆ ಯುದ್ಧವೀರನಲ್ಲ. ನೇರವಾಗಿ ಹೋರಾಟ ಮಾಡಿರುವ ಬಗ್ಗೆಯೂ ಪಾಡ್ದನದಲ್ಲಿ ಏನೂ ಸೂಚನೆ ಸಿಗುವುದಿಲ್ಲ. ಬದಲಿಗೆ ಆತ ನೀರು ಕೊಡಲು ಬಂದಾಕೆಯನ್ನು ಕೊಲ್ಲುವ ವಿಚಾರವಿದೆ. ಜೊತೆಗೆ ಮನೆ ಮಂದಿ ಕಳ್ಳ ಕಳ್ಳ ಎಂದು ಬೊಬ್ಬಿರಿದ ವಿಚಾರ ಹಾಗೂ ಆತ ಓಡಿ ಹೋಗುವಾಗ ಹಿಡಿದು ಕೈ ಕಾಲು ಕತ್ತರಿಸಿದ ವಿಚಾರವಿದೆ. ಕಳ್ಳನೊಬ್ಬ ಕದಿಯಲು ಬಂದು ಸಿಕ್ಕಿ ಹಾಕಿಕೊಂಡು, ಹೊಡೆತ ತಿಂದು, ಮರಣವನ್ನಪ್ಪಿ, ಕಾಲಾಂತರದಲ್ಲಿ ಬಚ್ಚನಾಯಕ, ಸಹೋದರನೆಂದು ಪರಿಭಾವಿಸಲ್ಪಟ್ಟು ದೈವತ್ವಕ್ಕೇರಿರುವ ಸಾಧ್ಯತೆ ಕೂಡ ಇಲ್ಲಿ ಕಾಣಿಸುತ್ತದೆ ಅಥವಾ ಯಾವುದೋ ದ್ವೇಷ ಸಾಧನೆಗಾಗಿ ಬಂದು ಹೆಣ್ಣು ಮಗಳೊಬ್ಬಳನ್ನು ಕೊಂದುಬಿಡುವಾಗ ಕಳ್ಳನೆಂದು ಹಿಡಿದು ಸಾಯಿಸಿರುವ ಸಾಧ್ಯತೆ ಕೂಡ ಇದೆ.

ಬೈಸು ನಾಯಕನನ್ನು ಬೈಸುನಾಗ ಎಂಬ ಹೆಸರಿನಲ್ಲಿಯೂ ಕರೆಯುತ್ತಾರೆ. ಸುಳ್ಯ ಪರಿಸರದ ಗುತ್ತಿಗಾರು ಮೊಗ್ರಾಲ್, ಕಾಯತ್ರ್ೋಡಿ ಮೊದಲಾದ ಪ್ರದೇಶಗಳಲ್ಲಿ ಬೈಸುನಾಯಕ ದೈವಕ್ಕೆ ಆರಾಧನೆ ಇದೆ.

೪. ಕನ್ನಡ ಬೀರ

ಕಾಸರಗೋಡಿನ ಹೊಸಂಗಡಿ ಪರಿಸರದ ತಲೇಕಳ, ಬೆಜ್ಜ, ಮದಂಗಲ್ಲು ಮೊದಲಾದೆಡೆಗಳಲ್ಲಿ ಧೂಮಾವತಿ ದೈವದೊಂದಿಗೆ ಈ ದೈವಕ್ಕೆ ಆರಾಧನೆ ಇದೆ. ಬಿಳಿ ಬಟ್ಟೆಯ ಕಚ್ಚೆಯನ್ನು ಧರಿಸುವ ಈತನಿಗೆ ತುಳುನಾಡಿನ ಇತರ ದೈವಗಳಂತೆ ತೆಂಗಿನ

ತಿರಿಯ ಅಲಂಕಾರ, ಅರದಳ, ಮುಖವರ್ಣಿಕೆ, ಪುಳ್ಳೆಗಳು ಇರುವುದಿಲ್ಲ. ಮನುಷ್ಯ
ಸಹಜ ಅಲಂಕಾರವಿರುತ್ತದೆ. ಇಲ್ಲಿ ಲಭ್ಯವಿರುವ ಐತಿಹ್ಯದ ಪ್ರಕಾರ ಈತ ಕನ್ನ
ಪ್ರದೇಶದ ಸುಬೇದಾರ. ಮೀಯಪದವು ಸಮೀಪದಲ್ಲಿ ಪೊಳ್ಳಕಜೆ ಎಂಬುದ
ಮಂತ್ರವಾದಿಗಳ ಮನೆತನವಾಗಿದ್ದು, ಅಲ್ಲಿ ದುರ್ಗಾರಾಧನೆ ಮಾಡುತ್ತಾರೆ. ಈ
ಅಲ್ಲಿನ ದೇವಸ್ಥಾನದ ಮುಖ್ಯಸ್ಥರಾದ ಗೋವಿಂದ ಭಟ್ಟರ ಅಜ್ಜನ ಕಾಲದಲ್ಲಿ ನಡೆ
ಘಟನೆ ಇದು. ಯಾವುದೋ ಕಾರಣಕ್ಕೆ ಇವರ ಮನೆಯನ್ನು ಜಪ್ತಿ ಮಾಡಲು ಬ್ರಿಟಿ
ಅಧಿಕಾರಿಗಳು ಇಬ್ಬರು ಸುಬೇದಾರರನ್ನು ಕಳುಹಿಸುತ್ತಾರೆ. ದೇವಾಲಯದ ಭಟ್ಟ
ಹೆಂಡತಿ ಅವರಿಗೆ ಊಟ ಬಡಿಸಿ ಒಳಗೆ ಹೋಗಿ ಹೊರಬರುವಷ್ಟರಲ್ಲಿ ಇಬ್ಬ
ಸುಬೇದಾರರಲ್ಲಿ ಒಬ್ಬ ಮಾಯವಾಗಿರುತ್ತಾನೆ. ಮಾಯವಾದ ಕುರುಹಾಗಿ ಆತ
ತಲೆಕೂದಲು, ಉಗುರು ಉಳಿದಿರುತ್ತದೆ. ಇದನ್ನು ನೋಡಿದ ಇನ್ನೊಬ್ಬ ಸುಬೇದಾ
ಓಡಿ ಹೋಗುತ್ತಾನೆ. ಇಲ್ಲಿ ಮಾಯವಾದ ಸುಬೇದಾರ ಕನ್ನಡಿಗನಾಗಿದ್ದು, ಆತನ
ಧೂಮಾವತಿ ದೈವದ ಸೇರಿಗೆಗೆ ಸಂದು ಹೋಗಿ, ದೈವತ್ವಕ್ಕೇರಿ 'ಕನ್ನಡ ಬೀರ' ಎಂ
ಹೆಸರಿನಲ್ಲಿ ಆರಾಧಿಸಲ್ಪಡುತ್ತಾನೆ. ಈತನಿಗೊಂದು ಬನ ಕೂಡ ಬೆಣ್ಣೆಮನೆ ಗೋಪಾ
ಭಟ್ಟರ ತೋಟದಲ್ಲಿದೆ.

೫. ಕನ್ನಡ ಭೂತ

ಘಟ್ಟದ ಮೇಲಿನ ರಾಜ್ಯದಲ್ಲಿ ನೀಲಮ್ಮ ಹೆಂಗಸು ಮತ್ತು ಭೈರವ ಎಂಬ ಕನ್ನ
ಭಾಷಿಕ ದಂಪತಿಗಳಿದ್ದರು. ಮದುವೆಯಾಗಿ ಅನೇಕ ವರ್ಷಗಳು ಕಳೆದರೂ ಅವರಿ
ಮಕ್ಕಳಾಗುವುದಿಲ್ಲ. ಅನಂತರ ಅವರು 'ಭೈರವ' ದೈವಕ್ಕೆ ಹರಿಕೆ ಹೇಳುತ್ತಾರೆ. ಆ
ಅವರಿಗೆ ಒಂದು ಮಗು ಸತ್ಯದಲ್ಲಿ ಜನಿಸುತ್ತದೆ. ಮಗು ಹುಟ್ಟಿದ ನಂತರ ಹರಿ
ಸಂದಾಯ ಮಾಡುವುದನ್ನು ನೀಲಮ್ಮ, ಭೈರವ ದಂಪತಿಗಳು ಮರೆತು ಬಿಡುತ್ತಾ
ಅವರಿಗೆ ಹುಟ್ಟಿದ ಸತ್ಯದು ಮಗು ದೊಡ್ಡವನಾಗಿ ಶೂರನಾಗಿ ಸಾಹಸಿಯಾ
ಬೆಳೆಯುತ್ತಾನೆ. ಒಂದು ದಿನ ಅವನಿಗೆ ತುಳುನಾಡನ್ನು ನೋಡಬೇಕು, ತುಳ
ವಿದ್ಯೆಯನ್ನು ಕಲಿಯಬೇಕು ಎಂದು ಆಸೆಯಾಗಿ ಘಟ್ಟ ಇಳಿದು ಬರುತ್ತಾನೆ. ತಂ
ಬುತ್ತಿಯಲ್ಲಿರುವ ಆಹಾರವನ್ನು ದಾರಿಯಲ್ಲಿ ಹಸಿದಿರುವ ಪ್ರಾಣಿ ಪಕ್ಷಿಗಳಿ
ಹಾಕುತ್ತಾನೆ. ಘಟ್ಟ ಇಳಿದು ಕುಮಾರಧಾರ ನದಿಗೆ ಬಂದು ಸ್ನಾನ ಮಾಡುತ್ತಾನೆ. ಅ
ಸ್ನಾನ ಮಾಡುವಾಗಿ ಮಾಯಕವಾಗುತ್ತಾನೆ.

ಕುಮಾರಧಾರಾ ನದಿಯಲ್ಲಿ ಮಾಯಕವಾದ ಆತ 'ಕನ್ನಡ ಭೂತ'ವಾ
ದೈವತ್ವಕ್ಕೇರುತ್ತಾನೆ. ಮುಂದೊಂದು ದಿನ ಅಲ್ಲಿ ದಾರಿಯಲ್ಲಿ ಹೋಗುತ್ತಿ
ಮೂರ್ತೆದಾರನ ಬಳಿ ಮಾನವ ರೂಪ ಧರಿಸಿ 'ಕಳ್ಳು' ಕೇಳುತ್ತಾನೆ. ಅವನು ಕಳ
ನೀಡಿದಾಗ 'ಕಳ್ಳು ಮತ್ತು ಮನುಷ್ಯ ರೂಪದ ಕನ್ನಡ ಭೂತ ಮಾಯವಾಗುತ್ತದೆ.
ಮೂರ್ತೆದಾರ ಆಶ್ಚರ್ಯದಿಂದ ಬಲಿಮೆಯಲ್ಲಿ ಕೇಳಿದಾಗ 'ಕನ್ನಡ ಭೂತ

ಉದ್ಭವವಾದ ವಿಚಾರ ತಿಳಿದು ಬರುತ್ತದೆ. ಮುಂದೆ ಕನ್ನಡ ಭೂತದ ಆರಾಧನೆ ನಡೆಯುತ್ತದೆ. ಸುಳ್ಯ, ಪುತ್ತೂರು ಪರಿಸರದ ಅಂಕತಡ್ಕ ಮೊದಲಾದ ಪ್ರದೇಶಗಳಲ್ಲಿ ಕುಂಟಲ್ಡಾಯ ದೈವದ ನೇಮ ಆಗುವಾಗ ಕನ್ನಡ ಭೂತಕ್ಕೆ ನೇಮ ನೀಡಿ ಆರಾಧಿಸುತ್ತಾರೆ. ಕನ್ನಡ ಭೂತಕ್ಕೆ ಒಂದು ವಿಶಿಷ್ಟ ಟೊಪ್ಪಿಗೆ, ಕಚ್ಚೆ ಹಾಗೂ ತೆಂಗಿನ ತಿರಿಯ ಅಲಂಕಾರವಿರುತ್ತದೆ.

ಈ ಕನ್ನಡದ ಮೂಲದ ಭೂತಗಳಲ್ಲದೆ ಮೈಸೂರುತ್ತಾಯೆ (ಮೈಸೂರಿನವನು), ಕನ್ನಡಿಗ ಎಂಬ ಎರಡು ಕನ್ನಡ ಭೂತಗಳಿಗೆ ತುಳುನಾಡಿನಲ್ಲಿ ಆರಾಧನೆ ಇದೆ. ಈ ಭೂತಗಳ ಕುರಿತು ಮಾಹಿತಿ ಸಂಗ್ರಹ ಕಾರ್ಯ ಇನ್ನೂ ಆಗಿಲ್ಲ. ಇಂತಹ ನೂರಾರು ಉಪದೈವಗಳಿಗೆ ಆರಾಧನೆ ಇದ್ದು, ಈ ದೈವಗಳ ಕುರಿತು ಅಧ್ಯಯನ ಮಾಡುವ ಅಗತ್ಯವಿದೆ.

ಆಧಾರ ಗ್ರಂಥಗಳು

೧. ಡಾ॥ ಲಕ್ಷ್ಮೀ ಜಿ. ಪ್ರಸಾದ–ತುಂಡು ಭೂತಗಳು–ಒಂದು ಅಧ್ಯಯನ, ಮಾತೋಶ್ರೀ ಪ್ರಕಾಶನ, ಬೆಂಗಳೂರು–೨೦೧೦

೨. ಡಾ॥ ಲಕ್ಷ್ಮೀ ಜಿ. ಪ್ರಸಾದ–ಪಾಡ್ದನ ಸಂಪುಟ, ಮಾತೋಶ್ರೀ ಪ್ರಕಾಶನ, ಬೆಂಗಳೂರು–೨೦೧೦.

■

ಕರ್ನಾಟಕ ಲೋಚನ
ಸಂಪುಟ ೨೬, ಸಂಚಿಕೆ ೧-೨
ಜನವರಿ-ಡಿಸೆಂಬರ್

೪. ನಾನು ಕಂಡಂತೆ-ಡಾ॥ ಶ್ರೀನಿವಾಸ ಹಾವನೂರ

-ಎಸ್. ವಿ. ಶ್ರೀನಿವಾಸರಾವ್

ಡಾ॥ ಶ್ರೀನಿವಾಸ ಹಾವನೂರ ಅವರನ್ನು ನಾನು ಮೊದಲು ಭೇಟಿಯಾದದ್ದು ೧೯೬೩ರ ಸುಮಾರಿನಲ್ಲಿ, ಮುಂಬಯಿಯ ಟಾಟಾ ಇನ್ಸಿಟ್ಯೂಟ್ ಆಫ್ ಫಂಡಮೆಂಟಲ್ ರೀಸರ್ಚ್ ಸೆಂಟರ್‌ನಲ್ಲಿ, ಅವರು ಅಲ್ಲಿ ಮುಖ್ಯ ಗ್ರಂಥಾಧಿಕಾರಿಗಳಾಗಿದ್ದರು. ಅವರು ಬಹಳ ಉತ್ಸಾಹದಿಂದ ನನಗೆ ಆ ಸಂಸ್ಥೆಯ ಗ್ರಂಥಾಲಯದಲ್ಲಿದ್ದ ಎಲ್ಲ ಗ್ರಂಥಗಳನ್ನೂ ವಿಷಯಾನುಸಾರ ವಿಂಗಡಿಸಿ, ಕಂಪ್ಯೂಟರ್‌ನಲ್ಲಿ ಅಳವಡಿಸಿದ್ದುದನ್ನು ವಿವರಿಸಿ, ಆ ಮಾಹಿತಿಯನ್ನು ಕಂಪ್ಯೂಟರ್ ಪರದೆಯ ಮೇಲೆ ತೋರಿಸಿದರು. ಆಗಿನ್ನೂ ಕಂಪ್ಯೂಟರ್ ಹೊಸದಾಗಿ ಬಳಕೆಗೆ ಬಂದಿತ್ತು. ಹೆಚ್ಚಿನ ವಿವರ ನಾನು ಆದಿಯಾಗಿ ಹೆಚ್ಚಿಗೆ ಜನರಿಗೆ ಆ ಬಗ್ಗೆ ಮಾಹಿತಿ ಲಭ್ಯವಿರಲಿಲ್ಲ. (ಆಗ ನಾನು ರಕ್ಷಣಾ ಇಲಾಖೆಯ ಚೀಫ್ ಇನ್ಸ್‌ಪೆಕ್ಟರೇಟ್ ಆಫ್ ಎಲೆಕ್ಟ್ರಾನಿಕ್ಸ್, ಬೆಂಗಳೂರಿನ ಉಪ ಶಾಖೆ-ಮುಂಬಯಿಯಲ್ಲಿ ಕೆಲಸದಲ್ಲಿದ್ದೆ). Catalogue System (ಅಕಾರಾದಿಯಾಗಿ ಅಥವಾ ವಿಷಯಾನುಕ್ರಮವಾಗಿ ಅಳವಡಿಸುವ ಶಿಸ್ತು)ನ ವೈಶಿಷ್ಟ್ಯಗಳನ್ನು ವಿವರಿಸಿ, ಆ ಕ್ರಮವಾಗಿ ಜೋಡಿಸಿರುವ ಗ್ರಂಥಗಳನ್ನು ತೋರಿಸಿದರು. ಬೇಕೆನಿಸಿದ ಗ್ರಂಥವನ್ನು ಕ್ಷಣದಲ್ಲಿ ಪಡೆಯುವ ವಿಧಾನವನ್ನು ತೋರಿಸಿದರು. ಆಗ ಅದು ಅದ್ಭುತ ಅನ್ವೇಷಣೆ ಅನಿಸಿತು. ಹಾರ್ದಿಕವಾಗಿ ಅಭಿನಂದಿಸಿದೆ.

ನಾನು ಮುಂಬಯಿಯಲ್ಲಿದ್ದ ಅವಧಿ (೧೯೬೨-೬೯) ಯಲ್ಲಿ ಅವರನ್ನು ಹತ್ತಾರು ಬಾರಿ ಮಾತುಂಗ ಕನ್ನಡ ಸಂಘ, ಮೈಸೂರು ಅಸೋಷಿಯೇಷನ್, ಮುಂಬಯಿ ಕರ್ನಾಟಕ ಸಂಘ ಮುಂತಾದೆಡೆ ಶ್ರೀ ಎ. ಎಸ್. ಕೆ. ರಾವ್, ಶ್ರೀ ವ್ಯಾಸರಾಯ ಬಲ್ಲಾಳ, ವ್ಯಾಸರಾಯ ನಿಂಜೂರ್, ಮೈಸೂರು ಪ್ರೆಸ್‌ನ ಜಿ. ವಿ. ರಂಗಸ್ವಾಮಿ, ಸಂತೋಷಕುಮಾರ್ ಗುಲ್ವಾಡಿ, ಯಶವಂತ ಚಿತ್ತಾಲ ಮುಂತಾದವರುಗಳನ್ನೂ ಒಂಟಿಯಾಗಿ ಅಥವಾ ಒಟ್ಟಿಗೇ ಭೇಟಿಯಾಗುವ ಹಲವು ಸಂದರ್ಭಗಳು ಒದಗಿ ಬರುತ್ತಿದ್ದವು. ಮಾತುಂಗ ಕನ್ನಡ ಸಂಘದ ಆಶ್ರಯದಲ್ಲಿ

ರೂಪುಗೊಂಡಿದ್ದ 'ಸಾಹಿತ್ಯ ಕೂಟ'ದ ಕಾರ್ಯಕ್ರಮಗಳಲ್ಲಂತೂ ಇವರುಗಳಲ್ಲದೆ ಮತ್ತಷ್ಟು ಕನ್ನಡಾಭಿಮಾನಿಗಳು ಸೇರುತ್ತಿದ್ದರು. ಈ ದಿನಗಳಲ್ಲಿ ನನ್ನ ಕೆಲವು ಕಥೆಗಳು ಸುಧಾ, ಪ್ರಜಾವಾಣಿ, ವಿಶ್ವಕರ್ನಾಟಕ, ಉಷಾ, ಕಥಾಗಾರಗಳಲ್ಲಿ ಪ್ರಕಟಗೊಂಡಿದ್ದು ನಾನು ಕಥೆಗಾರನಾಗಿ ಮುಂಬಯಿ ವಲಯದಲ್ಲಿ ಗುರುತಿಸಲ್ಪಟ್ಟಿದ್ದೆ. ಇವುಗಳ ಬಗ್ಗೆಯೂ 'ಸಾಹಿತ್ಯ ಕೂಟ'ದಲ್ಲಿ ಚರ್ಚೆಗಳು ನಡೆಯುತ್ತಿದ್ದುದುಂಟು. ಡಾ॥ ಹಾವನೂರ ಅವರು ಸದಾ ನನ್ನನ್ನು ಪ್ರೋತ್ಸಾಹಿಸುತ್ತಿದ್ದರು. ಅವರ ಈ ಶ್ರೀರಕ್ಷೆಯೇ ನನ್ನನ್ನು ಸಾಹಿತಿಯಾಗಿಸಿತು ಎಂದು ನಾನು ನಂಬಿದ್ದೇನೆ.

ಗಿರಿಗಾಂನಲ್ಲಿದ್ದ ಮುಂಬಯಿ ಕರ್ನಾಟಕ ಸಂಘ ಮಾಹಿಮ್‌ನಲ್ಲಿ ನಿರ್ಮಿತಗೊಂಡಿದ್ದ ಹೊಸ ಕಟ್ಟಡದಲ್ಲಿ ಕಾರ್ಯ ಪ್ರಾರಂಭಿಸಿತ್ತು. ಶ್ರೀ ಶ್ರೀನಿವಾಸ ಹಾವನೂರು ಅಲ್ಲಿನ ಗ್ರಂಥಾಲಯವನ್ನು ಆಧುನಿಕಗೊಳಸಿ ಮಾದರಿಯಾಗುವಂಥಾ ಮಾಹಿತಿ ಕೇಂದ್ರವನ್ನು ಸ್ಥಾಪಿಸಿದ ಹೆಗ್ಗಳಿಕೆಗೆ ಪಾತ್ರರಾಗಿದ್ದರು.

ನನ್ನ ಮತ್ತು ಡಾ॥ ಹಾವನೂರರ ಸಂಬಂಧ ಇನ್ನಷ್ಟು ಗಾಢವಾದದ್ದು ಅವರು ಮುಂಬಯಿ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ವಿಭಾಗದಲ್ಲಿ ಮುಖ್ಯಸ್ಥರಾಗಿದ್ದ ಅವಧಿಯಲ್ಲಿ. ೧೯೮೯ ರಲ್ಲಿ ಪ್ರೊ॥ ಜಿ. ಎಸ್. ಸಿದ್ಧಲಿಂಗಯ್ಯ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಗಾದಿಗೆ ಸ್ಪರ್ಧಿಸಿದ್ದಾಗ ನಾನು ಮತ್ತು ಶ್ರೀಮತಿ (ಡಾ॥) ನಿರುಪಮಾರವರು ಅವರ ಪರವಾಗಿ ಮುಂಬಯಿಯಲ್ಲಿ ಲಾಬಿ ನಡೆಸಲು ಮುಂಬಯಿಗೆ ಮತ್ತೆ ಭೇಟಿ ನೀಡಿದ್ದೆವು. ಆಗ ಡಾ॥ ಶ್ರೀನಿವಾಸ ಹಾವನೂರ ಅವರು ವಿಶ್ವವಿದ್ಯಾನಿಲಯದ ಕ್ಯಾಂಪಸ್‌ಗೆ ತೀರ ಹತ್ತಿರದಲ್ಲಿದ್ದ 'ಕಾಲಿನಾ' (Kalïna) ಬಡಾವಣೆಯಲ್ಲಿನ ಮನೆಯೊಂದರಲ್ಲಿ ವಾಸವಾಗಿದ್ದರು (ಆ ಮನೆ ಶೀಮತಿ ನಿರುಪಮಾರವರ ಮಗ ಶ್ರೀ ಸುಧೀಂದ್ರನಾಥ್‌ಗೆ ಸೇರಿದುದಾಗಿತ್ತು). ಅಲ್ಲೇ ನಾವುಗಳು ೪-೫ ದಿನ ವಾಸ್ತವ್ಯ ಹೂಡಿದ್ದೆವು. ಡಾ॥ ಶ್ರೀನಿವಾಸ ಹಾವನೂರು ಅವರು ಮುಂಬಯಿಯಲ್ಲಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯರುಗಳನ್ನು ಗುರುತಿಸಲು, ಮಾತನಾಡಲು ಬಹಳ ಸಹಕಾರ ನೀಡಿದ್ದುದು ನನ್ನ ನೆನಪಿನಲ್ಲಿ ಇನ್ನೂ ಹಚ್ಚಹಸುರಾಗಿದೆ. ಆಗ ನಾನು ರಚಿಸುತ್ತಿದ್ದ 'ಕನ್ನಡ ಸಾಹಿತಿ ದರ್ಶನ' (೧೫೦೦ಕ್ಕೂ ಹೆಚ್ಚು ಪ್ರಾಚೀನ/ಅರ್ವಾಚೀನ ಕನ್ನಡ ಸಾಹಿತಿಗಳ ಕಿರುಪರಿಚಯ ನೀಡುವ ಕೃತಿ)ದಲ್ಲಿನ ಮಾಹಿತಿ ಬಗ್ಗೆ, ವರ್ಗೀಕರಣದ ಬಗ್ಗೆ ಬಹಳ ಉಪಯುಕ್ತ ಸಲಹೆಗಳನ್ನು ನೀಡಿದ್ದರು. ಅವನ್ನೆಲ್ಲಾ ಅಳವಡಿಸಿದ ಕೃತಿ ಮೈಸೂರಿನಲ್ಲಿ ರಾಷ್ಟ್ರಕವಿ ಡಾ॥ ಕುವೆಂಪು ಅವರ ಸ್ವಗೃಹದಲ್ಲಿ ದಿನಾಂಕ ೨೧-೬-೧೯೮೯ ರಂದು ಲೋಕಾರ್ಪಣೆಗೊಂಡಿತು. ಇದರ ಪರಿಷ್ಕರಣ/ವಿಸ್ತರಣ ಕಾರ್ಯ ನಾನು ಕೈಗೊಂಡಾಗಲೂ ಇನ್ನೂ ಉಪಯುಕ್ತ ಸಲಹೆಗಳನ್ನು ನೀಡಿ ಉಪಕರಿಸಿದ್ದರು. (ಈ ಪರಿಷ್ಕರಗೊಂಡ ಕೃತಿ ಮತ್ತಷ್ಟು ವಿಸ್ತೀರ್ಣಗೊಂಡು ೩೦೦೦ ಕ್ಕೂ ಹೆಚ್ಚು ಸಾಹಿತಿಗಳ ಕಿರುಪರಿಚಯ ಒಳಗೊಂಡಿದ್ದು ದಿನಾಂಕ ೦೧-೧೨-೨೦೦೮ ರಂದು ಅಂದಿನ

ಮುಖ್ಯಮಂತ್ರಿ ಶ್ರೀ ಬಿ. ಎಸ್. ಯಡಿಯೂರಪ್ಪ ಅವರಿಂದ ಲೋಕಾರ್ಪಣೆಗೊಂಡಿದೆ).

ಡಾ॥ ಶ್ರೀನಿವಾಸ ಹಾವನೂರ ಅವರು ಮುಂಬಯಿಯಲ್ಲಿದ್ದಾಗ ರಚಿಸಿದ್ದ ವಿಶಿಷ್ಟ ಕಥಾ ಸಂಕಲನ 'ಕುಚೋದ್ಯದ ಕಥೆಗಳು' ಕೃತಿಯ ಪ್ರಕಟಣೆಗೆ ನನ್ನ ಸಹಾಯ ಕೋರಿದ್ದರು. ಆಗ ಅದನ್ನು ಬಾಪ್ಕೊ ಪ್ರಕಾಶನದ ಪ್ರಕಟನಾ ವಿಭಾಗದ ಮುಖ್ಯಸ್ಥರಾಗಿದ್ದ ಶ್ರೀ ಕೆ. ಆರ್. ಕಮಲೇಶ್ ಅವರನ್ನು ಸಂಪರ್ಕಿಸಿ ಪ್ರಕಟಗೊಳ್ಳಲು ನೆರವು ನೀಡಿದ್ದೆ.

ಡಾ॥ ಶ್ರೀನಿವಾಸ ಹಾವನೂರ ಅವರು ಮುಂಬಯಿಯ ವಿಶ್ವವಿದ್ಯಾನಿಲಯ ಬಿಟ್ಟ ಮೇಲೆ ಮಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದರು. ಹಾಗೆಯೇ ಕರ್ನಾಟಕ ಥಿಯೋಲಾಜಿಕಲ್ ಕಾಲೇಜು, ಬಾಲಮಟ್ಟ (Karnataka Theological College, Balmatta, Mangalore-575 001) ನಲ್ಲಿ ಸಂಶೋಧನೆ, ಸಂಪಾದನೆಯಲ್ಲಿ ಕಂಪ್ಯೂಟರ್ ಬಳಿಕೆ ವಿಭಾಗ ಸಹ ನೋಡಿಕೊಳ್ಳುತ್ತಿದ್ದರು. ಆಗ ನಾನು ಸಿದ್ಧಪಡಿಸಿದ್ದ 'ಕನ್ನಡ ನಾಡಿನ ಮರೆಯಬಾರದ ಮಹನೀಯರು–ಮಾಹಿತಿ ಕೋಶ'ದಲ್ಲಿನ ವಿಷಯವನ್ನು ಬಹಳ ಮೆಚ್ಚಿ ಅದರ ವೆಬ್‌ಸೈಟ್ (Website) ಸ್ಥಾಪಿಸಿದ್ದುದಲ್ಲದೆ ನನ್ನನ್ನು ಅದರ ಸಲಹೆಗಾರರಲ್ಲಿ ಒಬ್ಬನನ್ನಾಗಿ ಪರಿಗಣಿಸಿದ್ದರು. ಅಷ್ಟೇ ಅಲ್ಲದೆ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು ಮುಂತಾದವುಗಳಲ್ಲಿನ ಸಾಹಿತಿಗಳ ಮಾಹಿತಿಯನ್ನು ಧಾರಾಳವಾಗಿ ಬಳಸಿಕೊಂಡು ಈ ಬಗ್ಗೆ ಪತ್ರ ಮುಖೇನ ಅಭಿನಂದಿಸಿರುತ್ತಾರೆ.

ಈ ಸಂಸ್ಥೆಯ ವತಿಯಿಂದ ಪ್ರಾಚೀನ ಕನ್ನಡ ಸಾಹಿತ್ಯ ಮತ್ತು ಪಾಶ್ಚಿಮಾತ್ಯರ ಕೊಡುಗೆ ಬಗ್ಗೆ ಸಂಶೋಧನೆ ನಡೆಸಲು ಕೆಲವು ತಿಂಗಳು ಜರ್ಮನಿಗೆ ಹೋಗಿ ಬಂದು ಈ ಬಗ್ಗೆ ಪ್ರಬುದ್ಧ ಪ್ರಬಂಧಗಳನ್ನು ಪ್ರಕಟಿಸಿರುತ್ತಾರೆ.

ಅಲ್ಲಿಂದ ಬಂದಮೇಲೆ ಅವರು ಬೆಂಗಳೂರಿಗೆ ವಾಸ್ತವ್ಯ ಬದಲಾಯಿಸಿದ್ದರು. ಅವರಿಗೂ ನಮ್ಮ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನಕ್ಕೂ ಬಹು ಹಳೆಯ ಬಾಂಧವ್ಯ, ನಿಕಟ ಸಂಪರ್ಕ. ಪ್ರತಿಷ್ಠಾನ ೨೦೦೮ ರಲ್ಲಿ ನಡೆಸಿದ ಎರಡು ಕಾರ್ಯಕ್ರಮಗಳಲ್ಲಿ ಅವರು ಭಾಗವಹಿಸಿದ್ದರು. ೨೬–೧–೨೦೦೮ ರಂದು ನಡೆದ ಕಾರ್ಯಕ್ರಮದಲ್ಲಿ ಅವರು ಹಂಪಿ ವಿಶ್ವವಿದ್ಯಾನಿಲಯದಿಂದ ಎಂ.ಫಿಲ್ ಪದವಿ ಪಡೆದ ವಿದ್ಯಾರ್ಥಿಗಳಿಗೆ ಸರ್ಟಿಫಿಕೇಟ್ ವಿತರಿಸಿದ್ದರು. ಗೌರವ ಡಿ.ಲಿಟ್ ಪಡೆದ ಅಭ್ಯರ್ಥಿಗಳನ್ನು ಅಭಿನಂದಿಸಿದ್ದರು. ೩೧–೫–೦೮ ರಂದು ನಡೆದ ಡಾ॥ ಎನ್. ಅನಂತರಂಗಾಚಾರ್ ದತ್ತಿ ಉಪನ್ಯಾಸ ನೀಡಿದ್ದರು. ಆಗ ಅವರು ಆಹ್ವಾನ ಪತ್ರಿಕೆಯಲ್ಲಿ ಮಾಡಿರುವ 'ಸಹಿ'ಯನ್ನು ಓದುಗರ ಅವಗಾಹನೆಗಾಗಿ ಈ ಸಂಗಡ ಲಗತ್ತಿಸಿದ್ದೇನೆ.

೨೦೦೯ ರಲ್ಲಿ ಕೆಲಕಾಲ ಅಸ್ವಸ್ಥರಾಗಿ ದೇವೇಗೌಡ ಹಾಸ್ಪೆಟಲ್‌ನಲ್ಲಿ, ಗಂಭೀರ ಸ್ಥಿತಿಯಲ್ಲಿದ್ದು ಅನಂತರ ಚೆನ್ನಾಗಿ ಚೇತರಿಸಿಕೊಂಡಿದ್ದರು.

ದಿನಾಂಕ ೫-೪-೨೦೧೦ ರಂದು ಮನೆಯಲ್ಲಿ ಜಾರಿಬಿದ್ದು, ಹೃದಯಾಘಾತದಿಂದ ನಿಧನರಾದರು. ಇವರ ಮರಣದಿಂದಾಗಿ ಕನ್ನಡ ಸಾರಸ್ವತ ಲೋಕ, ಮುಖ್ಯವಾಗಿ ಸಂಶೋಧನಾ ಕ್ಷೇತ್ರಕ್ಕೆ ಅನಿರೀಕ್ಷಿತ ಆಘಾತವಾಗಿದೆ. ತುಂಬಲಾರದ ನಷ್ಟವಾಗಿದೆ.

ಅವರ ಜೀವನದ ಕೆಲವು ವಿವರಗಳು :

ಜೀವಿತ ಕಾಲ : ೧೨-೧-೧೯೨೯ ರಿಂದ ೫-೪-೨೦೧೦.

ಹುಟ್ಟಿದ ಊರು : ಧಾರವಾಡ ಜಿಲ್ಲೆ, ಹಾವನೂರು.

ತಂದೆ/ತಾಯಿ : ನರಸಿಂಹಾಚಾರ್ಯ ಗಲಗಲಿ, ರಮಾಬಾಯಿ.

ಕಾವ್ಯ ನಾಮಗಳು : ಹಾವನೂರು, ದುಷ್ಯಂತ, ಶ್ರೀನಿವಾಸ ಕೃಷ್ಣ, ಐಸಿರಿ.

ಡಾಕ್ಟರೇಟ್ ತಂದು ಕೊಟ್ಟ ಕೃತಿ : 'ಹೊಸಗನ್ನಡದ ಅರುಣೋದಯ' (ಗ್ರಂಥ ರೂಪದಲ್ಲಿ ಪ್ರಕಟಗೊಂಡಾಗ ಪರಿಷ್ಕರಿಸಲ್ಪಟ್ಟಿದೆ ಹಾಗೂ ವಿಸ್ತೃತಗೊಂಡಿದೆ. 'ಹೊಸಗನ್ನಡದ ಅರುಣೋದಯ'ದ ಪ್ರಕಟಣೆ ಅತ್ಯಂತ ಮಹತ್ವಪೂರ್ಣವಾದ ಘಟನೆಯೆಂದು ಭಾವಿಸುತ್ತೇನೆ.....ಒಂದು ಅಪರೂಪದ ಆಕರ ಗ್ರಂಥ, ಶ್ರೇಷ್ಠವಾದ ಸಂಶೋಧನ ಗ್ರಂಥ....' –ಡಾ॥ ಹಾ. ಮಾ. ನಾಯಕ.

ಡಾಕ್ಟರೇಟ್ ನೀಡಿದ ವಿಶ್ವವಿದ್ಯಾನಿಲಯ : ಪೂನಾ ವಿಶ್ವವಿದ್ಯಾನಿಲಯ.

ಕಾಗೆಗೆ ಹೇಳಿದ ಕಥೆಗೆ ಸಾಹಿತ್ಯ ಅಕಾಡೆಮಿಯ ಬಹುಮಾನ, ಕನ್ನಡ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ (೧೯೯೬) ಲಭಿಸಿದೆ.*

*** ಡಾ॥ ಶ್ರೀನಿವಾಸ ಹಾವನೂರರು** ನನಗೆ ಬರೆದ ಪತ್ರ :

ಪ್ರಿಯ ಶ್ರೀನಿವಾಸರಾವ್,

ನಾವು ಇಲ್ಲಿ 'ಕನ್ನಡ ಸಾಹಿತ್ಯ ಮಾಹಿತಿ ಕೋಶ'ದ ಒಂದು ವೆಬ್‌ಸೈಟ್ ಸ್ಥಾಪಿಸಿದ್ದು, ನೀವು ಅದರ ಸಲಹೆಗಾರರಲ್ಲಿ ಒಬ್ಬರಾಗಿದ್ದೀರಿ–ಹಾಗಾಗಿ ನಿಮಗೆ ಆ ವಿಚಾರ ಗೊತ್ತೇ ಇದೆ. ಇತ್ತ ನಾವು ನೀವು ಕಲೆ ಹಾಕಿದ ಸಾಹಿತ್ಯ ಪರಿಷದಧ್ಯಕ್ಷರ ಮತ್ತಿತರ ಸಾಹಿತಿಗಳ ಮಾಹಿತಿಯನ್ನು ಧಾರಾಳವಾಗಿ ಬಳಸಿಕೊಂಡಿದ್ದೇವೆ. ಅತ್ಯಂತ ಉಪಯುಕ್ತ ಮಾಹಿತಿಯನ್ನು ಸಂಗ್ರಾಹ್ಯವಾಗಿ ಕೊಟ್ಟಿದ್ದೀರಿ, ಅಭಿನಂದನೆಗಳು; ಅಭಿವಂದನೆ ಕೂಡಾ. ಎಲ್ಲಿಯಾದರೂ ಪ್ರಕಟಿಸುವವರಿದ್ದೀರಾ ? ಕ.ಸಾ.ಪ ಅಧ್ಯಕ್ಷರದ್ದು ಮಾಡಿಯೇ ಇದ್ದೀರಿ. ಇತಿ ವಂದನೆಗಳೊಡನೆ.

■

ಕರ್ನಾಟಕ ಲೋಚನ
ಸಂಪುಟ ೨೬, ಸಂಚಿಕೆ ೧-೨
ಜನವರಿ-ಡಿಸೆಂಬರ್

೫. ಬೆಂಗಳೂರಿನಲ್ಲಿ ರವೀಂದ್ರನಾಥ ಠಾಗೂರ್


-ವೇಮಗಲ್ ಸೋಮಶೇಖರ್



೧೯೧೯ ರಲ್ಲಿ ಕವಿಸಾರ್ವಭೌಮ ರವೀಂದ್ರನಾಥರ ಅಧ್ಯಕ್ಷತೆಯಲ್ಲಿ ಸೇರಿದ
ಅಖಿಲ ಭಾರತ ಲಲಿತಕಲಾ ಪ್ರದರ್ಶನೋತ್ಸವ, ಬೆಂಗಳೂರು


ನಮ್ಮ ದೇಶದ ಸಾಹಿತ್ಯ ಸಂಸ್ಕೃತಿಗಳ ಸಂಬಂಧದಲ್ಲಿ ನೋಬಲ್ ಪಾರಿತೋಷಿಕವನ್ನು ಪಡೆದು ಅಂತರರಾಷ್ಟ್ರೀಯ ಖ್ಯಾತಿಗೊಳಿಸಿದ್ದ ರವೀಂದ್ರನಾಥ ಠಾಗೂರರು ೧೯೧೯ ರಲ್ಲಿ ಶಾಂತಿನಿಕೇತನದ ಆಶ್ರಯದಲ್ಲಿ ವಿಶ್ವಭಾರತಿ ವಿಶ್ವವಿದ್ಯಾಲಯವನ್ನು ಪ್ರಾರಂಭಿಸುವ ಸಲುವಾಗಿ ಹಣ ಸಂಗ್ರಹ ಮಾಡುವ ಉದ್ದೇಶದಿಂದ ದಕ್ಷಿಣ ಭಾರತದಲ್ಲಿ ಪ್ರವಾಸ ಮಾಡುತ್ತಿದ್ದರು. ಆ ಸಮಯದಲ್ಲಿ ಬೆಂಗಳೂರು ನಗರದಲ್ಲಿ ಶ್ರೀ ಮದ್ಯುವರಾಜ ನರಸಿಂಹರಾಜ ಒಡೆಯರ್ ಕೃಪಾಪೋಷಿತ ಪ್ರಸಿದ್ಧ ಹವ್ಯಾಸಿ ಕಲಾ ಸಂಸ್ಥೆಯಾಗಿದ್ದ 'ಅಮೆಚೂರು ಡ್ರಾಮಾ ಅಸೋಸಿಯೇಷನ್' (ಎ.ಡಿ.ಎ.) ಅವರು ೧೯೧೯ ಜನವರಿ ೧೨ ರಿಂದ ಒಂದು ವಾರ ಕಾಲ ಅಖಿಲಭಾರತ ಲಲಿತಕಲಾ

ಮಹೋತ್ಸವ ವನ್ನು ನಡೆಸಲು ಏರ್ಪಾಟು ಮಾಡಿದರು. ಆಗ್ಗೆ ಎ.ಡಿ.ಎ. ಅಧ್ಯಕ್ಷರಾಗಿ ದಿವಾನ್ ಬಹದೂರ್ ಜ್ಞಾನ ಶರಣ ಚಕ್ರವರ್ತಿ, ಉಪಾಧ್ಯಕ್ಷರಾಗಿ ಪ್ರೊ॥ ಎಫ್. ಆರ್. ಸೆಲ್ (ಸೆಂಟ್ರಲ್ ಕಾಲೇಜ್ ಇಂಗ್ಲಿಷ್ ಪ್ರೊಫೆಸರ್) ಟಿ. ರಾಘವಾಚಾರ್, ಎನ್. ವೆಂಕಟೇಶಯ್ಯಂಗಾರ್ ಕಾರ್ಯದರ್ಶಿಗಳಾಗಿ ಬಿ. ಶ್ರೀನಿವಾಸಯ್ಯಂಗಾರ್, ಪಿ. ಕೋದಂಡರಾವ್ ಅವರು ಕಾರ್ಯನಿರ್ವಹಿಸುತ್ತಿದ್ದರು. ನಗರದಲ್ಲಿನ ಪದವೀಧರರು, ನಟನಟಿ ವೃಂದದವರು, ಅಧಿಕಾರಿಗಳು, ವಕೀಲರು ಮುಂತಾಗಿ ಸಭ್ಯ ಜನರೆಲ್ಲರೂ ಸದಸ್ಯರಾಗದ್ದರು. ಜ್ಞಾನ ಶರಣ ಚಕ್ರವರ್ತಿಯವರು ಮೈಸೂರು ಸರ್ಕಾರದಲ್ಲಿ ಹಣಕಾಸಿನ ನಿಯಂತ್ರಣಾಧಿಕಾರಿಯಾಗಿದ್ದರು. ಇವರು ಮತ್ತು ಮೈಸೂರಿನಲ್ಲಿದ್ದ ಐರಿಷ್ ದೇಶದ ಸಾಹಿತಿಗಳೂ ಚಿತ್ರ ಕಲಾವಿದರೂ ಆಗಿದ್ದ ಡಾ॥ ಜೇಮ್ಸ್ ಕಜಿನ್ಸ್ ಅವರು ರವೀದ್ರನಾಥ ಠಾಗೂರರನ್ನು ಲಲಿತಕಲಾ ಮಹೋತ್ಸವಕ್ಕೆ ಮುಖ್ಯ ಅತಿಥಿಯನ್ನಾಗಿ ಆಹ್ವಾನಿಸಿದರು. ಇವರ ಆಮಂತ್ರಣಕ್ಕೆ ಮನ್ನಣೆಯಿತ್ತ ರವೀಂದ್ರರನ್ನು ಸ್ವಾಗತಿಸಲು ಸಕಲ ಸಿದ್ಧತೆಯನ್ನು ಮಾಡಿದರು. ಸಿಟಿ ಮಾರುಕಟ್ಟೆಯ ಮುಂಭಾಗದಲ್ಲಿನ ಜನೋಪಕಾರ ದೊಡ್ಡಣ್ಣ ಶೆಟ್ಟರ ಮುಂದಿನ ವಿಶಾಲವಾದ ಆವರಣದಲ್ಲಿ (ಈಗಿನ ಅಪ್ಸರ ಥಿಯೇಟರ್ ಇರುವ ಮೈದಾನ) ಸುಂದರವಾದ ಭಾರಿ ಸಭಾ ಮಂಟಪವನ್ನು ನಿರ್ಮಿಸಿದರು. ಅದ್ಧೂರಿಯಾಗಿಯೂ, ವ್ಯವಸ್ಥಿತವಾಗಿಯೂ ಸಿದ್ಧತೆಗೊಳಿಸಿದ ಉತ್ಸವದಲ್ಲಿ ಭಾರತದ ಬೇರೆ ಬೇರೆ ನಗರಗಳಿಂದ ಕಲಾತಂಡಗಳು ಆಗಮಿಸಿ ಭಾಗಿಯಾಗಿದ್ದವು.



ಬಾಲಬ್ರೂಯಿ ಕಟ್ಟಡದಲ್ಲಿರುವ ಫಲಕ

ರವೀಂದ್ರನಾಥ ಠಾಗೂರರು ಸಿ.ಎಫ್. ಆಂಡ್ರೂಸ್ ಅವರೊಂದಿಗೆ ೧೯೧೯ನೇ ಜನವರಿ ೧೨ ರಂದು ಬೆಳಗ್ಗೆ ಮದರಾಸ್‌ನಿಂದ ರೈಲಿನಲ್ಲಿ ಬೆಂಗಳೂರಿಗೆ ಆಗಮಿಸಿದರು. ಅವರಿಗೆ ಹೈಗ್ರೌಂಡ್ಸ್‌ನ 'ಬಾಲಬ್ರೂಯಿ' ಪ್ರಾಸಾದದಲ್ಲಿ (ಬಂಗಲೆ) ತಂಗಲು ವಿಶೇಷ ವ್ಯವಸ್ಥೆ ಮಾಡಲಾಗಿತ್ತು. ಜಿ. ಎಸ್. ಚಕ್ರವರ್ತಿಯವರು ಬಂಗಾಲಿಯವರೇ ಆಗಿದ್ದುದರಿಂದ ಠಾಗೂರರ ಉಸ್ತುವಾರಿ ಅವರೇ ವಹಿಸಿಕೊಂಡಿದ್ದರು. ಇತರ ವ್ಯವಸ್ಥೆಯನ್ನು ಪಿ.


ಬಾಲಬ್ರೂಯಿ ಕಟ್ಟಡ

ಕೋದಂಡರಾಯರು ವಹಿಸಿಕೊಂಡಿದ್ದರು. ಉತ್ಸವದ ಅಂಗವಾಗಿ ಕಲಾಪ್ರದರ್ಶನ, ಲಲಿತಕಲಾ ಸಮ್ಮೇಳನ, ನಾಟಕ ಸ್ಪರ್ದೆ, ಸಂಗೀತ ಹಾಗೂ ವಿವಿಧ ವಿನೋದಾವಳಿ ಹೀಗೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಲಲಿತ ಕಲಾ ಪ್ರದರ್ಶನವನ್ನು ಸಭಾ ಮಂಟಪದ ಹಿಂದೆ ನೂತನವಾಗಿ ನಿರ್ಮಿತವಾಗಿದ್ದ ಕಟ್ಟಡದಲ್ಲಿ (ಈಗಿನ ಎಸ್. ಎಲ್. ಎನ್. ಶಾಲಾ ಕಟ್ಟಡ) ಏರ್ಪಾಟು ಮಾಡಲಾಗಿತ್ತು. ಆ ಕಲಾಪ್ರದರ್ಶನದ ಹೊಣೆಯನ್ನು ತಿರುಮಲೆ ತಾತಾಚಾರ್ಯ ಶರ್ಮ ಅವರು ವಹಿಸಿಕೊಂಡಿದ್ದರು. ಆ ಪ್ರದರ್ಶನದಲ್ಲಿ ಶಾಂತಿನಿಕೇತನದ ಕಲಾ ಶಾಲೆಯ ಕಲಾವಿದರ ತೈಲ ಮತ್ತು ವರ್ಣ ಚಿತ್ರಗಳು ಹಾಗೂ ಮೈಸೂರು ಅರಮನೆಯಿಂದ ಬಂದಿದ್ದ ಅಮೂಲ್ಯ ಕಲಾಕೃತಿಗಳು ಪ್ರದರ್ಶಿಸಲ್ಪಟ್ಟಿದ್ದವು. ಅಲ್ಲದೆ ಪ್ರಖ್ಯಾ ಕಲಾವಿದರು ಹಾಗೂ ಕಲಾವಿಮರ್ಶಕರೂ ಭಾಗವಹಿಸಿದ್ದರು. ಅಂದಿನ ದಿನಗಳಲ್ಲಿ ಆ ಮಹೋತ್ಸವವು ದಕ್ಷಿಣ ಭಾರತದ ಒಂದು ಮೈಲುಗಲ್ಲಾಗಿತ್ತು.

ಸಭಾ ಮಂಟಪವನ್ನು ಬಣ್ಣ ಬಣ್ಣದ ಬಟ್ಟೆಗಳಿಂದ ಶೃಂಗರಿಸಿ ತಳಿರುತೋರಣಗಳಿಂದ ಅಲಂಕರಿಸಲಾಗಿತ್ತು. ಎಲ್ಲರ ಬಾಯಲ್ಲಿ ಮಹೋತ್ಸವದ ಮಾತೇ. ಪ್ರಾರಂಭದ ದಿನವಾದ ೧೨ ರಂದು ಮಧ್ಯಾಹ್ನದಿಂದಲೇ ಮಂಟಪಕ್ಕೆ ಜನರು ಬರಲು ಪ್ರಾರಂಭಿಸಿದರು. ಮಂಟಪಕ್ಕೆ ವಿದ್ಯುತ್ ದೀಪಗಳನ್ನು ಅಳವಡಿಸಲಾಗಿತ್ತು. ವೇದಿಕೆಯ ಮೇಲೆ ಅಲ್ಲಲ್ಲಿ ತಾವರೆ ಹೂವಿನಂಥ ಅಲಂಕರಣ ಮಾಡಿ ಅಲ್ಲಿಂದ ಹೂವಿನ ದಳಗಳು ಠಾಗೂರರ ಮೇಲೆ ಬೀಳುವಂತೆ ವಿದ್ಯುತ್ ಚಾಲನೆ ನೀಡಿದ್ದರು. ಸುಮಾರು ನಾಲ್ಕು ಗಂಟೆಗೆ ಆಕರ್ಷಕವಾಗಿದ್ದ ಮಂಟಪದಲ್ಲಿ ಸುಮಾರು ಐದು ಸಾವಿರ ಜನರು ಬಹು ಶಿಸ್ತಿನಿಂದ ಕುಳಿತಿದ್ದಾರೆ.

ವೇದಿಕೆಯಲ್ಲಿ ನಾಲ್ಕು ಗಂಟೆಯಿಂದಲೇ ವಾಸುದೇವಾಚಾರ್ಯರಿಂದ ಸುಶ್ರಾವ್ಯ ಸಂಗೀತ ಪಕ್ಕವಾದ್ಯದೊಂದಿಗೆ ಪ್ರಾರಂಭವಾಯಿತು. ಇನ್ನೂ ಒಂದು ಗಂಟೆ ಆಗಿಲ್ಲ, ಆಗಲೇ ಸಂಗೀತ ಕೇಳಲು ಇಷ್ಟಪಡದ ಜನ ಚಪ್ಪಾಳೆಯ ಸುರಿಮಳೆ ಪ್ರಾರಂಭಿಸಿದರು. ಸಂಗೀತ ನಿಲ್ಲಲೇಬೇಕಾಯಿತು. ಸಹನೆ ಮೀರಿದ ಜನರನ್ನು ಹರ್ಷಗೊಳಿಸಲು ಬಳ್ಳಾರಿ ರಾಘವಾಚಾರ್ಯರು ವೇದಿಕೆಗೆ ಆಗಮಿಸಿ ತಮ್ಮ ನಟನಾ ಚಾತುರ್ಯವನ್ನೆಲ್ಲಾ ಉಪಯೋಗಿಸಿದರು. ಆದರೂ ಜನ ಸಮಾಧಾನರಾಗಲಿಲ್ಲ. ಈ ದೃಶ್ಯವನ್ನೆಲ್ಲಾ ಗಮನಿಸುತ್ತಿದ್ದ ಟಿ. ಪಿ. ಕೈಲಾಸಂ ಎದ್ದು ಬಂದು ತಿಪ್ಪಾರಳ್ಳಿ ಬಲುದೂರ ಮುಂತಾದ ಹಾಡುಗಳನ್ನು ಇಂಗ್ಲಿಷ್ ಮಟ್ಟಿನಲ್ಲಿ ಹಾಡಿದರು. ಸದ್ದಡಗಿತು. ನೆರದಿದ್ದವರೆಲ್ಲರೂ ಕೈಲಾಸಂ ಅವರನ್ನು ನೋಡಿದ್ದು ಆ ಹೆಸರನ್ನು ಕೇಳಿದ್ದು ಅದೇ ಮೊದಲು. ನಂತರ ಅವರು ಹಾರಿಸಿದ ಹಾಸ್ಯ ಚಟಾಕಿಗಳು ಸಭಿಕರನ್ನು ಹೊಟ್ಟೆ ಹುಣ್ಣಾಗುವಂತೆ ನಗಿಸಿಬಿಟ್ಟಿತು. ಅಷ್ಟರೊಳಗೆ ರವೀಂದ್ರರು ಕಾರಿನಲ್ಲಿ ಬಂದೇ ಬಿಟ್ಟರು. ವೇದಿಕೆಯಿಂದಲೇ ಗುರುದೇವರನ್ನು ಕಂಡ ಕೈಲಾಸಂ ``May I announce to you ladies and gentlemen of this destinguished gathering the arrival, at this moment, of the poet loureate of India Sir Rabindranath Tagore !"

ಎಂದು ಉದ್ಗರಿಸಿದರು. ಎಲ್ಲರೂ ತಲೆ ಹಿಂದಕ್ಕೆ ಹೊರಳಿಸಿನೋಡಿದರು. ಠಾಗೂರರು ವಿದ್ಯುದ್ದೀಪಗಳಿಂದ ಮಿನಿಗುಟ್ಟುತ್ತಿದ್ದ ಸಭಾಂಗಣಕ್ಕೆ ಪ್ರವೇಶಿಸುತ್ತಿದ್ದಂತೆಯೇ ಪ್ರೇಕ್ಷಕರಿಗೆ ಕೈಮುಗಿದುಕೊಂಡು ವೇದಿಕೆಗೆ ಆಗಮಿಸಿದರು. ಪ್ರಾಚೀನ ಋಷಿಯೋರ್ವರನ್ನು ನೆನಪಿಗೆ ತರುತ್ತಿದ್ದ ಆಕೃತಿ, ಹತ್ತಿರ ಸುಳಿದರೆ 'ಪಾದಕ್ಕೆರಗುವೆ' ಎಂಬ ಭಾವ ಪ್ರಚೋದನೆಯ ಠೀವಿ. ಹೀಗೆ ಇದ್ದ ಠಾಗೂರರು ವೇದಿಕೆ ಹತ್ತಿದೊಡನೆ ಮೇಲಿಂದ ಹೂವಿನ ಸುರಿಮಳೆಯಾಯಿತು. ಸಭಿಕರು ಕಿವಿ ಬಿರಿಯುವಂತೆ ಚಪ್ಪಾಳೆ ತಟ್ಟಿದರು. ಕಾರ್ಯಕ್ರಮ ಪ್ರಾರಂಭವಾಯಿತು.

ವಾಸುದೇವಾಚಾರ್ಯರಿಂದ 'ವಾತಾಪಿಗಣಪತಿಂಭಜೆ' ಪ್ರಾರ್ಥನೆ, ನಂತರ ರಾಘವಾಚಾರ್ಯರ ಮಗಳಿಂದ ಮತ್ತು ಕೈಸಾಸಂ ಅವರಿಂದ ಠಾಗೂರರ ಕೆಲವು ಕವನಗಳ ನಿವೇದನೆಯಾಯಿತು. ಗುರುದೇವರು ಆನಂದಿಸುತ್ತಿದ್ದರು. ನಂತರ ವಿದ್ಯಾ ಇಲಾಖೆಯ ಅಧಿಕಾರಿಯಾಗಿದ್ದ ಶ್ರೀಮತಿ ಬಿ.ಎ. ಶ್ರೀರಂಗಮ್ಮ ತಮ್ಮ ನಾಲ್ವರು ಶಿಷ್ಯೆಯರೊಂದಿಗೆ ವೀಣೆಯನ್ನು ನುಡಿಸಿದರು. ಇನ್ನೇನು ವೀಣಾವಾದನ ಮುಗಿಯುತ್ತಿದ್ದಂತೆಯೇ ಠಾಗೂರರು 'ಪ್ಲೀಸ್ ಕಂಟಿನ್ಯೂ' ಎಂದರು. ಮತ್ತೆ ಮುಂದುವರೆಯಿತು. ಆ ಸಂದರ್ಭದಲ್ಲಿ ಠಾಗೂರರು ಕುಳಿತಲ್ಲಿಯೇ ನೂತನ ಕವನಗಳ ರಚನೆಯಲ್ಲಿ ತಲ್ಲೀನರಾಗಿದ್ದರು. ಆನಂತರ `MESSAGE OF THE FORESTS' ಭಾಷಣ ಒಂದು ಗಂಟೆ ನಡೆಯಿತು. ಕೊನೆಯಲ್ಲಿ ಎಲ್ಲರಿಗೂ ವಂದಿಸಿದ ಠಾಗೂರರಿಗೆ ಸನಿಹದಲ್ಲಿದ್ದವರು ಪಾದಗಳಿಗೆರಗಲು ನಗೆಮೊಗದಿಂದ ಆಶೀರ್ವದಿಸಿ ತಂಗುದಾಣಕ್ಕೆ ತೆರಳಿದರು. ಆಗ್ಗೆ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಬಿ.ಎ. ವ್ಯಾಸಂಗ ಮಾಡುತ್ತಿದ್ದ ವಿ. ಸೀತಾರಾಮಯ್ಯ (ನಂತರದಲ್ಲಿ ಪ್ರಸಿದ್ಧ ಸಾಹಿತಿಯಾಗಿ ಹೆಸರು ಪಡೆದಿದ್ದ ಪ್ರೊ|| ವಿ. ಸೀತಾರಾಮಯ್ಯನವರು) ಠಾಗೂರರನ್ನು ನೋಡಲಿಕ್ಕೆ ಮೈಸೂರಿನಿಂದ ಬೆಂಗಳೂರಿಗೆ ರೈಲಿನಲ್ಲಿ ನೂರಾರು ಜನ ವಿದ್ಯಾರ್ಥಿಗಳೊಂದಿಗೆ ಆಗಮಿಸಿದ್ದರು. ಕಲಾಪ್ರದರ್ಶನದಲ್ಲಿ ವಂಗದೇಶದ ಕಲಾ ವೈಭವದ ಚಿತ್ರಗಳನ್ನು ಕನ್ನಡ ನಾಗರಿಕರೂ ಸನಿಹದಿಂದ ನೋಡಿ ಆನಂದಿಸಿದ್ದು ಅದೇ ಮೊದಲು. ಅಂತೆಯೇ ಕನ್ನಡ ನಾಡಿನ ಕಲೆಯ–ಕಲಾವಿದರ ಕೃತಿಗಳ ಪರಿಚಯ ಮೊಟ್ಟಮೊದಲು ಠಾಗೂರರಿಗೆ ಆದದ್ದು ಇಲ್ಲಿಯೇ.

ಮಹೋತ್ಸವದ ಮರುದಿನ

ದಿನಾಂಕ ೧೩ ರಂದು ಬೆಳಗ್ಗೆ ನಗರದ ವಿದ್ಯಾರ್ಥಿ ಸಮುದಾಯ ಲಾಲ್‌ಬಾಗ್‌ನ ಗಾಜಿನ ಮನೆಯಲ್ಲಿ ಗುರುದೇವರಿಗೆ ಸತ್ಕಾರಕೂಟವನ್ನು ಏರ್ಪಡಿಸಿದ್ದರು. ಪ್ರಕೃತಿ ಆರಾಧಕರಾಗಿದ್ದ ಠಾಗೂರರು ಗಾಜಿನ ಮನೆಯನ್ನು ಒಪ್ಪಲಿಲ್ಲ. ನಂತರ ಲಾಲ್‌ಬಾಗ್ ಪ್ರವೇಶಿಸುತ್ತಿದ್ದಂತೆಯೇ ಮನೋಹರವಾಗಿ ಇದ್ದ ಅರಳೀ ಮರಗಳ ಗುಂಪಿನ ಕೆಳಗೆ ಕಾರ್ಯಕ್ರಮವನ್ನು ಏರ್ಪಡಿಸಿದರು. ವಿದ್ಯಾರ್ಥಿ ಸಮುದಾಯದ ಕಾರ್ಯದರ್ಶಿ ಎಚ್. ವರದರಾಜಯ್ಯಂಗಾರ್ ಸ್ವಾಗತ ಭಾಷಣ ಮಾಡಿದರು. ಗುರುದೇವರು ಗೀತಾಂಜಲಿಯಿಂದ ಒಂದು ಕವನವನ್ನು ವಾಚಿಸಿ

ನಂತರ `The Mother's Prayer' ಎಂಬ ಕಿರುನಾಟಕದ ಸನ್ನಿವೇಶವನ್ನು ವಾಚಿಸಿದರು. 'ಕವಿವಾಣಿಯ ಅಂದಿನ ಪ್ರಭಾವ ಹುಡಗರಾದ ನಮಗೆ ಯಾವುದೋ ಬೇರ ಪ್ರಪಂಚದ ಸಂಪರ್ಕವನ್ನು ತಂದುಕೊಟ್ಟಿತ್ತು' ಎಂದು ಅಂದು ಭಾಗವಹಿಸಿದ್ದ ವಿದ್ಯಾರ್ಥಿಯೊಬ್ಬರು ಸ್ಮರಿಸಿದ್ದಾರೆ. ಆ ಕಾರ್ಯಕ್ರಮದಲ್ಲಿ ಮಾಸ್ತಿ ಮತ್ತು ಬಾಲಕ ಅ.ನ.ಕೃ. ಅವರೂ ಪಾಲ್ಗೊಂಡಿದ್ದರು.

ನಗರದ ಕೆಲವು ಗಣ್ಯ ನಾಗರಿಕರು ರವೀಂದ್ರರನ್ನು ಅವರವರ ಗೃಹಗಳಿಗೆ ಕರೆದೊಯ್ದು ಸತ್ಕರಿಸಿದುದೂ ಉಂಟು. ಇಂತಹವರಲ್ಲಿ ಸುಲ್ತಾನ್ ಪೇಟೆಯ ಬಿ. ವಿ. ಸುಬ್ಬರಾಯರೂ ಒಬ್ಬರು. ಇವರು ಪ್ರಸಿದ್ಧ ವಜ್ರ ವ್ಯಾಪಾರಿಗಳಾಗಿದ್ದು ಕಲಾಭಿಜ್ಞರೂ ಆಗಿದ್ದರು. ವ್ಯಾಪಾರದ ಸಂಬಂಧವಾಗಿ ಆಗಾಗ್ಗೆ ಪುಣೆ, ಕಲ್ಕತ್ತ ಹಾಗೂ ಇತರೆ ನಗರಗಳಿಗೆ ಹೋಗಿಬರುತ್ತಿದ್ದರು. ಆದ್ದರಿಂದ ಗುರುದೇವರ ಪರಿಚಯ ಮುಂಚೆಯೇ ಆಗಿತ್ತು. ಉತ್ಸವ ಪ್ರಾರಂಭವಾದ ಮೂರನೆಯ ದಿನ ಸುಬ್ಬರಾಯರ ಮನೆಗೆ ಆಗಮಿಸಿದ ರವೀಂದ್ರರನ್ನು ಕಾಣಲು ಡಿ.ವಿ. ಗುಂಡಪ್ಪ, ಮೋಕ್ಷಗುಂಡಂ ಕೃಷ್ಣಮೂರ್ತಿ, ಬೇಲೂರು ಶ್ರೀನಿವಾಸಯ್ಯಂಗಾರ್, ಕೆ. ಎಸ್. ಕೃಷ್ಣಯ್ಯಂಗಾರ್ ಮುಂತಾದ ಗಣ್ಯರು ಅವರವರ ಮಿತ್ರರೊಡನೆ ಆಗಮಿಸಿದ್ದರು. ಹೊರಾವರಣದಲ್ಲಿ ನೂರಾರು ಜನ ಸೇರಿದ್ದರು. ವೇಳೆಗೆ ಸರಿಯಾಗಿ ಆಗಮಿಸಿದ ಠಾಗೂರರನ್ನು ಸುಬ್ಬರಾಯರ ಮನೆಯವರೆಲ್ಲರೂ ಸ್ವಾಗತಿಸಿದರು. ಸುಬ್ಬರಾಯರು ಕೆಲವು ದಿನಗಳ ಮುಂಚೆ ಹುಟ್ಟಿದ್ದ ತಮ್ಮ ಗಂಡು ಮಗುವನ್ನು ಗುರುದೇವರ ಚರಣಗಳ ಮೇಲಿರಿಸಿ 'ಆಶೀರ್ವದಿಸಬೇಕು' ಎಂದರು. 'ಚಿರಂಜೀವಿಯ ಹೆಸರೇನು ?' 'ನಾಮಕರಣ ಇನ್ನೂ ಆಗಿಲ್ಲ ತಮ್ಮಿಂದಲೇ ಆಗಬೇಕು' ಎಂದರು. 'ಓ ಸರಿ ನಾರಾಯಣ' ಮಗು ಉತ್ತಮ ಕಲಾವಿದನಾಗಿ ಬೆಳೆಯಲಿ' ಎಂದು ಆಶೀರ್ವದಿಸಿದರು. (ಗುರುದೇವರ ಆಶೀರ್ವಾದದಂತೆ ಮುಂದೆ ನಗರದ 'ಕಲಾವಿದರು' ಸಂಸ್ಥೆಯಲ್ಲಿ ಪ್ರಸಿದ್ಧ ನಾಟಕಕಾರರಾಗಿದ್ದ ಬಿ. ಎಸ್. ನಾರಾಯಣ್) ಪುನಃ ಶ್ರೀರಂಗಮ್ಮನವರ ವೀಣಾವಾದನವನ್ನು ಸ್ವಲ್ಪ ಹೊತ್ತು ಆಲಿಸಿದರು. ನಂತರ ಡಿ. ವಿ. ಜಿ.ಯವರೊಡನೆ ಪ್ರಶ್ನೋತ್ತರ ಕಾರ್ಯಕ್ರಮ ನಡೆಯಿತು. ಅಲ್ಲಿಗೆ ಆಗಮಿಸಿದ್ದ ಕೊಲಿಜಿಯೇಟ್ ಹೈಸ್ಕೂಲಿನ ಕೆಲವು ವಿದ್ಯಾರ್ಥಿಗಳು ಗುರುದೇವರನ್ನು ತಮ್ಮ ಶಾಲೆಗೆ (ಈಗಿನ ಕಲಾ ಕಾಲೇಜು) ಆಹ್ವಾನಿಸಿದರು. ಮರುದಿನ ಪ್ರೌಢಶಾಲೆಗೆ ಬರುವ ವೇಳೆಗೆ ಸಭಾಂಗಣ ತುಂಬಿತ್ತು. ವಿದ್ಯಾರ್ಥಿಗಳು ಶೇಖರಿಸಿದ್ದ ಸುಮಾರು ಹತ್ತು ರೂಪಾಯಿ ಚಿಲ್ಲರೆಯನ್ನು ಗುರುದೇವರಿಗೆ ಅರ್ಪಿಸಿದರು. ಗುರುದೇವರು 'ನಾನು ಏನೂ ಮಾತನಾಡಬಾರದೆಂದಿದ್ದೆ, ಆದರೆ ಇಂದು ನನ್ನನ್ನು ಬೆಳಗಿಸಿ ಚೇತನಾವಂತನಾಗಿ ನಿಮ್ಮ ಬೆಂಗಳೂರಿನ ಸೂರ್ಯ ಪ್ರಚೋದಿಸಿದ್ದಾನೆ. ಅದರಿಂದ ಹೇಳುತ್ತೇನೆ. ಈ ಮೂರು ದಿನದಿಂದ ಮಾತ್ರ ನಿಮ್ಮೂರಿನ ಸೂರ್ಯೋದಯದ ಆನಂದವನ್ನು ಸವಿದಿದ್ದೇನೆ. ಇಂತಹ ದಿವ್ಯದರ್ಶನ ಪ್ರತಿದಿನವೂ ನಡೆಯುವ ನೀವು ಎಷ್ಟು ಭಾಗ್ಯವಂತರು. ಆ ಭಾಗ್ಯದ ಬಾಳನ್ನು ಬಾಳಿರಿ, ಭಾರತದ ಮಕ್ಕಳಾಗಿ ಪರೋಪಕಾರ

ಜೀವನ ನಡೆಸಿರಿ ಮುಂತಾಗಿ ಮಾತನಾಡಿದರು. ವಿದ್ಯಾರ್ಥಿಗಳಿಗೆ ಆ ಮೂರು ನಿಮಿಷಗಳ ಸರಳ ಭಾಷಣವು ಅಮೃತಮಯವಾಗಿತ್ತು. ಹಿಂದಿನ ದಿನ ಲಾಲ್‌ಬಾಗ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಸನಿಹದಿಂದ ಠಾಗೂರರ ಮಾತು ಕೇಳದ ಹಾಗೂ ನೋಡಲಿಕ್ಕೆ ಆಗದ ವಿದ್ಯಾರ್ಥಿಗಳಿಗೆ ಅಂದಿನ ಕಾರ್ಯಕ್ರಮ ಹೆಮ್ಮೆಯ ವಿಷಯವಾಗಿತ್ತು.

ವೀರಕೇಸರಿ ಸೀತಾರಾಮ ಶಾಸ್ತ್ರಿಗಳು ಮೂಲತಃ ಶೃಂಗೇರಿಯವರು. ಸಂಸ್ಕೃತ ವಿದ್ವಾಂಸರು. ಇವರು ೧೯೧೮ ರಲ್ಲಿ ಶೃಂಗೇರಿಯಿಂದ ಬೆಂಗಳೂರಿಗೆ ಆಗಮಿಸಿ ಶಂಕರಮಠದ ಆಡಳಿತ ವ್ಯವಸ್ಥೆಯ ಹೊಣೆಗಾರಿಕೆಯನ್ನು ವಹಿಸಿಕೊಂಡು ಅಲ್ಲಿನ ಸಂಸ್ಕೃತ ಪ್ರೌಢಶಾಲೆಯ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದರು. ಮಠದ ಪರವಾಗಿ ಸೀತಾರಾಮಶಾಸ್ತ್ರಿಗಳು ಗುರುದೇವರನ್ನು ಕಂಡು ಮಠಕ್ಕೆ ಆಹ್ವಾನಿಸಿದರು. ಠಾಗೂರರು ಮಠಕ್ಕೆ ಆಗಮಿಸಿ ಅಲ್ಲಿನ ಕಾರ್ಯ ಕಲಾಪಗಳನ್ನು ಕಂಡು 'ನಾನು ದೇಶದಲ್ಲೆಲ್ಲಾ ಸುತ್ತಿದ್ದೇನೆ. ಆದರೆ ನನ್ನ ಕಲ್ಪನೆಯ ಗುರುಕುಲ ಕಂಡಿದ್ದು ಶಂಕರಮಠದಲ್ಲಿ ಮಾತ್ರ' ಎಂದು ಉದ್ಗರಿಸಿದರು.

ಮಹೋತ್ಸವದಲ್ಲಿ ದಿನ ಬಿಟ್ಟು ದಿನ ಕವಿವರ್ಯರ ಭಾಷಣವಾದರೆ ಉಳಿದ ದಿನಗಳಲ್ಲಿ ಅವರ ಕವನಗಳ ನಿವೇದನ, ಗಾಯನವಾಯಿತು. ನಾಗಮ್ಮ ಎಂಬುವರು ಗಮಕ ವಾಚನ ಕಾರ್ಯಕ್ರಮ ನೀಡಿದರು. ಮತ್ತೊಂದು ದಿವಸ ನಾಟಕ ಕಲೆಗೆ ಸಂಬಂಧಿಸಿದ ಅನೇಕ ಪ್ರಸಂಗಗಳು, ಭಾಷಣ, ಚರ್ಚೆ, ವಿಚಾರ ಸಂಕಿರಣ ಮುಂತಾದ ಕಾರ್ಯಕ್ರಮಗಳು ನಡೆದವು. ವಿಚಾರ ಸಂಕಿರಣದಲ್ಲಿ ಶ್ರೀಮತಿ ಸರೋಜಿನಿ ನಾಯ್ಡು, ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್ ಮತ್ತಿತರರು ಭಾಗವಹಿಸಿದ್ದರು. ಇಲ್ಲಿದ್ದ ಒಂದು ವಾರದಲ್ಲಿ ರವೀಂದ್ರರಿಗೆ ಸ್ವಲ್ಪವೂ ಪುರುಸೊತ್ತಿಲ್ಲದಂತೆ ಕಾರ್ಯಕ್ರಮಗಳು. ಒಂದು ರಾತ್ರಿ ಅರೆತಾಸು ಬಿಡುವು ಮಾಡಿಕೊಂಡು ವರದಾಚಾರ್ಯರು ಕಲಾಸಿಪಾಳ್ಯದ ತಮ್ಮ ರತ್ನಾವಳಿ ನಾಟಕ ಮಂದಿರದಲ್ಲಿ ಆಡುತ್ತಿದ್ದ ಶಾಕುಂತಲ ನಾಟಕವನ್ನು ನೋಡಲು ಗುರುದೇವರು ಹೋಗಿದ್ದರು. ಮೊದಲ ದೃಶ್ಯದಲ್ಲೇ ದುಷ್ಯಂತನ ಪಾತ್ರದಲ್ಲಿ ವರನಟ ವರದಾಚಾರ್ಯರು ನೀಡಿದ ಉತ್ಕೃಷ್ಟ ಮಟ್ಟದ ಅಭಿನಯ ಗುರುದೇವರ ಹೃನ್ಮನವನ್ನು ಸಾರಾಸಗಟಾಗಿ ಸೂರೆ ಹೊಡೆದು ಬಿಟ್ಟಿತು. ಬಲವಂತಕ್ಕೊಪ್ಪಿ ಬಂದಿದ್ದ ಗುರುದೇವರು ಮೂರು ತಾಸುಗಳ ಕಾಲ ನಾಟಕ ನೋಡಿ ಆನಂದ ತುಂದಿಲರಾಗಿ ಕೊನೆಯಲ್ಲಿ ರಂಗಮಂಚವನ್ನೇರಿ ಮಾತನಾಡುತ್ತಾ 'ಇಂದು ವರನಟನ ನಟನೆಯನ್ನು ನೋಡದೇ ಹೋಗಿದಿದ್ದರೆ ನಾನು ನನ್ನ ಜೀವನದಲ್ಲಿ ಒಂದು ಅಮೂಲ್ಯವೆನಿಸುವ ಅನುಭವವನ್ನೇ ಖಂಡಿತವಾಗಿಯೂ ಕಳೆದುಕೊಳ್ಳುತ್ತಿದ್ದೆ ಎಂದರಂತೆ. ಇನ್ನೊಂದು ದಿವಸ ಬಳ್ಳಾರಿ ರಾಘವ ಅವರ 'ಚಾಣಕ್ಯ' ನಾಟಕ ನಡೆಯಿತು. ಆ ನಾಟಕದಲ್ಲಿ ರಾಘವರು ನಟಿಸಿದ ಚಾಣಕ್ಯ ಪಾತ್ರವನ್ನು ಕಂಡ ಠಾಗೂರರು 'ಕರ್ನಾಟಕದಿಂದ ನಾನು ಕೊಂಡೊಯ್ಯುವ ಅತಿ ಸವಿಯಾದ

ನೆನಪುಗಳಲ್ಲಿ, ಈ ನಾಟಕ ವೀಕ್ಷಣೆಯೂ ಒಂದು, ಇಂದಿನ ನಟ ಶ್ರೇಷ್ಠರಲ್ಲಿ ರಾಘವ ಅಗ್ರಗಣ್ಯರು' ಎಂದು ನುಡಿದರು. ಒಂದು ಸಂಜೆ ಸಭಾಮಂಟಪದಲ್ಲಿ ಗುರುದೇವರಿಗೆ ಸನ್ಮಾನ ಸಮಾರಂಭ ನಡೆಯಿತು. ಆ ಸಂದರ್ಭದಲ್ಲಿ ಬಳ್ಳಾರಿ ರಾಘವ, ವಡ್ಡಂ ಶಾಮರಾವ್, ಕೆ. ಭೀಮರಾವ್ , ಕೈಲಾಸಂ ಮುಂತಾದವರು ಇಂಗ್ಲಿಷ್ ಕವಿಗಳ ಹಾಗೂ ನಾಟಕ ಭಾಗಗಳನ್ನು ವೇದಿಕೆಯ ಮೇಲೆ ರಮ್ಯವಾಗಿ ಪ್ರದರ್ಶಿಸಿದರು. ನಾಟಕಸ್ಪರ್ಧೆಯಲ್ಲಿ ಕೈಲಾಸಂ ಅವರ 'ಟೊಳ್ಳುಗಟ್ಟಿ' ನಾಟಕಕ್ಕೆ ಪ್ರಥಮ ಬಹುಮಾನ ದೊರೆಯಿತು. ತೀರ್ಪುಗಾರಾಗಿದ್ದವರು ಬಿ. ಎಂ. ಶ್ರೀಕಂಠಯ್ಯನವರು, ಬೆನಗಲ್ ರಾಮರಾವ್ ಮತ್ತು ನಂಗಪುರಂ ವೆಂಕಟೇಶಯ್ಯಂಗಾರ್. ಠಾಗೂರರು ನಗರದಲ್ಲಿದ್ದ ಅವಧಿಯಲ್ಲಿ Shesher Kobita ಎಂಬ ಬಂಗಾಲಿ ಕಾದಂಬರಿಯನ್ನು ರಚಿಸಿದರು. ಎರಡು ದಿನದ ಶ್ರವಣಬೆಳಗೊಳ ಬೇಲೂರು, ಹಳೇಬೀಡು ಮುಂತಾದ ಸ್ಥಳಗಳಿಗೆ ಭೇಟಿ ನೀಡಿದರು. ಕೊನೆಯ ದಿನ ಸಂಜೆ ರವೀಂದ್ರರ ಪ್ರಸಿದ್ಧ ನಾಟಕ 'ಅಂಚೆಯ ಮನೆ (ಡಾಕ್‌ಘರ್) ಪ್ರದರ್ಶನವಾಯಿತು. ಬಹು ವೈಭವದಿಂದ ದಿನವಿಡೀ ಒಂದು ವಾರ ನಡೆದ ಅಖಿಲ ಭಾರತ ಮಟ್ಟದ ಲಲಿತಕಲಾ ಮಹೋತ್ಸವದಲ್ಲಿ ಪಲ್ಗೊಂಡಿದ್ದ ಕನ್ನಡನಾಡಿನ ರಸಿಕ ವೃಂದಕ್ಕೆ ದೊಡ್ಡಣ್ಣ ಹಾಲ್ ಮುಂದಿನ ಬಯಲು ರಸದೌತಣವೀಯುವ ಯಾತ್ರಾಸ್ಥಳವಾಗಿ ಬಹುಕಾಲ ಮನಃಪಟದ ಮೇಲೆ ಸುಳಿದಾಡುವಂತಹ ಮರೆಯಲಾಗದ ನೆನಪಾಯಿತು. ಕೊನೆಯ ದಿನವಾದ ೧೮ ರಂದು ರಾತ್ರಿ ಠಾಗೂರರು ಮತ್ತು ಆಂಡ್ರಸರು ನಗರದಿಂದ ರೈಲಿನಲ್ಲಿ ಹೊರಟು ಮೈಸೂರು ತಲುಪಿದರು.

ಮತ್ತೆ ಬೆಂಗಳೂರಿನಲ್ಲಿ

ಮೈಸೂರಿನಿಂದ ಊಟಿಗೆ ಹೊರಟು ೧೬ ದಿವಸ ವಿಶ್ರಾಂತಿ ಪಡೆದ ಠಾಗೂರರು ಅಲ್ಲಿಂದ ತಮಿಳುನಾಡಿನಲ್ಲಿ ಪ್ರವಾಸ ಮಾಡಿ ಮದನಪಲ್ಲಿ ಮೂಲಕ ೪೫ ದಿವಸಗಳ ನಂತರ ಮಿಥಿಕ್ ಸೊಸೈಟಿಯ ಆಹ್ವಾನದ ಮೇರೆಗೆ ಮಾರ್ಚ್ ೮ ರಂದು ಬೆಂಗಳೂರಿಗೆ ಎರಡನೆ ಸಲ ಆಗಮಿಸಿದರು. ಮರುದಿವಸ ಅಂದರೆ ೧೯೧೯ರ ಮಾರ್ಚ್ ೯ ರಂದು ಸಂಜೆ ೫-೩೦ ಗಂಟೆಗೆ ಮಿಥಿಕ್ ಸೊಸೈಟಿಯ ಆಶ್ರಯದಾತರಾಗಿದ್ದ ಶ್ರೀ ಮದ್ಯುವರಾಜ ನರಸಿಂಹರಾಜ ಒಡೆಯರ್ ಅವರೊಂದಿಗೆ ಕಾರ್‌ನಲ್ಲಿ ಆಗಮಿಸಿದ ಗುರುದೇವರನ್ನು ಮಿಥಿಕ್ ಸೊಸೈಟಿ ಅಧ್ಯಕ್ಷರಾಗಿದ್ದ ಫಾದರ್ ಟೆಬಾರ್ಡ್ ಸ್ವಾಗತಿಸಿದರು. ಹಂಗಾಮಿ ದಿವಾನರಾಗಿದ್ದ ಆಲ್ಬಿಯನ್ ಬ್ಯಾನರ್ಜಿಯವರು ವೇದಿಕೆಗೆ ಕರೆತಂದರು.

ಠಾಗೂರರ ಮನಸ್ಸಿನ ಮೇಲೆ ಗಾಢ ಪರಿಣಾಮ ಬೀರಿದ್ದವರು ಸುಮಾರು ೩೦೦ ವರ್ಷಗಳ ಇತಿಹಾಸವಿದ್ದ ಬಂಗಾಲದ 'ಬಾವುಲ್' ಜನಾಂಗದವರು. ಇವರು ಹಳ್ಳಿಗಾಡಿನ ಅಲೆಮಾರಿ ಜನಾಂಗದ ಜಾನಪದ ಕಲಾವಿದರು. ಅವಿದ್ಯಾವಂತರಾದ ಗಾಯಕ ಸಮುದಾಯದವರು. ಇವರು ಏಕನಾದದೊಂದಿಗೆ ಖಾವಿ ಉಡುಗೆಯೊಂದಿಗೆ ಸುಶ್ರಾವ್ಯವಾಗಿ ದಾಸರ ಪದಗಳನ್ನೂ, ಗ್ರಾಮ ಗೀತೆಗಳನ್ನು

ಹಾಡುವವರು. ಇವರ ಹಾಡುಗಾರಿಕೆಯನ್ನು ಗಮನಿಸುತ್ತಿದ್ದ ಗುರುದೇವರು ಆಗಾಗ್ಗೆ ಪುಳಕಿತರಾಗಿ ಮೈಮರೆತು ಕುಣಿದುಬಿಡುತ್ತಿದ್ದರಂತೆ. ಮಾನವನನ್ನೇ ದೇವರಾಗಿ ಕಾಣುತ್ತಿದ್ದ ಈ ಸನ್ಯಾಸಿಗಳ ಬಗ್ಗೆ ಕೆಲ ವರ್ಷಗಳ ಹಿಂದೆ ಅಧ್ಯಯನ ಮಾಡಿ ಸಂಗ್ರಹಿಸಿದ್ದ ಮಾಹಿತಿಯನ್ನು ಠಾಗೂರರು ಊಟಿಯಲ್ಲಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದ ಸಂದರ್ಭದಲ್ಲಿ ಪ್ರಬಂಧ ರೂಪದಲ್ಲಿ ಸಿದ್ಧಪಡಿಸಿದ್ದರು. ಆ ವಿಷಯದ ಬಗ್ಗೆ (Folk-Religions of India) ಸುಮಾರು ಒಂದೂವರೆ ಗಂಟೆ ಕಾಲ ಅನುಭವಪೂರಿತ ಉಪನ್ಯಾಸವನ್ನು ಮಿಥಿಕ್ ಸೊಸೈಟಿಯ ವಿದ್ವತ್ ಸಮೂಹದಲ್ಲಿ ನೀಡಿದರು. ಕೊನೆಯಲ್ಲಿ ಮೈಸೂರರಸರು ಕಲೆಯ ಏಳಿಗೆಗಾಗಿ ಮಾಡುತ್ತಿದ್ದ ಪ್ರಯತ್ನವನ್ನು ಮನಸಾರೆ ಹೊಗಳಿದರು. ಈ ಕಾರ್ಯಕ್ರಮದ ನಂತರ ಠಾಗೂರರು ಅಂದು ರಾತ್ರಿಯೇ ಮದರಾಸ್ ಮೂಲಕ ಕಲ್ಕತ್ತೆಗೆ ಪ್ರಯಾಣ ಬೆಳಸಿದರು.

ಪರಾಮರ್ಶನ ಗ್ರಂಥಗಳು :

೧. ತಿರುಮಲೆ ತಾತಾಚಾರ್ಯ ಶರ್ಮ, ೨೦೦೨. 'ನನ್ನ ಜೀವನ ಮತ್ತು ಧ್ಯೇಯ'. ನವನೀತ ಪ್ರಕಾಶನ, ಬೆಂಗಳೂರು.

೨. ರಾಧಾಕೃಷ್ಣ, ಬಿ.ಪಿ. ೧೯೯೭, 'ಸಾರ್ಥಕ ಬದುಕು' (ವೀ.ಸೀ. ಜೀವನ ಮತ್ತು ಸಾಧನೆ) ವಿ. ಸೀ. ಸಂಪದ, ಬೆಂಗಳೂರು.

೩. ಕೇಶವರಾವ್, ಬಿ.ಎಸ್. ೨೦೦೧, 'ಮರೆಯಲಾಗದವರು' ಆದಿತ್ಯ ಪ್ರಕಾಶನ ಬೆಂಗಳೂರು.

೪. ಡಾ॥ ನಾಯಕ ಹಾ. ಮಾ. ಪ್ರಧಾನ ಸಂಪಾದಕರು, ೧೯೭೯, 'ಕರ್ನಾಟಕ ವಿಷಯ ವಿಶ್ವಕೋಶ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

೫. ಡಾ॥ ನಾಯಕ್, ಹಾ. ಮಾ. 'ರವೀಂದ್ರನಾಥ ಠಾಗೂರ್' ಶಾರದಾ ಮಂದಿರ, ರಾಮಯ್ಯಂಗಾರ್ ರಸ್ತೆ, ಮೈಸೂರು–೪.

೬. ಹಿರಣ್ಮಯ ಬ್ಯಾನರ್ಜಿ, ೧೯೭೧, ಅನುವಾದ : ಎಲ್. ಎಸ್. ಶೇಷಗಿರಿರಾವ್, ರವೀಂದ್ರನಾಥ ಠಾಗೂರ್, ಪ್ರಕಾಶನ ವಿಭಾಗ, ಸಮಾಚಾರ ಮತ್ತು ಪ್ರಸಾರ ಮಂತ್ರಿ ಶಾಖೆ, ಭಾರತ ಸರ್ಕಾರ.

೭. ರಾಮಸ್ವಾಮಿ, ಎಸ್. ಆರ್. ೧೯೯೮, 'ದೀವಟಿಕೆಗಳು', ಸಾಹಿತ್ಯ ಸಿಂಧು ಪ್ರಕಾಶನ, ಬೆಂಗಳೂರು.

೮. ರಾಮಸ್ವಾಮಿ ಎಸ್. ಆರ್. ೨೦೧೧ 'ಭಾರತ ಭಾಸ್ಕರ ರವೀಂದ್ರನಾಥ ಠಾಕೂರ್' ಗೋಖಲೆ ಸಾರ್ವಜನಿಕ ಸಂಸ್ಥೆ.

೯. ಪಾರ್ವತಿ ಎಚ್. ಎಸ್. ೧೯೭೨, 'ಭಾರತಿ' ತಿರುಮಲೆ ರಾಜಮ್ಮ ಅಭಿನಂನಾ ಸಮಿತಿ, ಬೆಂಗಳೂರು.

೧೦. ಎ.ಡಿ.ಎ. ಶತಮಾನೋತ್ಸವ ಸ್ಮರಣ ಸಂಚಿಕೆ, ೨೦೦೯, ಬೆಂಗಳೂರು.

೧೧. 'ಕತೆಗಾರ' ಮಾಸಪತ್ರಿಕೆ, ನವಂಬರ್ ೧೯೪೪. ಎ. ಸಂಪದ್ಗಿರಿರಾವ್ ಭಾಷಣದಿಂದ, ಸಂ.: ಎಂ. ಎಸ್. ನಾರಾಯಣರಾವ್.

೧೨. 'ಮೈಸೂರು ಸ್ಟಾರ್' ಕನ್ನಡ ವಾರಪತ್ರಿಕೆ, ೧೯೧೮ ಡಿಸೆಂಬರ್, ೨೯, ಮತ್ತು ೧೯೧೯ ಮಾರ್ಚ್ ೧೩.

೧೩. 'ರವೀಂದ್ರ ಪ್ರಶಸ್ತಿ' ಕವಿವರರಿಗೆ ಕನ್ನಡ ಲೇಖಕರ ಕಾಣಿಕೆ, ೧೯೬೨. ಮುಖ್ಯ ಸಂ. : ಡಾ॥ ಮಾಸ್ತಿ ವೆಂಕಟೇಶ ಅಯ್ಯಂಗಾರ್. ಮೈಸೂರು ಸರ್ಕಾರದ ಸಾಹಿತ್ಯ ಸಂಸ್ಕೃತಿ ಅಭಿವೃದ್ಧಿ ಶಾಖೆ, ಬೆಂಗಳೂರು.

14. 'ANJALI' A tribute to Tagore, Rabindra Shanti Mela,1961, Bangalore.

15. A Centenary Volume, Rabindranath Tagore, 1861-1961.

16. Mysore Archives, Avasarada Hobli, 1918 AH-M-B-I-155, HRS File

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದಿಂದ, 'ಸಿರಿಕಂಠ' ವಿದ್ಯಾರ್ಥಿ ವೇದಿಕೆಯ ತಿಂಗಳ ಕಾರ್ಯಕ್ರಮದ ಪ್ರಯುಕ್ತ ೨೬–೧೧–೨೦೧೧ ರಂದು ಶನಿವಾರ ನೀಡಿದ ಉಪನ್ಯಾಸದ ಸಂಕ್ಷಿಪ್ತರೂಪ.

ಕರ್ನಾಟಕ ಲೋಚನ
ಸಂಪುಟ ೨೬, ಸಂಚಿಕೆ ೧-೨
ಜನವರಿ-ಡಿಸೆಂಬರ್

೬. ಧನಂಜಯನ ದಶರೂಪಕ ಮತ್ತು ಶೀರ್ಷಿಕೆಯ ಔಚಿತ್ಯ

-ಎಸ್. ಹೆಚ್. ಶಿವಗಂಗಮ್ಮ

ಸಂಸ್ಕೃತ ಸಾಹಿತ್ಯವನ್ನು ಶಾಸ್ತ್ರ ಮತ್ತು ಕಾವ್ಯ ಎಂದ ಸ್ಥೂಲವಾಗಿ ಎರಡು ವಿಭಾಗಗಳನ್ನಾಗಿ ಆಲಂಕಾರಿಕರು ವಿಂಗಡಿಸುತ್ತಾರೆ. ಶಾಸ್ತ್ರವು ಬುದ್ಧಿಗಮ್ಯ, ಕಾವ್ಯವು ಪ್ರತಿಭಾಜನ್ಯ.

ದ್ವೇ ವರ್ತ್ಮನೀ ಗಿರಾಂ ದೇವ್ಯಾಃ ಶಾಸ್ತ್ರಂ ಚ ಕವಿಕರ್ಮ ಚ ।

ಪ್ರಜ್ಞೋಪಜ್ಞಂ ತಯೋರಾದ್ಯಂ ಪ್ರತಿಭೋದ್ಭವಮಂತಿಮಮ್ ॥ (ಭಟ್ಟತೌತ)

ಶಾಸ್ತ್ರ ಜ್ಞಾನಕ್ಕೆ ಸರಸ್ವತಿಯ ವರಪ್ರಸಾದವಾಗಬೇಕು. ಉಪದೇಶದಿಂದ ಶಾಸ್ತ್ರಜ್ಞಾನ ಶಕ್ಯ. ಕಾವ್ಯಪ್ರತಿಭೆ ಅಶಕ್ಯ. ಅಂದರೆ ಶಾಸ್ತ್ರವನ್ನು ವಿದ್ಯಾವಂತರೆಲ್ಲರೂ ಅರಿಯಬಹುದು. ಕಾವ್ಯಸೌಂದರ್ಯವನ್ನು ರಸಿಕರು ಮಾತ್ರ ಸವಿಯಬಲ್ಲರು.

" ಕಾವ್ಯಂ ತು ಜಾಯತೇ ಜಾತು ಕಸ್ಯಚಿತ್ ಪ್ರತಿಭಾವತಃ" ॥ (ಭಾಮಹ)

ಹೀಗೆ ಕಾವ್ಯ ಶಾಸ್ತ್ರಗಳಿಗೆ ಭೇದವಿದ್ದರೂ, ಎರಡರ ಗುರಿಯೂ ಒಂದೇ ಆಗಿರುತ್ತದೆ.

ಕಾವ್ಯಸಾಹಿತ್ಯವನ್ನು ಶ್ರವ್ಯ ಮತ್ತು ದೃಶ್ಯ ಎಂಬುದಾಗಿ ವಿಂಗಡಿಸಲಾಗಿದೆ. "ಶ್ರೋತುಂ ಯೋಗ್ಯಂ ಶ್ರವ್ಯಮ್" ಕೇಳಿ ಆನಂದಿಸುವಂತಹದ್ದು ಶ್ರವ್ಯಕಾವ್ಯ. ಶ್ರವ್ಯಕಾವ್ಯವನ್ನು ಗದ್ಯ, ಪದ್ಯ ಮತ್ತು ಚಂಪೂ ಎಂದು ವಿಭಾಗಿಸಲಾಗಿದೆ. ಗದ್ಯವೆಂದರೆ-ಮನೋರಂಜಕವಾದ ದಂತಕಥೆಗಳೇ ಮೊದಲ್ಗೊಂಡ ಸಮಾಸಭೂಯಿಷ್ಠವಾದ ಶೈಲಿಯಾಗಿರುತ್ತದೆ. ಉದಾ : ದಶಕುಮಾರ ಚರಿತೆ ಮುಂತಾದವು. ಪದ್ಯವೆಂದರೆ-ಛಂದೋಬದ್ಧವಾದ ಮತ್ತು ಪಾದಬದ್ಧವಾದ ರಚನೆಯಾಗಿರುತ್ತದೆ. ಉದಾ : ರಘುವಂಶಮ್ ಇತ್ಯಾದಿ. ಚಂಪೂಕಾವ್ಯವೆಂದರೆ-ಗದ್ಯಪದ್ಯಗಳ ಸುಮಧುರ ಮಿಶ್ರಣವಾಗಿರುತ್ತದೆ. ಉದಾ : ಚಂಪೂರಾಮಾಯಣ ಇತ್ಯಾದಿ.

"ದ್ರಷ್ಟುಂ ಯೋಗ್ಯಂ ದೃಶ್ಯಮ್ "ಕೇಳಿ ನೋಡಿ ಕಾವ್ಯಾನಂದವನ್ನು

ಆಸ್ವಾದಿಸುವುದೇ ದೃಶ್ಯಕಾವ್ಯ. ದೃಶ್ಯಕಾವ್ಯದಲ್ಲಿ ರೂಪಕಗಳು–ಹತ್ತು. ಅವುಗಳೆಂದರೆ

ನಾಟಕ ಸಪ್ರಕರಣ ಬಾಣ ಪ್ರಹಸನಃ ಡಿಮಃ ।

ವ್ಯಾಯೋಗ ಸಮವಕಾರ ವೀಥ್ಯಂಕೇಹಾಮೃಗಾ ಇತಿ ॥ (ಧ.ದರೂ.೧.೮)

ಹೀಗೆ ಧನಂಜಯನು ರಸವನ್ನಾಶ್ರಯಿಸಿದ ನಾಟಕಗಳು ಹತ್ತು. " ದಶಧೈವ ರಸಾಶ್ರಯಮ್" ಎಂಬುದಾಗಿ ಹೇಳುತ್ತಾನೆ ಈ ವಿಭಜನೆಯನ್ನು ಭರತನ ನಾಟ್ಯಶಾಸ್ತ್ರದಲ್ಲಿಯೂ ಗಮನಿಸುತ್ತೇವೆ. ಆದರೆ ಧನಂಜಯನು ಮಾಡಿರುವ ವಿಭಜನೆಯು ವಸ್ತು, ನಾಯಕ, ರಸ–ಇವುಗಳ ಭೇದಗಳ ಆಧಾರದ ಮೇಲೆ ರೂಪಕದ ಹತ್ತು ವಿಧಗಳನ್ನು ಹೇಳಲಾಗಿದೆ. 'ವಸ್ತುನೇತಾರಸಸ್ತೇಷಾಂ' (ದ.ರೂ. ೧;೧೦) ಈ ವಿಭಜನೆ ಧನಂಜಯನ ವೈಶಿಷ್ಟ್ಯವೂ ಆಗಿದೆ.

ಧನಂಜಯನ ದಶರೂಪಕದಲ್ಲಿ ವಿವರಿಸಿರುವಂತೆ ಅವುಗಳ ಲಕ್ಷಣಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ.

ನಾಟಕ : ರೂಪಕಗಳು ಎಲ್ಲಾ ಪ್ರಕಾರಗಳಿಗಿಂತಲೂ ನಾಟಕಕ್ಕೆ ಹೆಚ್ಚಿನ ಮಹತ್ವವನ್ನು ಧನಂಜಯನು ನೀಡುತ್ತಾನೆ. ಕಾರಣ ನಾಟಕವು ಪ್ರಕರಣವೇ ಮೊದಲಾದ ಎಲ್ಲಾ ರೂಪಕಗಳ ಲಕ್ಷಣಗಳನ್ನು ಸಂಪೂರ್ಣವಾಗಿ ಹೊಂದಿರುವುದರಿಂದ ನಾಟಕ ಲಕ್ಷಣವನ್ನು ಹೇಳಲಾಗಿದೆ.

ನಾಟಕ ಕಥಾವಸ್ತುವು ಪುರಾಣ ಇತಿಹಾಸಾದಿಗಳಲ್ಲಿ ಪ್ರಸಿದ್ಧವಾಗಿರಬೇಕು. ಐದು ಅರ್ಥಪ್ರಕೃತಿಗಳು, ಐದು ಅವಸ್ಥೆಗಳು, ಸಂಧಿ, ಸಂಧ್ಯಂಗಗಳನ್ನು ಯೋಜಿಸಲಾಗುತ್ತದೆ. ಶೃಂಗಾರ, ವೀರ, ಕರುಣ ಯಾವುದಾದರೊಂದು ರಸ ಪ್ರಧಾನವಾಗಿರಬೇಕು, ಉಳಿದವು ಸಹಾಯಕಗಳಾಗಿರಬೇಕು. ನಾಯಕ ಧೀರೋದಾತ್ತನಾಗಿರಬೇಕು, ಐದರಿಂದ ಹತ್ತು ಅಂಕಗಳಿಂದ ಕೂಡಿರಬೇಕು. ಉದಾ : ಅಭಿಜ್ಞಾನ ಶಾಕುಂತಲ.

ಪ್ರಕರಣ : ಪ್ರಕರಣದಲ್ಲಿ ಕಥಾವಸ್ತುವು ಕವಿಕಲ್ಪಿತ, ನಾಯಕ ಧೀರಪ್ರಶಾಂತ, ಶೃಂಗಾರರಸ ಪ್ರಧಾನವಾದರೂ ವೀರರಸದ ಸಂಸ್ಪರ್ಶವಿರುತ್ತದೆ. ನಾಯಕಿಯು ಕುಲಸ್ತ್ರೀ ಅಥವಾ ವೇಶ್ಯೆಯಾಗಿರುತ್ತಾಳೆ. ಐದರಿಂದ ಹತ್ತು ಅಂಕಗಳಿಂದ ಕೂಡಿರುತ್ತದೆ. ಉದಾ : ಮೃಚ್ಛಕಟಿಕ.

ನಾಟಿಕಾ : ಇದು ಮೂಲತಃ ಉಪರೂಪಕಗಳಲ್ಲಿ ಒಂದಾದರೂ ಧನಂಜಯ ತನ್ನ ಕೃತಿಯಲ್ಲಿ ನಾಟಕ ಮತ್ತು ಪ್ರಕರಣದ ಲಕ್ಷಣವನ್ನು ಹೊಂದಿರುವಂತಹ ಸಂಕೀರ್ಣವಾದ ನಾಟಿಕಾದ ಲಕ್ಷಣವನ್ನು ಹೇಳುತ್ತಾನೆ.

ನಾಟಿಕಾದ ಕಥಾವಸ್ತುವು ಕವಿಕಲ್ಪಿತವಾದದ್ದು. ಶೃಂಗಾರರಸ ಪ್ರಧಾನ. ಇಲ್ಲಿ ಸ್ತ್ರೀಯರು ಬಹಳ ಇದ್ದು ನಾಟಿಕಾವು ಮೂರು ಅಥವಾ ನಾಲ್ಕು ಅಂಕಗಳಿಂದ ಕೂಡಿರುತ್ತದೆ. ಉದಾ : ರತ್ನಾವಳಿ.

ಬಾಣ : ಬಾಣ ಎಂದರೆ ಚತುರನೂ ಬುದ್ಧಿವಂತನೂ ಆದ ವಿಟನೊಬ್ಬನು ವರ್ಣಿಸುವಂತಹ ತನ್ನ ಅಥವಾ ಬೇರೊಬ್ಬರ ಧೂರ್ತ ಚರಿತ್ರೆಯಾಗಿರುತ್ತದೆ. ಕರುಣ, ಅದ್ಭುತ ರಸಗಳ ಜೊತೆಗೆ ಭಾರತೀವೃತ್ತಿ ಯೋಜಿತವಾಗಿರುತ್ತದೆ. ಹತ್ತುಲಾಸ್ಯಾಂಗಗಳೂ ಸಹ ಆಯೋಜಿಸಲ್ಪಟ್ಟಿರುತ್ತವೆ. ಉದಾ : ಲೀಲಾಮಧುಕರ.

ಪ್ರಹಸನ : ಪ್ರಹಸನದಲ್ಲಿಯೂ ಸಹ ಕಥಾವಸ್ತು ಬಾಣದಂತೆ ಸಂಧಿ, ಸಂಧ್ಯಂಗ, ಲಾಸ್ಯ ಮೊದಲಾದವುಗಳನ್ನು ಸಂಯೋಜನೆ ಮಾಡಲಾಗಿರುತ್ತದೆ. ಪ್ರಹಸನದಲ್ಲಿ ಹಾಸ್ಯರಸದ ಭೇದಗಳಾದ ಸ್ಮಿತ, ಹಸಿತ, ವಿಹಸಿತ, ಉಪಹಸಿತ, ಅಪಹಸಿತ, ಅತಿಹಸಿತ ಎಂಬ ಆರು ವಿಧಗಳನ್ನು ಯೋಜಿಸಲಾಗಿರುತ್ತದೆ. ಉದಾ : ಕಂದರ್ಪಕೇಲಿ, ಲಟಕಮೇಲಕ.

ಡಿಮ : ಡಿಮವೆಂದರೆ ಸಂಘಾತ (ಪೆಟ್ಟು). ಅಂದರೆ ನಾಯಕನ ಸಂಘಾತದ ವ್ಯಾಪಾರವಿರುವ ರೂಪಕವೇ 'ಡಿಮ' ಕಥಾವಸ್ತುವು ಇತಿಹಾಸ ಪ್ರಸಿದ್ಧವಾದುದು. ಭಾರತೀ, ಸಾತ್ವತೀ, ಆರಭಟೀ ವೃತ್ತಿಗಳನ್ನು ಯೋಜಿಸಲಾಗಿರುತ್ತದೆ. ರೌದ್ರರಸ ಪ್ರಧಾನವಾಗಿರುತ್ತದೆ. ಸಂಧಿಗಳು ಅಂಗಸಹಿತವಾಗಿರುತ್ತವೆ. ಉದಾ : ತ್ರಿಪುರದಾಹ.

ವ್ಯಾಯೋಗ : ವ್ಯಾಯೋಗವೆಂದರೆ ಅನೇಕ ಪುರುಷರಿಂದ ಯೋಜಿಸಲಾದದ್ದು. ರಸಗಳು ಡಿಮದಂತೆಯೇ ಹಾಸ್ಯ ಶೃಂಗಾರಗಳನ್ನುಳಿದು ಇತರ ಆರು ರಸಗಳು ವೃತ್ತಿಗಳನ್ನು ಆಶ್ರಯಿಸಿರುತ್ತವೆ. ವ್ಯಾಯೋಗದಲ್ಲಿ ಯುದ್ಧವಿರುತ್ತದೆ. ಯುದ್ಧಕ್ಕೆ ಕಾರಣ ಸ್ತ್ರೀ ಇರಬಹುದು ಅಥವಾ ಬೇರೆಯಾಗಿರಬಹುದು. ಉದಾ : ಸೌಗಂಧಿಕಾಹರಣ.

ಸಮವಾಕಾರ : ಸಮವಾಕಾರವೆಂದರೆ ವಿಷಯಗಳು ಚದುರಿಕೊಂಡಿರುತ್ತವೆ ಎಂದರ್ಥ. ವಿಮರ್ಶ ಸಂಧಿಯನ್ನುಳಿದು ಉಳಿದ ನಾಲ್ಕು ಸಂಧಿಗಳಿರುತ್ತವೆ. ಉದಾ: ಸಮುದ್ರಮಂಥನ.

ವೀಥಿ : ಸಾಮಾನ್ಯವಾಗಿ ವೀಥೀಯು ಬಾಣವನ್ನು ಹೋಲುತ್ತದೆ. ಶೃಂಗಾರರಸ ಪ್ರಧಾನವಾದುದು. ರಸದ ಔಚಿತ್ಯದಿಂದಲೇ ಇಲ್ಲಿ ಕೌಶಿಕೀವೃತ್ತಿ ಯೋಜಿತವಾಗಿರುತ್ತದೆ. ಉದಾ : ಮಾಲವಿಕಾ.

ಅಂಕ : (ಉತ್ಸೃಷ್ಟಿಕಾಂಕ) ರೂಪಕದ ಅಥವಾ ನಾಟಕದಲ್ಲಿ ಬರುವ ವಿಭಾಗಕ್ಕೂ ಅಂಕ ಎಂಬ ಹೆಸರಿರುವುದರಿಂದ ಅರ್ಥಸೌಲಭ್ಯಕ್ಕಾಗಿ 'ಉತ್ಸೃಷ್ಟಿಕಾಂಕ' ಎನ್ನಲಾಗುತ್ತದೆ. ಇಲ್ಲಿ ಕಥಾವಸ್ತುವು ಪ್ರಖ್ಯಾತವಾಗಿರುತ್ತದೆ. ಕರುಣರಸ ಪ್ರಧಾನವಾಗಿರುತ್ತದೆ. ಜನಸಾಮಾನ್ಯರು ನಾಯಕರಾಗಿರುತ್ತಾರೆ. ಸಂಧಿ, ವೃತ್ತಿ ಅಂಗಗಳು ಬಾಣದಂತೆಯೇ ಇರುತ್ತವೆ. ಅಂಕದಲ್ಲಿ ಸ್ತ್ರೀಯರು ದುಃಖದಿಂದ ಕೂಡಿರುತ್ತಾರೆ. ಉದಾ : ಶರ್ಮಿಷ್ಠಾಯಯಾತಿ.

ಈಹಾಮೃಗ : ಇಲ್ಲಿ ಕಥಾವಸ್ತುವು ಮಿಶ್ರವಾಗಿರುತ್ತದೆ. ನಾಲ್ಕು ಅಂಕಗಳಿಂದ

ಕೂಡಿರುತ್ತದೆ. ಮೂರು ಸಂಧಿಗಳನ್ನು ಯೋಜಿಸಲಾಗಿರುತ್ತದೆ. ದೇವತೆಗಳು–ಮಾನವರು, ನಾಯಕ–ಪ್ರತಿನಾಯಕರಾಗಿರುತ್ತಾರೆ. ಇಬ್ಬರೂ ಧೀರೋದ್ಧತರೂ ಆಗಿರುತ್ತಾರೆ. ಶೃಂಗಾರಾಭಾಸವೂ ಸ್ವಲ್ಪಮಟ್ಟಿಗೆ ಯೋಜಿತವಾಗಿರುತ್ತದೆ. ವಿಶೇಷವೆಂದರೆ ಜಿಂಕೆಯಂತೆ ಅಲಭ್ಯಳಾದ ನಾಯಿಕೆಗಾಗಿ ಇಚ್ಛಿಸುತ್ತಾನೆ ಎಂಬ ಕಾರಣದಿಂದ 'ಈಹಾಮೃತ' ಎನ್ನುವ ಹೆಸರು ಬಂದಿದೆ.

ಹೀಗೆ ದಶರೂಪಕದಲ್ಲಿ ವಸ್ತು, ನಾಯಕ, ರಸಾದಿ ಭೇದಗಳಿಗನುಗುಣವಾಗಿ ದಶರೂಪಕದ ಭೇದಗಳನ್ನು ಅವುಗಳ ಲಕ್ಷಣಗಳನ್ನು ಕುರಿತು ಚರ್ಚಿಸಲಾಯಿತು. ಈ ಎಲ್ಲಾ ಅಂಶಗಳು ಭರತನ ನಾಟ್ಯಶಾಸ್ತ್ರದಲ್ಲಿ ನಿರೂಪಿತವಾಗಿದ್ದರೂ, ಕೆಲವು ವಿಚಾರಗಳಲ್ಲಿ ಭರತನ ಸೂತ್ರ ಶೈಲಿಗಿಂತ ಧನಂಜಯನ ವಿವರಣಾತ್ಮಕ ಶೈಲಿ ಅರ್ಥಗ್ರಹಿಕೆಗೆ ಹೆಚ್ಚು ಸಹಕಾರಿಯೆನಿಸುತ್ತದೆ.

ಧನಂಜಯನ ತನ್ನ ಕೃತಿಯಾದ ದಶರೂಪಕದಲ್ಲಿ ಉಪರೂಪಕಗಳು ಹದಿನೆಂಟು ಎಂದು ಹೆಸರಿಸಿದ್ದಾನೆ. ಅವುಗಳ ವಿವರಣೆ ನೀಡಿಲ್ಲ. ಶಾಸ್ತ್ರಮರ್ಯಾದೆಗನುಗುಣವಾಗಿ ಸರಳವಾಗಿ, ಸಂಕ್ಷಿಪ್ತವಾಗಿ, ನೇರವಾಗಿ ಹೇಳಲಾಗಿದೆ, ಎಂಬುದನ್ನು ಸ್ವತಃ ಕೃತಿಕಾರನೇ ಹೇಳುತ್ತಾನೆ. "ಸಂಕ್ಷಿಪ್ತ್ಯ ಕ್ರಿಯತೇಂಜಸಾ" (ದ.ರೂ.೧.೫.) ಎಂಬ ತನ್ನ ಹೇಳಿಕೆಯನ್ನು ಅಕ್ಷರಶಃ ಪಾಲಿಸಿದ್ದಾನೆ.

"ಪ್ರಯೋಜನಮ್ ಅನುದ್ದಿಶ್ಯ ನ ಮಂದೋಪಿ ಪ್ರವರ್ತತೆ" ಪ್ರಯೋಜನದ ಉದ್ದೇಶವಿಲ್ಲದೆ ಯಾವ ಮಂದಮತಿಯೂ ಕಾರ್ಯಪ್ರವೃತ್ತನಾಗಲಾರನು. ಸಾಮಾನ್ಯರಿಗೆ ಈ ಸೂಕ್ತಿ ಅನ್ವಯಿಸುವಾಗ ದಶರೂಪಕದಂತಹ ಶಾಸ್ತ್ರಗ್ರಂಥ ವಿಚಾರದಲ್ಲಿ ಇನ್ನೂ ಹೆಚ್ಚು ಅರ್ಥಪೂರ್ಣವಾಗಿ ಅನ್ವಯಿಸುತ್ತದೆ.

ಈ ಕೃತಿಯ ಶೀರ್ಷಿಕೆಯು ಕೇವಲ ಹತ್ತು ರೂಪಕಗಳನ್ನಷ್ಟೇ ಚಿಂತಿಸಿರಬಹುದೆನ್ನುವ ಕಲ್ಪನೆಯನ್ನು ಕೊಡುತ್ತದೆ. ಆದರೆ ದೃಶ್ಯ ಸಾಹಿತ್ಯದಲ್ಲಿ ಬರುವ ಬಹುತೇಕ ಎಲ್ಲಾ ವಿಷಯಗಳ ನಿರೂಪಣೆಯನ್ನು ಇಲ್ಲಿ ನೋಡಬಹುದು.

ವಿಷ್ಣು ಸುತೇನಾಪಿ ಧನಂಜಯೇನ ವಿದ್ವನ್ಮನೋರಾಗ ನಿಬಂಧ ಹೇತುಃ ।

ಆವಿಷ್ಕೃತಂ ಮುಂಜಮಹಿಷ ಗೋಷ್ಠಿ ವೈದಗ್ಧಭಾಜಾ ದಶರೂಪಮೇತತ್। ।(ದ.ರೂ.೪.೯೧)

ಈ ಮೇಲಿನ ಕಾರಿಕೆಯನ್ನು ಆಧಾರವಾಗಿಟ್ಟುಕೊಂಡು ಈ ಗ್ರಂಥವನ್ನು ಮೊಟ್ಟಮೊದಲಿಗೆ ಸಂಪಾದಿಸಿ ಪ್ರಕಟಿಸಿದ " ಫಿಟ್ಸೆಡ್ ವರ್ಡ್ ಹಾಲ್" ಅವರು ಮತ್ತು ಆಂಗ್ಲ ಭಾಷಾ ಅನುವಾದದೊಡನೆ ಪ್ರಕಟಿಸಿದ "ಜಾರ್ಜ್ ಸಿ.ಓ. ಹ್ಯಾಸ್"ಅವರು ದಶರೂಪ ಎಂಬ 'ಕ' ಪ್ರತ್ಯಯ ರಹಿತವಾದ ಹೆಸರೇ ಸೂಕ್ತವೆಂದು ಊಹಿಸಿ "ದಶರೂಪ"ವೆಂದೇ ಕರೆದಿದ್ದಾರೆ.

ಭರತನ ನಾಟ್ಯಶಾಸ್ತ್ರದಲ್ಲಿಯೂ ಸಹ ಇದಕ್ಕೆ ಸಂಬಂಧಪಟ್ಟ ಅಧ್ಯಾಯದಲ್ಲಿ 'ದಶರೂಪ'ವೆಂಬ ಹೆಸರೇ ಬಂದಿದೆ. ಆದರೆ ರಾಜವೈದ್ಯ ಜಿ.ಕೆ ಶಾಸ್ತ್ರಿ ಅವರ ಆಂಗ್ಲಾನುವಾದದ ಗ್ರಂಥದಲ್ಲಿ ಮತ್ತು ನಿರ್ಣಯಸಾಗರ ಮುದ್ರಣದ ಚೌಕಾಂಭ ವಿದ್ಯಾಭವನದ ಹಿಂದೀ ಅನುವಾದದಲ್ಲಿ 'ದಶರೂಪಕ'ವೆಂದೇ ಪ್ರಕಟಿಸಲಾಗಿದೆ. 'ರೂಪಕಂ ತತ್ಸಮಾರೋಪಾತ್' ಎಂಬ ಕಾರಿಕಾ ಖಂಡವನ್ನು ಗಮನಿಸಿದರೆ ರೂಪ ಎಂಬ ಪದಕ್ಕಿಂತ 'ರೂಪಕ' ಎಂಬ ಪದವೇ ಸೂಕ್ತವೆನ್ನಬಹುದು.

ದಶರೂಪಕ ನಾಟ್ಯ ವಿಷಯಕ ಶಾಸ್ತ್ರೀಯ ಗ್ರಂಥದಲ್ಲಿ ಪ್ರಮುಖವಾದುದೆಂದು ಪರಿಗಣಿಸಲ್ಪಟ್ಟಿದೆ. ದಶರೂಪಕಗಳನ್ನು ಕುರಿತಾದ ವಿವೇಚನೆ ಗ್ರಂಥದ ಮೂರನೇ ಪ್ರಕಾಶದಲ್ಲಿ ಕಂಡುಬರುತ್ತದೆ. ಮೊದಲನೆಯ ಪ್ರಕಾಶದಲ್ಲಿ ರೂಪಕ ಸಾಮಗ್ರಿಗಳನ್ನು ಕುರಿತಾದ ಸಮಗ್ರ ವಿವರಣೆಯಿದೆ. ಎರಡನೆಯ ಪ್ರಕಾಶದಲ್ಲಿ ನಾಯಕ–ನಾಯಕಿಯರ ಭೇದಗಳಿವೆ. ನಾಲ್ಕನೇ ಪ್ರಕಾಶದಲ್ಲಿ ರಸವಿವರಣೆ ವಿಸ್ತೃತವಾಗಿದೆ. ಇಷ್ಟೆಲ್ಲ ನಿರೂಪಣೆಯಿದ್ದರೂ ಸಹ 'ದಶರೂಪಕ' ಎಂದು ಹೆಸರಿರುವುದರ ಔಚಿತ್ಯವೇನೆಂದರೆ ಮೇಲೆ ಹೇಳಿದ ಎಲ್ಲಾ ವಿಷಯಗಳೂ ಸಹ ರೂಪಕಗಳ ವಿವರಣೆಗೆ ಅಧೀನವಾಗಿರುವುವು. ಅಂದರೆ ರೂಪಕ ಭಿನ್ನ ವಿಷಯಗಳ ನಿರೂಪಣೆಗೆ ಪ್ರಧಾನವಾದ ರೂಪಕಗಳ ಸಮರ್ಥ ಚಿತ್ರಣಕ್ಕಾಗಿ ಅಂಗಗಳಾಗಿ ಬಳಕೆಯಾಗಿವೆ. ಧನಂಜಯನ ಮೂಲ ಉದ್ದೇಶ ರೂಪಕದ ಹತ್ತು ಪ್ರಕಾರಗಳನ್ನು ಸ್ಪಷ್ಟವಾಗಿ ತಿಳಿಸುವುದೇ ಆಗಿದೆ.

ಹೀಗಾಗಿ ತನ್ನ ನಿರ್ದಿಷ್ಟ ಆಶಯಕ್ಕನುಗುಣವಾಗಿ ಇನ್ನಿತರ ವಿಚಾರಗಳ ಚರ್ಚೆಯಿದ್ದರೂ ತನ್ನ ಕೃತಿಯನ್ನು 'ದಶರೂಪಕ' ಎಂಬ ಹೆಸರಿನಿಂದ ಸಂಸ್ಕೃತ ಸಾರಸ್ವತ ಲೋಕಕ್ಕೆ ಕೊಡುಗೆಯಾಗಿ ನೀಡಿದ್ದಾನೆ.

ಸಂಸ್ಕೃತ ಸಾಹಿತ್ಯ ಪ್ರಪಂಚದಲ್ಲಿ ದೃಶ್ಯ ಸಾಹಿತ್ಯಕ್ಕಿರುವ ಪ್ರಾಮುಖ್ಯತೆ ಉಳಿದ ಸಾಹಿತ್ಯ ಪ್ರಕಾರಗಳಿಗೆ ಇಲ್ಲವೆಂದೇ ಹೇಳಬಹುದು. ಆದುದರಿಂದಲೇ "ಕಾವ್ಯೇಷು ನಾಟಕಂ ರಮ್ಯಮ್" ಎಂಬುದು ಪ್ರಸಿದ್ಧಿಯಾಗಿದೆ.

ದಶರೂಪಕ ಜ್ಞಾನದ ಫಲವೇ ಈ ಗ್ರಂಥದ ಫಲ. ಧನಂಜಯನು ಅಂತಹ ದಶರೂಪಕಗಳ ಫಲವನ್ನು ಹೇಳುವಾಗ ಇತಿಹಾಸಾದಿಗಳ ಹಾಗೆ ಧರ್ಮಾರ್ಥಕಾಮಗಳ ಜ್ಞಾನ ಮಾತ್ರವಲ್ಲ ಸ್ವಸಂವೇದ್ಯವಾದ ಪರಮಾನಂದರೂಪವಾದ ರಸಾನುಭೂತಿ–"ಸಕಲ ಪ್ರಯೋಜನ ಮೌಲಿಭೂತಮ್ ಸಮನಂತರಮೇವ ರಸಾಸ್ವಾದನ ಸಮುದ್ಭೂತಮ್ ವೇದ್ಯಂತರಮ್ ಆನಂದಮ್" ಎಂಬುದಾಗಿ ಅಭಿನವಗುಪ್ತನು ಕಾವ್ಯದ ಪ್ರಯೋಜನವನ್ನು ಹೇಳುವಾಗ ಕಾವ್ಯಾನುಭೂತಿಯ ಮಹತ್ವವನ್ನು ಹೇಳುತ್ತಾನೆ. ಎಲ್ಲಾ ಪ್ರಯೋಜನಗಳಿಗಿಂತಲೂ ಮಿಗಿಲಾದ ರಸವನ್ನು ಆಸ್ವಾದಿಸುವ ವೇಳೆಯಲ್ಲಿ ಎಲ್ಲಾ ಲೌಕಿಕ ವ್ಯಾಪಾರಗಳಿಂದ ಬಿಡುಗಡೆಗೊಳಿಸಿ ಆನಂದವೊಂದನ್ನೇ ನೀಡುತ್ತದೆ ಎನ್ನುವುದು ಇಲ್ಲಿಯ ಭಾವ.

ಇಂತಹ ರಸದ ಅನುಭೂತಿಯು ಹೆಚ್ಚು ಪರಿಣಾಮಕಾರಿಯಾಗಿ ದೊರೆಯುವುದು ರೂಪಕ ಸಾಹಿತ್ಯದಲ್ಲಿ. ಹಾಗೆಂದೇ 'ನಾಟಕಾಂತಮ್ ಸಾಹಿತ್ಯಮ್' ಎಂಬುದು ಪ್ರಸಿದ್ಧಿಯಾಗಿದೆ.

ಪ್ರಸ್ತುತ ಧನಂಜಯನ ದಶರೂಪಕವು ದೃಶ್ಯಸಾಹಿತ್ಯದ ಮಹತ್ವವನ್ನು ಎತ್ತಿ ಹಿಡಿಯುತ್ತದೆ. ಈ ಹಿನ್ನೆಲೆಯಲ್ಲಿ ದಶರೂಪಕ ಅಧ್ಯಯನವು ಅತ್ಯವಶ್ಯವೆಂದೇ ಹೇಳಬೇಕು. ಮುಂದೆ ಬರುವ ಆಲಂಕಾರಿಕರಿಗೆ ವಿಶೇಷವಾಗಿ ನಾಟಕ ಕರ್ತೃಗಳಿಗೆ ಧನಂಜಯ ಮಾರ್ಗದರ್ಶಕನಾಗಿದ್ದಾನೆ. ಈ ಎಲ್ಲಾ ಕಾರಣಗಳಿಂದ ಧನಂಜಯನ ದಶರೂಪಕದ ಕಿರುಪರಿಚಯ ಈ ಲೇಖನದ ಉದ್ದೇಶವಾಗಿದೆ.

■

ಕರ್ನಾಟಕ ಲೋಚನ
ಸಂಪುಟ ೨೬, ಸಂಚಿಕೆ ೧-೨
ಜನವರಿ-ಡಿಸೆಂಬರ್

೭. ಕರ್ನಾಟಕ ಕವಿರತ್ನ ಹೊಸಕೆರೆ ಚಿದಂಬರಯ್ಯ-ಗ್ರಂಥ ಪರಿಚಯ

-ಪ್ರೊ॥ ಎಸ್. ಬೆಳಗಿರಿವಾಸನ್

ಇತ್ತೀಚೆಗೆ ಉಲುಚುಕಮ್ಮೆ ಬ್ರಾಹ್ಮಣ ಮಹಾಸಭಾದಿಂದ ಪ್ರಕಟವಾದ, ಪ್ರೊ॥ ಜಿ. ಅಶ್ವತ್ಥನಾರಾಯಣ ಅವರಿಂದ ರಚಿತವಾದ "ಕರ್ನಾಟಕ ಕವಿರತ್ನ ಹೊಸಕೆರೆ ಚಿದಂಬರಯ್ಯ" ಎಂಬ ಕೃತಿಯನ್ನು ಅವಲೋಕಿಸಿದಾಗ ಸಾಹಿತ್ಯದ ವಿದ್ಯಾರ್ಥಿಯಾದ ನನಗೆ ಸಖೇದಾಶ್ಚರ್ಯವಾಯಿತು. ಕವಿಗಳು ಸುಮಾರು ೮೦ ಗ್ರಂಥಗಳನ್ನು ರಚಿಸಿದ್ದು, ಅವುಗಳಲ್ಲಿ ೫೦ ಗ್ರಂಥಗಳು ಮಾತ್ರ ಲಭ್ಯವಿದ್ದು, ಉಳಿದ ಕೃತಿಗಳು ಕಾಲಗರ್ಭದಲ್ಲಿ ಲೀನವಾಗಿರುವುದಾಗಿ ತಿಳಿದುಬರುತ್ತದೆ. ಮೂರು ಕಾದಂಬರಿಗಳು ಏಳು ಶಿಕ್ಷಣ ಗ್ರಂಥಗಳು, ಮೂರು ಕಾವ್ಯಗಳು, ಹದಿನೈದು ಧಾರ್ಮಿಕ ಗ್ರಂಥಗಳು, ಆರು ಗೀತಾ ಸಾಹಿತ್ಯ, ಏಳು ಜೀವನ ಚರಿತ್ರೆ, ಹತ್ತು ಕೀರ್ತನ ಸಾಹಿತ್ಯ, ಎಂಟು ನಾಟಕಗಳು, ಹನ್ನೊಂದು ಸ್ತೋತ್ರ ಸಾಹಿತ್ಯ, ಐದು ನೀತಿಗ್ರಂಥಗಳು ಸೇರಿ ೭೫ ಗ್ರಂಥಗಳು ರಚಿತವಾಗಿದ್ದರೂ ಕನ್ನಡ ಸಾರಸ್ವತ ಲೋಕವು ಇಂತಹ ಕವಿಯನ್ನು ಕಡೆಗಣಿಸಿದ್ದಾದರೂ ಏಕೆ ? ಎಂಬ ಪ್ರಶ್ನೆ ಉದ್ಭವಿಸುವುದು ಸಹಜ. "ಕನ್ನಡನಾಡಿನಲ್ಲಿ ಹೊಸಗನ್ನಡ ಗದ್ಯವನ್ನು ಶ್ರೀಮಂತಗೊಳಿಸಿರುವ ಅಗ್ರಗಣ್ಯರಲ್ಲಿ ಹೊಸಕೆರೆ ಚಿದಂಬರಯ್ಯನವರು ಒಬ್ಬರಾದರೂ ಅವರನ್ನು ನಾಡಿನ ಸಾಹಿತಿಗಳು, ವಿದ್ವಾಂಸರು ಲಕ್ಷಿಸದೆ ಇರುವುದು ವಿಷಾದದ ಸಂಗತಿ". "ಅವರ ಜೀವನ ಭವ್ಯ, ಸಾಧನೆಗಣ್ಯ. ಸಾಹಿತ್ಯ ಸೇವೆ ವಿಶಿಷ್ಟ ಆಗಿದೆ," ಎಂಬ ಲೇಖಕರ ಮಾತುಗಳು ಗಮನಾರ್ಹವಾದುದು.

ಇಂತಹ ಮಹಾನ್ ಕವಿಯನ್ನು "ಕರ್ನಾಟಕ ಕವಿಚರಿತೆ" ರಚಿಸಿದ ಕವಿಗಳ ಸಮಕಾಲೀನರಾದ ರಾ. ನರಸಿಂಹಾಚಾರ್ಯರು ಕವಿಚರಿತೆಯ ೩ನೆ ಭಾಗದಲ್ಲಿ ೧೭೦೦ ರಿಂದ ೧೯೦೦ರ ವರೆಗಿನ ಕವಿಗಳ ಬಗ್ಗೆ ಬರೆಯುತ್ತಾ ೧೯ನೇ ಶತಮಾನದ ಉತ್ತರಾರ್ಧದಲ್ಲಿ ಮತ್ತು ೨೦ನೇ ಶತಮಾನದ ಪೂರ್ವಾರ್ಧದಲ್ಲಿ ಜೀವಿಸಿದ್ದವರ ಬಗ್ಗೆ "ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಇನ್ನೂ ಅನೇಕರು ಗ್ರಂಥ ರಚನೆ ಮಾಡಿದ್ದಾರೆ. ಆದರೆ ಇವರ ಚರಿತವನ್ನೆಲ್ಲಾ ವಿವರವಾಗಿ ಬರೆಯಲು ಸಾಧ್ಯವಿಲ್ಲ. ಇದಲ್ಲದೆ ಇವರುಗಳಲ್ಲಿ ನಿಜವಾಗಿಯೂ ಕವಿಗಳು ಎಂದು

ಹೇಳಿಸಿಕೊಳ್ಳುವುದಕ್ಕೆ ಕೆಲವರೇ ಯೋಗ್ಯರಾಗಿರುತ್ತಾರೆ...." ಇದರೊಂದಿಗೆ ವಿಶೇಷವಾದ ಮತ್ತೊಂದು ಮಾತು ಹೀಗಿದೆ : "ಜೀವಂತರಾದ ಗ್ರಂಥಕರ್ತರ ಹೆಸರನ್ನು ನಾವು ಎತ್ತುವುದಿಲ್ಲ" ಎಂಬ ಮಾನದಂಡವನ್ನು ಅನುಸರಿಸಿದ್ದರಿಂದ ಕವಿಚರಿತೆಕಾರರು ಹೊಸಕೆರೆ ಚಿದಂಬರಯ್ಯನವರನ್ನು ಪರಿಗಣಿಸಲಿಲ್ಲ ಎಂಬ ಮಾಹಿತಿಯನ್ನು ಲೇಖಕರು ನೀಡುತ್ತಾರೆ.

ಡಾ॥ ಶ್ರೀನಿವಾಸ ಹಾವನೂರ ಅವರ ಅಮೂಲ್ಯ ಕೃತಿ 'ಹೊಸಗನ್ನಡ ಅರುಣೋದಯ'ದಲ್ಲಿ ೧೯ನೇ ಶತಮಾನದ ಅಚ್ಚಿನ ಸಾಹಿತ್ಯವನ್ನು ಮಾತ್ರ ದೃಷ್ಟಿಯಲ್ಲಿಟ್ಟುಕೊಂಡು ಹೀಗೆನ್ನುತ್ತಾರೆ : ಯಾವುದಾರೊಂದು ಕೃತಿ ಇಲ್ಲವೇ ಲೇಖಕನ ವಿಚಾರ ಈ ಗ್ರಂಥದಲ್ಲಿ ಬಂದಿಲ್ಲವೆಂದು ಯಾರಿಗಾದರೂ ಅನಿಸಿದರೆ ಅದು ೧೯೦೦ಕ್ಕೆ ಮುಂಚಿನ ಅವಧಿಯದಿರಲಿಕ್ಕಿಲ್ಲ ಎಂಬ ಅಂಶವನ್ನು ಗಮನಿಸಬೇಕಾಗಿ ಭಿನ್ನಹ" ಎಂಬುದಕ್ಕೆ ಪ್ರತಿಯಾಗಿ ಲೇಖಕರು, ಕವಿಗಳು ೧೮೭೦ರಲ್ಲಿ ಜನಿಸಿದ್ದು ೩೦ನೆಯ ವಯಸ್ಸಿನೊಳಗೆ ಸಾಕಷ್ಟು ಕವಿತೆ ಲೇಖನಗಳನ್ನು ಬರೆದಿದ್ದರು. ನಿದರ್ಶಕ್ಕೆ "ಕನ್ನಡ ಸುಶೀಲಾ ಪರಿಣಯ" ನಾಟಕ ೧೯೮೯ರ ಜೂನ್‌ನಲ್ಲಿ ಪ್ರಕಟವಾಗಿದ್ದರೂ "ಹಾವನೂರರ ಕಣ್ಣಿಗೆ ಬಿದ್ದಿಲ್ಲ" ಎಂಬುದನ್ನು ತೋರಿಸಿ ಕೊಟ್ಟು, ಹಾವನೂರರಿಂದಲೂ ಕವಿಗಳು ಉಪೇಕ್ಷೆಗೆ ಒಳಗಾದರು ಎಂಬುದನ್ನು ತಿಳಿಸಿದ್ದಾರೆ. ಅನಂತರದ ಸಮಗ್ರಾವಲೋಕನದ ಕೃತಿಗಳಲ್ಲಾಗಲೀ, ಹೊಸಗನ್ನಡ ಸಾಹಿತಿಗಳ ಸಂಚಯದ 'ಹೊಂಬಿದಿರು' ಬೃಹತ್ ಗ್ರಂಥದಲ್ಲಾಗಲೀ, ಕರ್ನಾಟಕ ಸಾಹಿತ್ಯ ಅಕಾಡೆಮಿಯ 'ಸಾಲುದೀಪಗಳು' ಕೃತಿಯಲ್ಲಾಗಲೀ, ಬೆಂಗಳೂರು ವಿಶ್ವವಿದ್ಯಾನಿಲಯದ 'ಸಮಗ್ರ ಸಾಹಿತ್ಯ ಚರಿತ್ರೆ' (ಸಂ.೬)ಯಲ್ಲಾಗಲೀ, ರಂ.ಶ್ರೀ. ಮುಗಳಿ ಹಾಗೂ ತ. ಸು. ಶಾಮರಾಯರ 'ಸಾಹಿತ್ಯ ಚರಿತ್ರೆ' ಕೃತಿಗಳಲ್ಲಿ ಹೊಸಕೆರೆ ಚಿದಂಬರಯ್ಯನವರ ಪ್ರಸ್ತಾಪವಿಲ್ಲ. ಡಿ.ವಿ.ಜಿ.ಯವರು ತಮ್ಮ 'ಜ್ಞಾಪಕ ಚಿತ್ರಶಾಲೆ'ಯಲ್ಲೂ ನೆನಪಿಸಿಕೊಂಡಿಲ್ಲವಾದರೂ ಅವರಿಗೆ ಚಿದಂಬರಯ್ಯನವರ ಪರಿಚಯವಿತ್ತಾದರೂ ರಾ. ನರಸಿಂಹಾಚಾರ್ಯರ ಪಥದಲ್ಲೇ ಸಾಗಿದ್ದಾರೆ ಎಂಬುದನ್ನು ಕಂಡಾಗ ಸಮಕಾಲೀನರಿಂದಲೇ ಉಪೇಕ್ಷೆಗೆ ಒಳಗಾದದ್ದು ವಿಪರ್ಯಾಸ. ಹೀಗೆ ನಾಡಿನ ಪ್ರತಿಷ್ಠಿತ ವಿದ್ವಾಂಸರಿಂದಲೇ ಉಪೇಕ್ಷೆಗೊಳಗಾದ ಕವಿಗಳ ಬಗ್ಗೆ ಅಲ್ಲಲ್ಲಿ ಕೆಲವು ಮಾಹಿತಿಗಳು ದೊರೆಯುತ್ತವೆ."ಕರ್ನಾಟಕ ವಿಷಯ ಕೋಶ"ದಲ್ಲಿ ಚಿದಂಬರಯ್ಯನವರನ್ನು ಕುರಿತ ಸಚಿತ್ರ ಲೇಖವಿದೆ. ವೆಂಕಟೇಶ ಸಾಂಗ್ಲಿ ಅವರ "ಸಿರಿಗನ್ನಡ ಗ್ರಂಥಕರ್ತರ ಚರಿತ್ರಕೋಶ ಭಾಗ-೧"ರಲ್ಲಿ ಲೇಖಕರ ಅತಿ ಕಿರುಪರಿಚಯದೊಂದಿಗೆ ೪೦ ಕೃತಿಗಳ ಮಾಹಿತಿಯಿದೆ. ಮೈಸೂರು ವಿಶ್ವವಿದ್ಯಾಲಯ "ಕನ್ನಡ ಸೂಚಿ"ಯಲ್ಲಿ ಚಿದಂಬರಯ್ಯನವರ ಸುಮಾರು ಗ್ರಂಥಗಳ ಮಾಹಿತಿಯಿದೆ. ಡಿ. ಕೆ. ಭಾರದ್ವಾಜರ ಲೇಖನವೊಂದು ೧೯೩೯ರ ನವೆಂಬರ್ ೧೭ರ 'ಕನ್ನಡನುಡಿ'ಯಲ್ಲಿ ಮೊದಲಬಾರಿಗೆ ಪ್ರಕಟವಾಗಿದೆ. ಅದೆಲ್ಲಕ್ಕಿಂತಲೂ ಹೆಚ್ಚಾಗಿ ಚಿದಂಬರಯ್ಯನವರ ಒಡನಾಡಿಗಳಾದ ವೈ ಸುಬ್ಬರಾಯರ ಆತ್ಮಕಥೆಯಲ್ಲಿ

ಚಿದಂಬರಯ್ಯನವರ ಬಗೆಗೆ ಅಮೂಲ್ಯವಾದ ಮಾಹಿತಿಗಳನ್ನು ನೀಡಿರುವುದಾಗಿ ಕೃತಿಕಾರರು ತಿಳಿಸುತ್ತಾರೆ. ಹೀಗೆ ಉಪೇಕ್ಷೆಗೊಳಗಾದ ಕವಿಯ ಬಗೆಗೆ ಅಪೇಕ್ಷೆಯಿಂದ ನೀಡಿದ ಮಾಹಿತಿಗಳಿದ್ದರೂ, ಸಾಪೇಕ್ಷವಾಗಿ ಪ್ರತ್ಯಕ್ಷವಾಗದಿದ್ದು ಅಕ್ಷಮ್ಯವಾದುದು ಎನ್ನಬಹುದು.

ಕವಿಯ ಕಿರುಪರಿಚಯ

ಶ್ರೀ ಶೇಷಗಿರಿಯಪ್ಪ-ಪುಟ್ಟನರಸಮ್ಮ ದಂಪತಿಗಳಿಗೆ ಗುಬ್ಬಿ ತಾಲ್ಲೂಕಿನ ಹೊಸಕೆರೆಯಲ್ಲಿ ೨೮-೧೨-೧೮೭೦ರ ಪ್ರಮೋದ ಸಂವತ್ಸರದ ಪುಷ್ಯಮಾಸ ಶುಕ್ಲಪಕ್ಷ ಷಷ್ಠಿ ಮಂಗಳವಾರದಂದು ಚಿದಂಬರಯ್ಯನವರು ಹಿರಿಯ ಮಗನಾಗಿ ಜನಿಸಿದರು. ಇವರಿಗೆ ನಾರಾಯಣರಾವ್, ಶ್ರೀನಿವಾಸರಾವ್ ಎಂಬ ಸಹೋದರರೂ, ತಿಪ್ಪಮ್ಮ, ನರಸಮ್ಮ ಎಂಬ ಸಹೋದರಿಯರು ಇದ್ದರು. ಇವರಿಗೆ ಲಕ್ಷ್ಮೀದೇವಮ್ಮ ಎಂಬುವರೊಡನೆ ವಿವಾಹವಾಗಿ ವೆಂಕಟರಮಣಯ್ಯ, ಶ್ರೀನಿವಾಸಮೂರ್ತಿ, ಅನಂತಮೂರ್ತಿ ಶಾಸ್ತ್ರಿಗಳೆಂಬ ಪುತ್ರರೂ ನರಸಮ್ಮ ಎಂಬ ಪುತ್ರಿಯೂ ಜನಿಸಿದರು.

ಕವಿಗಳು ಪ್ರತಿನಿತ್ಯ ಮುಂಜಾನೆ ೫ ಗಂಟೆಗೆ ಎದ್ದು, ಸ್ನಾನ ಸಂಧ್ಯಾವಂದನಾದಿಗಳ ನಂತರ ಜಪತಪ ಧ್ಯಾನ ಮಾಡುತ್ತಿದ್ದು, ಧ್ಯಾನದಲ್ಲಿದ್ದಾಗ ಅವರು ನೆಲದಿಂದ ಸುಮಾರು ಎರಡು ಅಡಿ ಎತ್ತರಕ್ಕೆ ಮೇಲಕ್ಕೆ ಧ್ಯಾನಭಂಗಿಯಲ್ಲೇ ಏಳುತ್ತಿದ್ದರೆಂದು ಅವರ ಸೊಸೆ ಗುಂಡಮ್ಮನವರು ತಿಳಿಸಿದ್ದಾರೆ. ಆದರೆ ಈ ವಿಚಾರ ಕವಿಗಳಿಗೆ ತಿಳಿದಿರಲಿಲ್ಲವೆನ್ನುತ್ತಾರೆ. ಪ್ರತಿನಿತ್ಯ ಮನೆಯಲ್ಲಿ ಮಧ್ಯಾಹ್ನ ೩ ರಿಂದ ೫ ಗಂಟೆಯವರೆಗೆ ರಾಮಾಯಣ, ಗೀತೆ, ಜೈಮಿನಿ ಭಾರತ, ಪುರಾಣ ಪ್ರವಚನ ನೀಡುತ್ತಿದ್ದರು. ಮನೆಯಲ್ಲಿ ವ್ಯಾಸಂಗ, ಪ್ರವಚನಾದಿಗಳು ನಡೆಯುವಾಗ ಪ್ರಶಾಂತ ವಾತಾವರಣವನ್ನು ಬಯಸುತ್ತಿದ್ದರು. ಮಧ್ಯಾಹ್ನ ೧೧-೩೦ಕ್ಕೆ ಭೋಜನವನ್ನು ಸ್ವೀಕರಿಸುತ್ತಿದ್ದರು. ೧೯೧೦೬ ರಲ್ಲಿ ಅವರಿಗೆ ಪತ್ನೀ ವಿಯೋಗವಾದಾಗಿನಿಂದ ಒಪ್ಪತ್ತು ಊಟ ಮಾಡುತ್ತಿದ್ದರು. ಕಾರಣ ಕೇಳಿದಾಗ "ಗಂಡ ಸತ್ತರೆ ಹೇಗೆ ಹೆಂಡತಿಗೆ ಒಪ್ಪತ್ತು ಊಟವೋ ಹಾಗೆ ಹೆಂಡತಿ ಸತ್ತರೆ ಗಂಡನಿಗೂ ಒಪ್ಪತ್ತು ಊಟ" ಎಂಬ ಪತ್ನಿ ನಿಷ್ಠೆಯನ್ನು ವ್ಯಕ್ತಪಡಿಸಿದರು. ಪ್ರತಿ ಶನಿವಾರ ರಾತ್ರಿ ಭಜನೆ, ಬ್ರಹ್ಮಚೈತನ್ಯರ ಜಯಂತಿಯಲ್ಲಿ ಮೂರು ದಿನಗಳ ಅಖಂಡ ಭಜನೆ ಮಾಡುತ್ತಿದ್ದು, ದಾಸನವಮಿ, ಸಮರ್ಥ ರಾಮದಾಸರ ಪುಣ್ಯತಿಥಿ, ಶಂಕರ ಜಯಂತಿಯನ್ನು ಮನೆಯಲ್ಲಿ ವಿಶೇಷವಾಗಿ ಆಚರಿಸುತ್ತಿದ್ದರು. ಶ್ರೀಚಕ್ರಾರಾಧನೆ, ಕುಂಕುಮಾರ್ಚನೆಗಳನ್ನು ನಡೆಸುತ್ತಿದ್ದು ಗುರುಪೂರ್ಣಿಮೆ, ಬ್ರಹ್ಮಚೈತನ್ಯದ ಆರಾಧನೆ, ಸಮರ್ಥ ರಾಮದಾಸರ ಆರಾಧನಾದಿಗಳು, ವಿಶೇಷ ಸಂದರ್ಭಗಳಲ್ಲಿ ಅಭಿಷೇಕ, ಭಜನೆಗಳು ನಡೆಯುತ್ತಿದ್ದು, ಏಕಾದಶಿ ಉಪವಾಸವು ನಿಯಮಿತವಾಗಿರುತ್ತಿತ್ತು.

ಇವರು ಹುಟ್ಟು ಕವಿಗಳಾದ್ದರಿಂದ ಬಾಲ್ಯದಲ್ಲಿಯೇ ಅಧ್ಯಯನದಲ್ಲಿ ಆಸಕ್ತರಾಗಿ ಅನೇಕ ಪದ ಪದ್ಯಗಳನ್ನು ರಚಿಸಿದ್ದು, ಮೈಸೂರು ಅಪ್ಪರ್ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಕೌಟುಂಬಿಕ ಕಾರಣಗಳಿಂದ ಕಡೂರಿನಲ್ಲಿ

ಉಪಾಧ್ಯಾಯರಾದರು. ಸ್ವಪ್ರಯತ್ನದಿಂದ ಕನ್ನಡ, ಸಂಸ್ಕೃತ, ಮರಾಠಿ ಭಾಷೆಗಳಲ್ಲಿ ಪಾಂಡಿತ್ಯವನ್ನೂ, ಇಂಗ್ಲಿಷ್ ಭಾಷೆಯ ಪರಿಚಯವನ್ನೂ ಹೊಂದಿದರು. ಪಂಡಿತ ತಾರಾನಾಥರಿಂದ ಪ್ರಭಾವಿತರಾಗಿದ್ದು, " ಈತ ಸಾಮಾನ್ಯ ಮನುಷ್ಯನಲ್ಲ, ಮಹರ್ಷಿ" ಎಂದಿದ್ದರು. ಹಾಗೆಯೇ ತಾರಾನಾಥರು ಸಹಾ "ಕರ್ನಾಟಕದಲ್ಲಿ ನಾನು ಕಂಡ ಪವಿತ್ರ ಜೀವಿಗಳಲ್ಲಿ ಇವರೊಬ್ಬರು" ಎಂದು ಚಿದಂಬರಯ್ಯನವರನ್ನು ಹೊಗಳಿರುವುದು ಕಂಡುಬರುತ್ತದೆ. ದೇಶಾಭಿಮಾನ, ಗೀತಾಭಿಮಾನ ಮೂಡಲು ತಾರಾನಾಥರು ಪ್ರೇರಕ ಶಕ್ತಿ ಆಗಿದ್ದರು. ಬಾಲ್ಯದಿಂದಲೂ ಜ್ಞಾನದಾಹಿಗಳಾಗಿದ್ದ ಇವರಿಗೆ , ಅಧ್ಯಾಪಕರಾದ ನಂತರ ಅಧ್ಯಯನ ಅಗಾಧವಾಗಿ ಆಜೀವಪರ್ಯಂತ ಅಧ್ಯಯನ, ಗ್ರಂಥರಚನೆಯಲ್ಲಿ ತೊಡಗಿದ್ದರು. ಅವರ ಜ್ಞಾನದಾಹ ಅನುಕರಣೀಯವಾಗಿದ್ದು, ಅವರ ಅಧ್ಯಯನ ಕ್ಷೇತ್ರ, ಧಾರ್ಮಿಕಾಸಕ್ತಿ ವಿಶೇಷವಾಗಿ ಅದ್ವೈತ ಸಿದ್ಧಾಂತವಾಗಿದ್ದರೂ, ಎಲ್ಲಾ ಧಾರ್ಮಿಕ ಗ್ರಂಥಗಳನ್ನು ಅಧ್ಯಯನ ಮಾಡಿದ್ದವರು. ಅವರ "ಕೀರ್ತನ ಕಂಠಾಭರಣ" ಕೃತಿಯ ಮುನ್ನಡಿಯಲ್ಲಿ ಈ ಗ್ರಂಥವು ಕೇವಲ ಕೀರ್ತನಕಾರರು ಮಾತ್ರ ಹಿಡಿಯತಕ್ಕದ್ದೆಂದು ತಿಳಿಯಬಾರದೆಂದೂ, ಮನೋರಂಜಕವಾದ ಈ ರಚನಾ ವಿಶೇಷದ ಸವಿಯನ್ನು ಕನ್ನಡಿಗರೆಲ್ಲರೂ ಓದಬೇಕೆಂದೂ, ಅನೇಕ ಗ್ರಂಥಗಳನ್ನು ಒಂದೇ ಕಡೆ ಉಪಯೋಗಿಸುತ್ತ ಕರ್ನಾಟ ಭಾಷಾ ಪ್ರಪಂಚಕ್ಕೇ ಒಂದು ಬಗೆಯ ಸಾಹಿತ್ಯವಾಗಿದ್ದು ಇದೊಂದನ್ನು ಓದಿದರೆ ಕನ್ನಡ ವಾಙ್ಮಯವನ್ನೆಲ್ಲಾ ಓದಿದಂತಾಗಿ ಹೃದಯವು ಅರಳುವುದು ಎಂದಿದ್ದಾರೆ.

ಕಡೂರಿನಲ್ಲಿ ಉಪಾಧ್ಯಾಯ ವೃತ್ತಿಯಲ್ಲಿ ಆದರ್ಶ ಶಿಕ್ಷಕರೆಂದು ಪ್ರಖ್ಯಾತರಾಗಿ, ದಾವಣಗೆರೆಯಲ್ಲಿ ಹೆಡ್ಮಾಸ್ಟರ್ ಆಗಿ ನಿವೃತ್ತರಾದರು. ಕಾಲಟಿಯಲ್ಲಿ ಶ್ರೀ ಶ್ರೀಗಳಿಂದ ಶಿವಪಂಚಾಕ್ಷರಿ ಮಂತ್ರವನ್ನು ಪಡೆದು 'ಭಾಷ್ಯಶಾಂತಿ' ಮಾಡಿಸಿಕೊಂಡ ನಂತರ ಭಾಷ್ಯಪಾಠ ಮುಂದುವರೆಸಲು ಹಾನಗಲ್ ವಿರೂಪಾಕ್ಷ ಶಾಸ್ತ್ರಿಗಳನ್ನು ಗುರುಗಳು ನೇಮಿಸಿಕೊಟ್ಟರು. ಕಾಲಟಿಯಲ್ಲಿ ಭಾಷ್ಯಶಾಂತಿ ಆದನಂತರ ಚಿದಂಬರಯ್ಯನವರಿಗೆ ಮಹಾಭಾಗವತರು ಜಗದ್ಗುರುಗಳ ಅನುಮತಿಯೊಂದಿಗೆ ನಡೆದ ಬ್ರಾಹ್ಮಣ ಪಂಡಿತರ ಸಭೆಯಲ್ಲಿ ಶ್ರೀ ವಿರೂಪಾಕ್ಷ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ, ವೇ॥ಬ್ರ॥ಶ್ರೀಗಳಾದ ಬೆಟಗೇರಿ ಕೃಷ್ಣಶಾಸ್ತ್ರಿಗಳು, ಅಪ್ಪಾಸಾಹೇಬ, ದೊಡ್ಡಬೆಲೆ ನಾರಾಯಣಶಾಸ್ತ್ರಿಗಳಂತಹ ವಿದ್ವಾಂಸರ ಸಮ್ಮುಖದಲ್ಲಿ 'ಕರ್ನಾಟಕ ಕವಿರತ್ನ' ಎಂಬ ಬಿರುದನ್ನು ನೀಡಲಾಯಿತು. ಈ ಬಿರುದು ಕವಿಗಳಿಗೆ ಅತ್ಯಂತ ಪ್ರಿಯವಾದುದರಿಂದ ಅನಂತರದ ತಮ್ಮೆಲ್ಲ ಗ್ರಂಥಗಳಲ್ಲಿ 'ಕರ್ಣಾಟಕ ಕವಿರತ್ನ ಹೊಸಕೆರೆ ಚಿದಂಬರಯ್ಯ' ಎಂದು ಹೆಸರನ್ನು ನಮೂದಿಸುತ್ತಿದ್ದರು. ಇಂತಹ ಮಹಾಕವಿಗಳೂ, ಯೋಗಾಭ್ಯಾಸಿಗಳಾಗಿದ್ದ ಚಿದಂಬರಯ್ಯನವರು ಚೈತ್ರ ಬಹುಳ ತದಿಗೆ, ಪ್ರಮೋದೂತ ಸಂವತ್ಸರ, ಪುಷ್ಯಮಾಸ ಅಂದರೆ ಏಪ್ರಲ್ ೧೯, ೧೯೩೪ ರಲ್ಲಿ ಇಹಲೋಕವನ್ನು ತ್ಯಜಿಸಿದರು. ಇಂತಹ ಸಾತ್ವಿಕರೂ, ವೈರಾಗ್ಯಶಾಲಿಗಳೂ, ಯೋಗಸಾಧಕರೂ ಆಗಿದ್ದ 'ಕವಿರತ್ನ'ರನ್ನು ಕನ್ನಡ ಸಾರಸ್ವತಲೋಕ ಕಡೆಗಣಿಸಿದ್ದು, ಸಾರಸ್ವತಲೋಕದ ದುರಂತವೆನ್ನಬಹುದು. ಇಂತಹ 'ನ ಭೂತೇ ನ ಭವಿಷ್ಯತಿ' ಎಂಬಂತಹ ಕವಿಗಳು ಕನ್ನಡ ಸಾರಸ್ವತ ಲೋಕದಲ್ಲಿದ್ದುದು ನಮ್ಮೆಲ್ಲರ ಪುಣ್ಯ ವಿಶೇಷ. ■

ಕರ್ನಾಟಕ ಲೋಚನ
ಸಂಪುಟ ೨೬, ಸಂಚಿಕೆ ೧–೨
ಜನವರಿ–ಡಿಸೆಂಬರ್

೮. ಉದ್ಘಾಟನಾ ಭಾಷಣ : ೨ನೇ ರಾಷ್ಟ್ರೀಯ ಹಸ್ತಪ್ರತಿ ಸಮಾವೇಶ–ಶ್ರೀರಾಮಚಂದ್ರಾಪುರ

–ಪ್ರೊ॥ ಎನ್. ಬಸವಾರಾಧ್ಯ

'ಹಸ್ತಪ್ರತಿ' ಎಂದರೆ ಗ್ರಂಥವನ್ನು ಓಲೆ ಅಥವಾ ಕಾಗದ ಮುಂತಾದುವುಗಳಲ್ಲಿ ಬರೆದ ಕೈಬರಹದ ಪ್ರತಿ, ಮುದ್ರಣವಾಗದ ಯಾವುದೇ ಕೈಬರಹದ ಪ್ರತಿ ಎಂಬ ಅರ್ಥಗಳನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನಲ್ಲಿ ಕೊಡಲಾಗಿದೆ. ಹಸ್ತಪ್ರತಿಗಳು ಯಾವುದೇ ನಾಡಿನ ಸಾಹಿತ್ಯಕ, ಸಾಂಸ್ಕೃತಿಕ, ಐತಿಹಾಸಿಕ ದಾಖಲೆಗಳಾಗಿರುತ್ತವೆ. ಇವು ನಮ್ಮ ಹಿರಿಯರು ನಮಗೆ ಬಿಟ್ಟುಹೋಗಿರುವ ಅತ್ಯಮೂಲ್ಯ ಆಸ್ತಿ. ಬರವಣಿಗೆಯ ಸೌಲಭ್ಯವಿಲ್ಲದಿದ್ದ ಕಾಲದಲ್ಲಿ ಈ ಹಸ್ತಪ್ರತಿಗಳಲ್ಲಿಯೇ ಪ್ರಾಚೀನ ಗ್ರಂಥಗಳು ಉಳಿದುಕೊಂಡುಬಿಟ್ಟವೆ. ಹಸ್ತಪ್ರತಿಗಳು ನಾಡಿನಾದ್ಯಂತ ಹಂಚಿಹೋಗಿವೆ. ಹಸ್ತಪ್ರತಿಗಳನ್ನು ಮತ್ತೊಬ್ಬರಿಗೆ ತೋರಿಸಬಾರದು, ಕೊಡಬಾರದು, ಇವು ಪರಂಪರಾಗತವಾಗಿ ಬಂದಿರುವುವು ಎಂಬ ಮೂಢನಂಬಿಕೆಯಿಂದ ಅವನ್ನು ಹುಳುಹುಪ್ಪಟಗಳಿಗೋ ಗೆದ್ದಲಿಗೋ ನೀರಿಗೋ ಆಹುತಿ ಮಾಡಿರುವ ಪ್ರಕರಣಗಳೂ ದೃಷ್ಟಾಂತಗಳೂ ಇವೆ. ಜನತೆಯ ಅಜ್ಞಾನದಿಂದ ನಾಶವಾಗಿದುವವನ್ನು ಬಿಟ್ಟು ಅಳಿದುಳಿದುವುಗಳನ್ನಾದರೂ ಸಂರಕ್ಷಿಸುವುದು ಈ ನಾಡಿನ ಪ್ರತಿಯೊಬ್ಬ ಪ್ರಜ್ಞಾವಂತನ ಕರ್ತವ್ಯವಾಗಿದೆ.

ಹಸ್ತಪ್ರತಿಗಳನ್ನು ಚಿನ್ನ, ಬೆಳ್ಳಿ, ಕಬ್ಬಿಣ, ತಾಮ್ರ ಹಿತ್ತಾಳೆ, ಕಂಚು, ಮೊದಲಾದ ಲೋಹಗಳಿಂದಲೂ ಮಣ್ಣು, ಮರ, ಚರ್ಮ, ಕಲ್ಲು ಪತ್ರ ಇವೇ ಮೊದಲಾದುವನ್ನು ಲೇಖ್ಯ ವಸ್ತುಗಳಾಗಿ ಬಳಸುತ್ತಿದ್ದುದು ಉಂಟು. ಇವೆಲ್ಲವುಗಳಲ್ಲಿ ವಿಶೇಷವಾಗಿ ಬಳಕೆಗೆ ಬಂದದ್ದು ತಾಳಪತ್ರ, ಭೂರ್ಜಪತ್ರ ಮತ್ತು ಕಡತ. ಕಾಗದ ಬಳಕೆಗೆ ಬಂದ ಮೇಲೆ ಇವು ಮರೆಯಾದುವು.

ಹಸ್ತಪ್ರತಿಗಳು ಅಸ್ತಿತ್ವಕ್ಕೆ ಬಂದದ್ದು ಹೇಗೆ ಎಂಬುದು ಬಹಳ ಮುಖ್ಯ ಸಂಗತಿ. ಗ್ರಂಥಕರ್ತರೇ ಹಸ್ತಪ್ರತಿಗಳಲ್ಲಿ ಬರೆದಿರಬಹುದು. ಇದಕ್ಕೆ ನಮಗೆ ಆಧಾರಗಳು

ಲಭ್ಯವಾಗಿವೆ. ಗ್ರಂಥಕರ್ತರು ಬೇರೆಯವರಿಗೆ ಹೇಳಿ ಬರೆಸುತ್ತಿದ್ದುದೂ ಉಂಟು. ಜೊತೆಗೆ ಧರ್ಮಶ್ರದ್ಧೆಯಿದ್ದವರು ತಮಗೆ ಪ್ರಿಯವಾದ ಕಟ್ಟುಗಳನ್ನು ಅವು ಲಭ್ಯವಿರುವವರಿಂದಾಗಲಿ ಮಠಮಾನ್ಯಗಳಿಂದಾಗಲಿ ಪಡೆದು ಪ್ರತಿಗಳನ್ನು ಇಟ್ಟುಕೊಳ್ಳುತ್ತಿದ್ದರು. ಓಲೆಗರಿಯ ಮೇಲೆ ಗ್ರಂಥಗಳನ್ನು ಬರೆಯಬೇಕಾದರೆ ಅದಕ್ಕೆ ಅನುಭವ ಬೇಕು, ಸಾಕಷ್ಟು ಪರಿಶ್ರಮವಿರಬೇಕು. ಮೂಲಪ್ರತಿಯಿಂದ ನಕಲು ಪ್ರತಿಗಳನ್ನು ಸಿದ್ಧಪಡಿಸಬೇಕಾದರೆ ವೃತ್ತಿಯಿಂದ ಪ್ರತಿಕಾರರಿಂದ ಮಾತ್ರ ಮಾಡಿಸಬೇಕಾಗುತ್ತದೆ. ಹಿಂದಿನ ಕಾಲದಲ್ಲಿ ಪ್ರತಿಲಿಪೀಕರಣ ಒಂದು ವೃತ್ತಿಯಾಗಿತ್ತು. ಈ ಕಾರ್ಯಕ್ಕಾಗಿಯೇ ನೇಮಕರಾದವರನ್ನು ನಿಯುಕ್ತ ಲಿಪಿಕಾರರು ಎಂದು ಕರೆಯುತ್ತಿದ್ದರು. ಮತ್ತೆ ಕೆಲವರು ಆತ್ಮತೃಪ್ತಿಗಾಗಿ ಪ್ರತಿ ಮಾಡಿಕೊಳ್ಳುತ್ತಿದ್ದವರು. ಇವರನ್ನು ಹವ್ಯಾಸಿ ಲಿಪಿಕಾರರು ಎಂದು ಕರೆಯುತ್ತಿದ್ದರು.

ಹಸ್ತಪ್ರತಿಗಳಿಂದ ಪ್ರತಿಮಾಡುವಾಗ ಮೂಲಪ್ರತಿಯನ್ನು ನೋಡಿಕೊಂಡು ಒಬ್ಬರೇ ಪ್ರತಿಮಾಡುವುದು ಒಂದು ಬಗೆ. ಒಬ್ಬರು ಓದಿ ಹೇಳಿ ಇನ್ನೊಬ್ಬರು ಪ್ರತಿಮಾಡುತ್ತಿದ್ದುದು ಇನ್ನೊಂದು ಬಗೆ. ಒಂದೇ ಕಾವ್ಯದ ಅನೇಕ ಪ್ರತಿಗಳು ಅವಶ್ಯವಿದ್ದ ಸಂದರ್ಭದಲ್ಲಿ ಒಬ್ಬರು ಓದಿ ಹೇಳಿ ಹಲವರು ಪ್ರತಿಮಾಡಿಕೊಳ್ಳುತ್ತಿದ್ದುದು ಇನ್ನೊಂದು ಬಗೆ. ಪ್ರಾಚೀನ ಗ್ರಂಥಗಳ ಪ್ರತಿಲಿಪೀಕರಣ ಈ ರೀತಿ ಸಾಗುತ್ತಿತ್ತು ಎಂದು ಭಾವಿಸಬಹುದು. ಈ ಮೂರು ವಿಧಾನಗಳಲ್ಲೂ ಸ್ಖಾಲಿತ್ಯಗಳು ಸಂಭವಿಸುವು ಅನಿವಾರ್ಯ. ಆದರೆ ವೃತ್ತಿಲಿಪಿಕಾರರಿಗಿಂತ ಇತರರು ಪ್ರತಿಮಾಡಿದ ಪ್ರತಿಗಳಲ್ಲಿ ಸ್ಖಾಲಿತ್ಯಗಳು ಅಧಿಕವಾಗುವುದು ಸಂಭವನೀಯ.

ಪ್ರಾಚೀನ ಹಸ್ತಪ್ರತಿಗಳ ಲಿಪಿ ವೈವಿಧ್ಯಮಯವಾಗಿದೆ; ವೈಶಿಷ್ಟ್ಯಪೂರ್ಣವಾಗಿದೆ. ಕೆಲವು ಹಸ್ತಪ್ರತಿಗಳು ಸುಂದರ ಲಿಪಿಯಿಂದ ಕೂಡಿದ್ದರೆ ಮತ್ತೆ ಕೆಲವು ಕಾಕಲಪಿ, ದುರ್ಲಿಪಿಗಳಿಂದ ಕೂಡಿರುತ್ತವೆ. ಸುಂದರ ಲಿಪಿಯ ಹಸ್ತಪ್ರತಿಗಳನ್ನು ಯಾರೇ ಆಗಲಿ ಸರಾಗವಾಗಿ ಓದಬಹುದು. ಆದರೆ ಮೋಡಿ ಲಿಪಿ, ಕಾಕಲಿಪಿಯ ಹಸ್ತಪ್ರತಿಗಳನ್ನು ಓದಬೇಕಾದರೆ ಈ ನಿಟ್ಟಿನಲ್ಲಿ ಪ್ರಬುದ್ಧತೆ ಇರಬೇಕಾಗುತ್ತದೆ. ತಾಳೆಗರಿ ಪ್ರತಿಗಳಿಗಿಂತ ಕಾಗದದ ಪ್ರತಿಗಳನ್ನು ಓದುವುದು ಸ್ವಲ್ಪಮಟ್ಟಿಗೆ ಸುಲಭಸಾಧ್ಯವಾದುದು. ಲಿಪಿಕಾರರಿಂದ ಸಂಭವಿಸುವ ಸ್ಖಾಲಿತ್ಯಗಳನ್ನು ಪಟ್ಟಿ ಮಾಡಿ ತೋರಿಸುವುದು ಸಾಧ್ಯವಿಲ್ಲವೋ ಹಾಗೆಯೇ ಹಸ್ತಪ್ರತಿ ಓದುಗರ ಸ್ಖಾಲಿತ್ಯಗಳನ್ನೂ ಸಮಗ್ರವಾಗಿ ಪಟ್ಟಿಮಾಡಿ ತೋರಿಸುವುದು ಸಾಧ್ಯವಿಲ್ಲ. ಅವರವರ ಸಂಸ್ಕಾರ, ಅನುಭವ, ವ್ಯುತ್ಪತ್ತಿಗಳಿಗನುಗುಣವಾಗಿ ಈ ಸ್ಖಾಲಿತ್ಯಗಳ ಸಂಖ್ಯೆಯೂ ಏರುಪೇರಾಗುತ್ತದೆ.

ಹಸ್ತಪ್ರತಿಗಳನ್ನು ಓದುವುದು ಒಂದು ಕಲೆ. ಹಸ್ತಪ್ರತಿಗಳಲ್ಲಿನ ಲಿಪಿ, ಭಾಷೆ ಇವುಗಳನ್ನು ಓದಲು ಸಾಕಷ್ಟು ಪರಿಶ್ರಮ ಬೇಕಾಗುತ್ತದೆ. ಹಸ್ತಪ್ರತಿಗಳನ್ನು ತಪ್ಪಾಗಿ ಓದಿದರೆ ಆಗುವ ಅಪಾರ್ಥ, ಅನರ್ಥಗಳನ್ನು ಊಹಿಸಲೂ ಬರುವಂತಿಲ್ಲ. ಪ್ರತಿಕಾರ ವ್ಯುತ್ಪನ್ನಮತಿಯಾದರೆ ಅಕ್ಷರ ಮತ್ತು ಭಾಷಾಸ್ಖಾಲಿತ್ಯಗಳು ಗಣನೀಯವಾಗಿ

ಕಡಿಮೆಯಾಗುತ್ತವೆ. ಹಸ್ತಪ್ರತಿಯಿಂದ ಪ್ರತಿಮಾಡುವುದರಿಂದ ಓಡಿದು ಪಾಠಾಂತರಗಳನ್ನು ಗುರುತಿಸಿಕೊಂಡು ಕವಿಯ ಪಾಠವನ್ನು ಕಂಡುಹಿಡಿಯುವುದು ಅತ್ಯಂತ ದುಸ್ತರವಾದ ಕಾರ್ಯ. ಸಂಪಾದಕನು ಈ ಎಲ್ಲ ಪರೀಷಹಗಳನ್ನು ಗೆದ್ದುಕೊಂಡು ಬಂದಾಗಲೇ ಕವಿಯ ಮೂಲಪಾಠವನ್ನು ಕಂಡುಹಿಡಿಯುವಲ್ಲಿ ಜಯಶೀಲನಾಗಬಹುದು. ಗ್ರಂಥಸಂಪಾದನಕಾರ್ಯ ಅತ್ಯಂತ ಕಠಿಣತರವಾದುದು.

ಹಸ್ತಪ್ರತಿಗಳನ್ನು ಓದುವವರಿಗೆ ಕೆಲವು ಅರ್ಹತೆಗಳಿರಬೇಕು. ಅವರಿಗೆ ಪಾಂಡಿತ್ಯವಿರಬೇಕು ; ಶಬ್ದಜ್ಞಾನವಿರಬೇಕು. ಜೊತೆಗೆ ಶಾಸ್ತ್ರಪರಿಚಯವೂ ಲಿಪಿಯ ಪರಿಜ್ಞಾನವೂ ಅತ್ಯವಶ್ಯಕ. ಇವೆಲ್ಲಕ್ಕಿಂತ ಮುಖ್ಯವಾಗಿ ಹಸ್ತಪ್ರತಿ ಯಾವ ಕಾಲಕ್ಕೆ ಸೇರಿದ್ದು, ಅದನ್ನು ಯಾವಾಗ ಪ್ರತಿಮಾಡಲಾಯಿತು, ಆ ಕಾಲದಲ್ಲಿ ಪ್ರಚಲಿತವಾಗಿದ್ದ ಲಿಪಿಯ ವಿನ್ಯಾಸ–ಇವುಗಳ ಪರಿಚಯ ಅತ್ಯಗತ್ಯ. ಇಷ್ಟೆಲ್ಲ ಸಿದ್ಧತೆಗಳನ್ನು ಅಳವಡಿಸಿಕೊಂಡಾಗ ಹಸ್ತಪ್ರತಿಗಳನ್ನು ಓದುವಲ್ಲಿ ಸಂಭವಿಸಬಹುದಾದ ಸ್ಖಾಲಿತ್ಯಗಳನ್ನು ಬಹಳ ಮಟ್ಟಿಗೆ ಸುಧಾರಿಸಬಹುದು.

ಕನ್ನಡದಲ್ಲಿ ಗ್ರಂಥಸಂಪಾದನೆಗೆ ಸಂಬಂಧಿಸಿದ ಮೇರುಕೃತಿಯನ್ನು ಆಕರ ಗ್ರಂಥವನ್ನು ರಚಿಸಿದ ಕೀರ್ತಿ ನನ್ನ ಪೂಜ್ಯ ವಿದ್ಯಾಗುರುಗಳಾದ ಡಾ॥ ಡಿ. ಎಲ್. ನರಸಿಂಹಚಾರ್ ಅವರಿಗೆ ಸಲ್ಲುತ್ತದೆ. ಕನ್ನಡದಲ್ಲೇ ಏನು ನಮ್ಮ ದೇಶದ ಬೇರೆ ಭಾಷೆಗಳಲ್ಲಿಯೂ ಇಂಥ ಬರವಣಿಗೆ ಬಂದಿಲ್ಲ ಎಂಬ ಖ್ಯಾತಿಗೆ ಈ ಕೃತಿ ಭಾಜನವಾಗಿದೆ. ಈ ಕನ್ನಡ ಗ್ರಂಥ ಸಂಪಾದನೆಯಲ್ಲಿ ಹಸ್ತಪ್ರತಿ ಶಾಸ್ತ್ರಕ್ಕೆ ಸಂಬಂಧಿಸಿದ ವಿಷಯಗಳು ಇಂತಿವೆ. "ಗ್ರಂಥ ಸಂಪಾದನೆ ಶಾಸ್ತ್ರದ ಪ್ರತಿಪಾದನೆಗೆ ಬೇಕಾದ ಸಕಲ ವಿಷಯಗಳು ಕನ್ನಡ ಪ್ರಾಚೀನ ಹಸ್ತಪ್ರತಿಗಳಲ್ಲಿ ಅಡಗಿವೆ. ಅವುಗಳನ್ನು ಅಭ್ಯಾಸ ಮಾಡಿ ಕಲಿತುಕೊಳ್ಳುವ ಕೆಲಸ ವಿದ್ವತ್ತಿನ ಪಾಲಿಗೆ ಉಳಿದಿದೆ".

(ಪ್ರವೇಶ ಪುಟ ೧)

"ಭಾರತೀಯ ಸಂಸ್ಕೃತಿಗೆ ಮೂಲಭೂತವಾದ ವೇದೋಪನಿಷತ್ತುಗಳ ಪಾಠವನ್ನು ಸ್ವಲ್ಪವೂ ಕೆಡದಂತೆ ಹಲವು ಸಾವಿರ ವರ್ಷಗಳಿಂದ ನಮ್ಮ ಜನರು ಕಾಪಾಡಿಕೊಂಡು ಬಂದಿದ್ದಾರೆ. ಅವುಗಳಿಗೆ ಬರವಣಿಗೆಯ ರೂಪವನ್ನು ಕೊಡುವುದಕ್ಕೆ ಲಿಪಿಯ ಅಭಾವವಿದ್ದ ಪ್ರಾಚೀನ ಕಾಲದಲ್ಲೂ ಗುರುಶಿಷ್ಯ ಪರಂಪರೆಯಲ್ಲಿ ವೇದಪಾಠ ಬಾಯಿಂದ ಬಾಯಿಗೆ ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಸಾಗುತ್ತಾ ಬಂದಿದೆ." (ಪುಟ–೩)

ಕ್ರಿಪೂ. ೮೦೦ರ ಕಾಲದಲ್ಲೇ ಈಚೀನ ಬ್ರಾಹ್ಮೀ ಲಿಪಿಗೆ ಮೂಲವಾದ ಒಂದು ಲಿಪಿ ಭರತ ಖಂಡದಲ್ಲಿ ಇದ್ದಿತೆಂದು ಹೇಳುತ್ತಾರೆ. ಆದ್ದರಿಂದ ಗ್ರಂಥಗಳನ್ನು ಬರೆದಿಡುವ ಕಾರ್ಯ ಆ ಕಾಲದಿಂದ ಆರಂಭವಾಗಿರಬಹುದು. ಬಾಯಿಂದ ಬಾಯಿಗೆ ಸಾಗಿ ಬರುತ್ತಿದ್ದ ಸಾಹಿತ್ಯ ಕಾಲ ಕಳೆದಂತೆ ಗ್ರಂಥಸ್ಥವಾಗಿ ಚಾಕ್ಷುಷ ರೂಪವನ್ನು ಪಡೆಯಲಾರಂಭಿಸಿದ ಮೇಲೆ ಅದರ ಪಾಠ ಶುದ್ಧಿಯು ಪಠನಕಾರರ

ಕೈಯಿಂದ ಜಾರಿ ಲೇಖಕರ ಅಥವಾ ಲಿಪಿಕಾರರ ಹಸ್ತಂಗವಾಯಿತು. ಪಠನ ಕಲೆಯೂ ಲೇಖನ ಕಲೆಯೂ ಬಹಳ ಕಾಲ ಜೊತೆ ಜೊತೆಯಾಗಿ ಬೆಳೆದುಕೊಂಡು ಬಂದಿರಬಹುದು. ಲೇಖನ ಕಲೆ ಬೆಳೆದಂತೆಲ್ಲ ಪಠನ ಕಲೆ ಹಿಂದೆ ಬಿದ್ದು ಕನಿಷ್ಠ ಪರಿಮಿತಿಗೆ ಇಳಿದಿರಬಹುದು. ಪವಿತ್ರ ಗ್ರಂಥಗಳ ವಿಷಯದಲ್ಲಿ ಮಾತ್ರ ಕ್ರಮ ಪಾಠಾದಿಗಳ ವ್ಯವಸ್ಥೆ ಹಿಂದಿನಿಂದ ಬಂದದ್ದು ಮುಂದುವರಿದುಕೊಂಡು ಬಂದ ಹಾಗೆ ಕಾಣುತ್ತದೆ. ಉಳಿದ ಸಾಹಿತ್ಯ ಗ್ರಂಥರೂಪತಾಳಿ ಹಸ್ತಪ್ರತಿಗಳ ಪರಂಪರೆಗೆ ಕಾರಣವಾಯಿತು.(ಪುಟಳ-೫)

ಶಾಸ್ತ್ರದಾನ ಮಾಡುವ ಸಂಪ್ರದಾಯ ನಮ್ಮ ನಾಡಿನಲ್ಲಿ ಹಿಂದಿನಿಂದಲೂ ರೂಢಿಯಲ್ಲಿದೆ. ದಾನಚಿಂತಾಮಣಿ ಅತ್ತಿಮಬ್ಬೆ ತನ್ನ ಪಿತೃಭಕ್ತಿಯನ್ನು ಮೆರೆಯುವುದಕ್ಕಾಗಿ ಪುರಾಣ ಚೂಡಾಮಣಿಯೂ ಶಾಂತಿ ಪುರಾಣದ ಸಹಸ್ರ ಪ್ರತಿಗಳನ್ನು ಬರೆಸಿ ದಾನ ಮಾಡಿದುದನ್ನು

ಎಸೆಯದೆ ಪೂಟ್ಟು ಕೆಟ್ಟಪುದು ಶಾಂತಿ ಪುರಾಣಮದಂ ನೆಗಟ್ಟುವೆಂ
ವಸುಧೆಯೊಳೆನ್ನ ತಂದೆಯ ಪರೋಕ್ಷದೊಳೆಂದು ಸಹಸ್ರ ಪುಸ್ತಕ
ಪ್ರಸರಮನತ್ತಿಮಬ್ಬೆ ಪರಮಾದರದಿಂ ಬರೆಯಲ್ಕೆವೇಟ್ಟಿ ಪೆಂ
ಪಸದಳಮದ್ವಿತೀಯಮಸಮಂ ಸಲೆ ಭಾವಿಸಲೆಯ್ದೆ ಬಣ್ಣಿಸಲ್

ಎಂಬ ಪದ್ಯ ಸಾರುತ್ತಿದೆ. ಇಷ್ಟೊಂದು ಸಂಖ್ಯೆಯಲ್ಲಿ ಗ್ರಂಥಗಳನ್ನು ಪ್ರತಿಮಾಡಿಸಬೇಕಾದರೆ ಆ ವೃತ್ತಿಯಲ್ಲಿ ಪರಿಶ್ರಮವಿದ್ದ ಒಂದು ವಿಶಿಷ್ಟ ಪಂಗಡವೇ ಇರುತ್ತಿತ್ತು ಎಂದು ಊಹಿಸಬಹುದಾಗಿದೆ.

ಹಸ್ತಪ್ರತಿ ಶಾಸ್ತ್ರಕ್ಕೆ ಗಣನೀಯ ಸೇವೆಯನ್ನು ಸಲ್ಲಿಸಿರುವ ಹಂಪಿ ಕನ್ನಡ ವಿಶ್ವವಿದ್ಯಾಲಯದ ಮಾಜಿ ಕುಲಪತಿಗಳೂ ನನ್ನ ಮಿತ್ರರೂ ಆದ ಡಾ॥ ಎಂ. ಎಂ. ಕಲಬುರ್ಗಿ ಅವರ ಕನ್ನಡ ಗ್ರಂಥ ಸಂಪಾದನ ಶಾಸ್ತ್ರದಲ್ಲಿಯ ಒಂದು ವಿಷಯ ಪ್ರಸ್ತಾವನೆ ಇಂತಿದೆ.

"ಗ್ರಂಥದಾನದ ಒಂದು ಉತ್ತಮ ಉದಾಹರಣೆ ಜೈನ ಪ್ರಭಾವಕ ಚರಿತ್ರೆಯಲ್ಲಿ ಹೀಗೆ ಬರುತ್ತದೆ. ತನ್ನ ವಿನಂತಿಯ ಮೇರೆಗೆ ವ್ಯಾಕರಣ ಬರೆಯಲು ನಿರತನಾದ ಹೇಮಚಂದ್ರನಿಗೆ ಸಿದ್ಧರಾಜ ಜಯಸಿಂಹನು ಈ ಹಿಂದಣ ಎಂಟು ವ್ಯಾಕರಣಗಳ ಹಸ್ತಪ್ರತಿಗಳನ್ನು ಕಾಶ್ಮೀರದ ಸರಸ್ವತಿ ಭಂಡಾರದಿಂದ ತರಿಸಿಕೊಟ್ಟನು. ಇವುಗಳ ನೆರವಿನಿಂದ ಹೇಮಚಂದ್ರನು ರಚಿಸಿದ 'ಸಿದ್ಧ ಹೇಮಚಂದ್ರ' ವ್ಯಾಕರಣದ ಹಸ್ತಪ್ರತಿಗಳನ್ನು ಸಿದ್ಧಪಡಿಸಲು ೩೦೦ ಜನ ಲಿಪಿಕಾರರನ್ನು ೩ ವರ್ಷಗಳವರೆಗೆ ನಿಯಮಿಸಿದ್ದನು. ಇವರು ಸಿದ್ಧಪಡಿಸಿದ್ದ ಹೇರಳ ಹಸ್ತಪ್ರತಿಗಳಲ್ಲಿ ತನ್ನ ರಾಜ್ಯದ ಪ್ರತಿಯೊಂದು ಮತದ ಗ್ರಂಥಾಲಯಕ್ಕೆ ಒಂದೊಂದನ್ನೂ ಅನ್ಯಗ್ರಂಥಾಲಯಗಳಿಗೆ ಮಿಕ್ಕವುಗಳನ್ನು ಹಂಚಿದನು. ಕಾಶ್ಮೀರದ ಸರಸ್ವತಿ ಭಂಡಾರಕ್ಕೆ ಇಪ್ಪತ್ತು ಹಸ್ತಪ್ರತಿಗಳನ್ನು ನೀಡಿದನು. ಸಾಲದುದಕ್ಕೆ ಭಾರತದ ಹೊರಗಣ ಪರ್ಶಿಯ,

ಸಿಲೋನ್, ನೇಪಾಳಗಳಿಗೂ ಈ ಪ್ರತಿಗಳನ್ನು ಕಳಿಸಿದನು.

ಇಂತಹ ಇನ್ನೊಂದು ಗಮನಾರ್ಹ ಸಂಗತಿ ಕೆಳದಿ ಬಸವರಸನ ಗ್ರಂಥದಾನ. ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮ ಮೂರ್ತಿಗಳಿಗೆ ನಾನಾ ವಿಧ ಭಕ್ಷ ಭೋಜ್ಯ ರಸಾಯನ ಫಲಂಗಳ್ ಮುಂತಾದ ಇಚ್ಛಾ ಪದಾರ್ಥಗಳಂ ನೀಡಿಸಿ ಸಂತುಷ್ಟಿವಡಿಸಿ ಯವರ್ಗೆ ನಾನಾವಿಧ ವಿಚಿತ್ರಕರ ವಸ್ತ್ರ ಕಂಬಳಿ ಕಂಥೆ ಶಿವದಾರ ವಿಭೂತಿ ಧಾರ ಭಸ್ಮ ರುದ್ರಾಕ್ಷಿ "ಆಗಮ ಶಿವಶಾಸ್ತ್ರ ಲಿಖಿತ ಪುಸ್ತಕ" ಪಾವಡ ಛತ್ರ ಪಾದುಕೆ ಹಸ್ತಾಧಾರದಂಡ ಮುಂತಾದ ಇಚ್ಛಾ ಪದಾರ್ಥಗಳಂ ಕೊಡಿಸಿ ಪೇಟೆಯಲ್ಲಿ ಆರಾಧನಾ ಪೂರ್ವಕಂ ಮಹೋತ್ಸವ ಮೆರವಣಿಗೆಗಳಂ ಮಾಡಿಸಿ ಶಾಶ್ವತ ಧರ್ಮ ಕೀರ್ತಿಗಳಂ ಸಂಪಾದಿಸಿ ರಾಜ್ಯಂಗೆಯುತಿರ್ದ ಬಸವ ನರೇಂದ್ರಂ"

ಇಲ್ಲಿ ಬಸವರಸನು ನೀಡಿದ ಹಲವು ವಸ್ತುಗಳಲ್ಲಿ ಒಂದು ಲಕ್ಷ ತೊಂಬತ್ತಾರು ಸಾವಿರ "ಆಗಮ ಶಿವಶಾಸ್ತ್ರ ಲಿಖಿತ ಪುಸ್ತಕದಾನ, ಪ್ರಾಚೀನ ಕನ್ನಡಿಗರ ಗ್ರಂಥ ದಾನಕ್ಕೆ ಒಂದು ಪರಮ ನಿದರ್ಶನ (ಪುಟ ೧೦–೧೧). ಹೀಗೆ ಅರಸನಿಂದ ಪ್ರಜೆಗಳ ವರೆಗಿನ ವಿವಿಧ ಶ್ರೇಣಿಯ ವ್ಯಕ್ತಿಗಳು ವಿವಿಧ ಉದ್ದೇಶಗಳಿಂದ ಗ್ರಂಥಗಳನ್ನು ಪ್ರತಿಮಾಡಿದರು, ಪ್ರತಿ ಮಾಡಿಸಿದರು. ಇವರು ಕಾರಣವಾಗಿ ಈ ವರೆಗೆ ಸಿಕ್ಕ ಇನ್ನು ಮುಂದೆ ಸಿಗಹುದಾದ ಒಟ್ಟು ಇಪ್ಪತ್ತುಸಾವಿರ ಕನ್ನಡ ಹಸ್ತಪ್ರತಿಯ ಕಟ್ಟುಗಳು ಒಂದು ಲಕ್ಷ ಕನ್ನಡ ಕೃತಿಗಳು ಕನ್ನಡಿಗರ ಲೇಖನ ಆಸಕ್ತಿಗೆ ನಿದರ್ಶನ ಎನಿಸಿವೆ. (ಪುಟ ೧೨).

ಕನ್ನಡದ ಕಣ್ವ ಆಚಾರ್ಯ ಬಿ.ಎಂ.ಶ್ರೀಕಂಠಯ್ಯನವರು. ಮೊದಲು ಹಿಂದಿನಿಂದ ಬಂದ ಕಾವ್ಯಗಳನ್ನು ಏನು ಮಾಡುವುದು ? ಇವು ನಮ್ಮ ಹಿರಿಯರು ಗಳಿಸಿದ ಸ್ವತ್ತು. ಬಡತನವೋ, ಸಿರಿತನವೋ ಇದ್ದುದನ್ನು ಉಳಿಸಿಕೊಂಡು ಮುಂದಕ್ಕೆ ಹೆಚ್ಚಿಸುತ್ತಾ ಹೋಗಬೇಕು. ಇದಲ್ಲದೆ ಇವು ತೀರ ಕೆಲಸಕ್ಕೆ ಬಾರದವೂ ಅಲ್ಲ. ಪೂರ್ವದ ಶಾಸನಗಳಿಂದ ಮೈಸೂರಿನ ಚರಿತ್ರೆಯನ್ನು ಕೂಡಿಸಬಹುದು. ಕಾವ್ಯಗಳಲ್ಲಿ ಚರಿತ್ರಾಂಶಗಳೂ ಆಚಾರ ವ್ಯವಹಾರಗಳೂ ದೇಶ ಕಾಲ ಭೇದಗಳು ತಿಳಿಯುತ್ತವೆ. ಮತ ಸಂಬಂಧವಾದ ವಿಷಯಗಳು ಎಷ್ಟೋ ಅಡಕವಾಗಿವೆ. ಇದರ ಜೊತೆಗೆ ಭಾಷೆಯ ಚರಿತ್ರೆಯನ್ನೂ ಕಾವ್ಯಮಾಲೆಯ ಬೆಳವಣಿಗೆಯನ್ನೂ ಸಂಗ್ರಹಿಸುವ ಅವಶ್ಯಕತೆ ಬೇರೆ ಇದೆ. ತಾಯಿಬೇರನ್ನು ಕಡಿದು ಮರವನ್ನು ಚಿಗುರಿಸುವುದಕ್ಕೆ ಹೇಗೆ ಆಗಲಾರದೋ ಹಾಗೆಯೆ ನಮ್ಮ ಪೂರ್ವವನ್ನು ಅಳಿಸಿಬಿಟ್ಟು ಭವಿಷ್ಯಕ್ಕೆ ಆಗಲಾರದು. ಆದದ್ದರಿಂದ ಪೂರ್ವದ ಕಾವ್ಯಗಳ ವಿಷಯದಲ್ಲಿ ಹೀಗೆ ಮಾಡಬೇಕು.

ದೇಶದಲ್ಲಿ ಹುಳು ತಿಂದುಹೋಗದೆ ಉಳಿದಿರುವ ಗ್ರಂಥಗಳನ್ನೆಲ್ಲಾ ಶೇಖರಿಸಿ ಒಂದನ್ನೂ ಬಿಡದಂತೆ ಅಚ್ಚುಹಾಕುವುದು. ಈ ಕೆಲಸವನ್ನು ಮೈಸೂರು ಸರ್ಕಾರದವರೂ, ಕಾವ್ಯಮಂಜರಿ ಕಾವ್ಯಕಲಾನಿಧಿಗಳ ಸಂಪಾದಕರೂ ಆಗಲೇ ಮಾಡುತ್ತಲೇ ಇದ್ದಾರೆ. ಇವರಿಗೆ ಎಲ್ಲರೂ ಕೃತಜ್ಞರಾಗಿರತಕ್ಕದ್ದು (ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ, ಪುಟ ೨೫೨) ಎಂದು ಹೇಳಿದ್ದಾರೆ" ಆಚಾರ್ಯ

ಬಿ.ಎಂ.ಶ್ರೀಕಂಠಯ್ಯನವರ ಹೆಸರಿನಲ್ಲಿ ಈ ಪ್ರತಿಷ್ಠಾನವನ್ನು ಸಂಸ್ಥಾಪಿಸಿರುವ ಅವರ ಪರಮ ಶಿಷ್ಯರಾದ ಪ್ರೊ॥ ಎಂ. ವಿ. ಸೀತಾರಾಮಯ್ಯನವರು ತಮ್ಮ ಗುರುಗಳ ಆಶೋತ್ತರವನ್ನು ಈಡೇರಿಸುವಲ್ಲಿ ಸಫಲರಾಗಿದ್ದಾರೆ.

ನಾವು ಇಂದು ವಿಜ್ಞಾನ ಮತ್ತು ತಂತ್ರಜ್ಞಾನ ಯುಗದಲ್ಲಿದ್ದೇವೆ. ಹಸ್ತಪ್ರತಿಗಳನ್ನು ಸಂಗ್ರಹಿಸುವುದು, ಸಂರಕ್ಷಿಸುವುದು, ಶಾಸ್ತ್ರೀಯವಾಗಿ ಸಂಪಾದಿಸುವುದು–ಇವೇ ಮೊದಲಾದ ಕಾರ್ಯಗಳನ್ನು ಸಮರ್ಥವಾಗಿ ಸಮರ್ಪಕವಾಗಿ ನಿರ್ವಹಿಸುವುದು ಸಾಧ್ಯವಂತಹುದಾಗಿದೆ. ಇಂದಿನ ವಿದ್ವಾಸರು, ಸಂಶೋಧಕರು, ವಿದ್ಯಾರ್ಥಿಗಳು ಈ ಕಾರ್ಯದಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡು ಆಚಾರ್ಯರ ಆಶಯವನ್ನು ಈಡೇರಿಸುವರು ಎಂಬ ಆಶಾಭಾವನೆಯನ್ನುಳ್ಳವನಾಗಿದ್ದಾನೆ.

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಪ್ರಧಾನವಾಗಿ ಒಂದು ಸಂಶೋಧನ ಸಂಸ್ಥೆ. ನಾಡಿನಾದ್ಯಂತ ಹರಡಿ ಹಂಚಿಹೋಗಿರುವ ಹಸ್ತಪ್ರತಿಗಳ್ನು ಸಂಗ್ರಹಿಸಿ ಸಂರಕ್ಷಿಸಿ ಶಾಸ್ತ್ರೀಯವಾಗಿ ಸಂಪಾದಿಸಿ ಪ್ರಕಟಿಸುವುದೇ ಇದರ ಮೂಲ ಮತ್ತು ಚೂಲ. ಈ ನಿಟ್ಟಿನಲ್ಲಿ ಎಂ.ವಿ. ಸೀತಾರಾಮಯ್ಯನವರು ಅಪಾರ ಶ್ರಮ ಮತ್ತು ಪರಿಶ್ರಮದಿಂದ ಸಂಸ್ಥಾಪಿಸಿರುವ ಈ ಸಂಸ್ಥೆ ತನ್ನ ಪ್ರಮುಖ ಆಶಯವಾದ ಹಸ್ತಪ್ರತಿಯನ್ನು ಕುರಿತು ಸಮಾವೇಶವನ್ನು ಅತ್ಯಂತ ಸಂತೋಷದಿಂದ ಉದ್ಘಾಟಿಸಿದ್ದೇನೆ. ಈ ಸಮಾವೇಶದಲ್ಲಿ ಪಾಲ್ಗೊಂಡಿರುವ ಸಹೃದಯರು ಹಸ್ತಪ್ರತಿಗಳಲ್ಲಿ ನಿಹಿತವಾಗಿರುವ ವಜ್ರ ವೈಡೂರ್ಯ ಮುತ್ತು ರತ್ನಗಳನ್ನು ತಂತಮ್ಮ ಸಂಸ್ಕಾರಕ್ಕನುಗುಣವಾಗಿ ಸಂಚಯಿಸಿಕೊಳ್ಳಲಿ ಎಂದು ಹಾರೈಸುತ್ತೇನೆ.

■

ಕರ್ನಾಟಕ ಲೋಚನ
ಸಂಪುಟ ೨೬, ಸಂಚಿಕೆ ೧-೨
ಜನವರಿ-ಡಿಸೆಂಬರ್

೯. ಎರಡು ಟಿಪ್ಪಣಿಗಳು :

-ಪ್ರೊ॥ ಸಿ. ಮಹಾದೇವಪ್ಪ

೧. ಸಯ್ಯಡಿಯ ಪಿನಾಕಿ ಪ್ರಭು ಉದಯಾದಿತ್ಯನೋ, ಪ್ರಧಾನಿ ನಾಗವರ್ಮನೋ?

ನಾಗವರ್ಮನ ಛಂದೋಂಬುಧಿ ಗ್ರಂಥಾರಂಭದ ದೇವತಾಸ್ತುತಿ ಸಂಬಂಧವಾಗಿ ಮಾಡಿರುವ ಶಿವಸ್ತುತಿಯಲ್ಲಿ ಕವಿ 'ಸಯ್ಯಡಿಯ ಪಿನಾಕಿ'ಯ ವರವನ್ನು ಕೋರಿದ್ದಾನೆ. ಆ ಗೌರೀವಲ್ಲಭ ಪಿನಾಕಪಾಣಿಯೊಡನೆ ತನ್ನ ಪ್ರಭುವನ್ನು ಸಮೀಕರಿಸಿ ಆತನನ್ನು 'ಮಿಕ್ಕನಾಕಿ'ಯೆಂದು ವಿಶೇಷಿಸಿದ್ದಾನೆ. ಗ್ರಂಥದೊಳಗೆ ತನ್ನನ್ನು ನಾಕಿ, ನಾಕಿಗ, ನಾಗಾರ್ಯ ಎಂಬ ಸಂಕ್ಷಿಪ್ತ ಕಲ್ಪಿತನಾಮಗಳಿಂದಲೂ ಕರೆದುಕೊಂಡು ತನ್ನ ಪ್ರಭುವನ್ನು 'ಪಿನಾಕಿ' ಎಂದಿರುವುದನ್ನು ನೋಡಿ :

ಪಿನಾಕಿಯುಂ ನಾಕಿಯುಮೆಂದ ಪಾಂಗಿಂ
ಘನಸ್ತನೇ ಕೇಳಿದುಪೇಂದ್ರವಜ್ರಂ ॥ (೨-೬೨)

ಸಯ್ಯಡಿಯ ಪಿನಾಕಿಯು ತನ್ನಿಂದ ಅನ್ಯ ಪುರುಷನೆಂಬುದನ್ನು ಸೂಚಿಸುವುದಕ್ಕಾಗಿ 'ಮಿಕ್ಕನಾಕಿ' ಎಂಬ ಇಂಗಿತಾರ್ಥಕ ವಿಶೇಷಣದ ಪ್ರಯೋಗವಿರುವುದನ್ನು ಗಮನಿಸಬಹುದು. ಈ ಉಪೇಂದ್ರವಜ್ರ ವೃತ್ತದ ಲಕ್ಷಣ ನಿರೂಪಣೆಯಲ್ಲಿ ತಾವಿಬ್ಬರೂ ನಡೆಸಿದ ಪದಗತಿಯ ಗಣ ರಚನೆಯುಳ್ಳ ವೃತ್ತವಿದೆಂದು ತಿಳಿಯಪಡಿಸಿದ್ದಾನೆ. ಶಿವನೊಡನೆ ಸಮಾವೇಶಗೊಂಡ ಮಿಕ್ಕ ನಾಕಿ ಸಯ್ಯಡಿಯ ಪಿನಾಕಿ ಕೂರ್ತು ನಮಗೀಗೆ ವರಂಗಳನುತ್ಸವಂಗಳಂ" ಎಂಬ ವರ್ಣನೆಯಲ್ಲಿ ನಾಕಿಯಾದ ತನಗೂ ತನ್ನಿಂದ ಪೂಜ್ಯ ಪುರುಷನಾದ ಪಿನಾಕಿರಾಜರಿಗೂ ಆ ಸಯ್ಯಡಿ ಊರ ದೇವನಾದ ಪಿನಾಕಪಾಣಿ ಶಿವನು ವರವನ್ನು ಕರುಣಿಸಲೆಂದು ಬೇಡಿದ್ದಾನೆ. ಆ ಪಿನಾಕಪಾಣಿಯ ಜೊತೆಗೆ ಪೆನ್ನಾಕಾರ ಪ್ರಭುವಾದ ಉದಯಾದಿತ್ಯ ಗುರುವೂ ತನಗೆ ವರವನ್ನು ನೀಡಲೆಂದು ನಾಗವರ್ಮನು ಕೋರಿದ್ದಾನೆ. ೨೦೦೭ರ ಪ್ರಿಂಟ್ ಪಾರ್ಕ್ ಮುದ್ರಣದ ಛಂದೋಂಬುಧಿಯ ಪ್ರಸ್ತಾವನೆಯಲ್ಲಿ" ಪಿನಾಕಿ ಛಂದಃ ಸುತ್ರಗಳ ಪಿಂಗಳನನ್ನೂ ನಾಕಿ ನಾಕಿಗ ಎಂಬವು ನಾಗವರ್ಮನನ್ನೂ ನಿರ್ದೇಶಿಸುವ ವ್ಯಕ್ತಿನಾಮಗಳು, ದಿಟ." ಈ ಹೇಳಿಕೆ ಯಾರದೇ

ಆಗಿರಲಿ ನಿರಾಧಾರವಾದದ್ದು. ಏಕೆಂದರೆ ಈಗಾಗಲೇ ಶಿವಸ್ತುತಿಯಲ್ಲಿ ಸಯ್ಯಡಿಯ ಪಿನಾಕಿಯ ವರವನ್ನು ನಮಗೆ ಅನುಗ್ರಹಿಸಲೆಂದು ಮಾಡಿರುವ ಪ್ರಾರ್ಥನೆ ಆ ಊರ ದೇವರಿಗೇ ಹೊರತು ಛಂದಸೂತ್ರಕಾರನಾದ ಪಿಂಗಳನಿಗಲ್ಲ ಎಂಬುದು ಖಚಿತ. ಆಕಾರಣ ಪಿನಾಕಿ ಶಿವನಾಗಲಿ, ನಾಗವರ್ಮನ ಪ್ರಭು ಪಿನಾಕಿಯಾಗಲಿ ಪಿಂಗಳನನ್ನು ನಿರ್ದೇಶಿಸುವ ವ್ಯಕ್ತಿನಾಮವಂತೂ ಅಲ್ಲವೆಂಬುದು ಸತ್ಯಸ್ಯ ಸತ್ಯ.

ಗುರ್ವಕ್ಷರವಾಗಿ ಪರಿಗಣಿಸಲ್ಪಡುವ ಸಂದರ್ಭಗಳು ಸಯ್ಯಡಿಯ ನಾಗವರ್ಮನಾದ ತನ್ನ ಒಪ್ಪಿಗೆ ಪಡೆದು ಆದುವುಗಳು ಎನ್ನುವಾಗ ನಾಗವರ್ಮನು ತನ್ನನ್ನು ಸಯ್ಯಡಿಯ ನಾಗವರ್ಮನೆಂದು ಕರೆದುಕೊಂಡಿದ್ದಾನೆ. ಆ ಊರಿನಿಂದ ಪ್ರಸಿದ್ಧನಾದ ನಾಗವರ್ಮನೆಂದು ಹೆಸರಿಸಿಕೊಂಡಿದ್ದಾನೆ. ಶ್ಲಿಷ್ಟಾರ್ಥದಿಂದ ತಾನು ನೇರ ನಡೆಯ ಋಜುಚಾರಿತ್ರವಂತನೆಂಬ ಆಂತರ್ಯವೂ ಅಡಗಿರುವುದು ಸಂಭವನೀಯ.

ಪ್ರಭುಕವೀಂದ್ರ ಸಹಾಯದೊಳಾದಿದಿಂ
ತಿಭಗತೀ ದ್ರುತಪೂರ್ವವಿಲಂಬಿತಂ ॥ (೨-೭೩)

ತನ್ನ ಗ್ರಂಥರಚನೆಯಲ್ಲಿ ಪ್ರಭುಕವೀಂದ್ರನಿಂದ ಲಭ್ಯವಾದ ನೆರವನ್ನು ನಾಗವರ್ಮ ಇಲ್ಲಿ ಸ್ಮರಿಸಿದ್ದಾನೆ. ಛಂದೋವೃತ್ತದ ಹೆಸರಿನ ಅರ್ಥವೇ ದ್ರುತಪೂರ್ವ ಅರ್ಥಾತ್ ಜೈನ ಪುರ್ವಗತ ಧರ್ಮದಿಂದ ಹಿಂದೆಸರಿದ ಸಂಗತಿಯೇ ಇಭಗತಿ ಎಂದರೆ ನಾಗವರ್ಮನ ಶಿವಜ್ಞಾನಾಚರಣೆಯ ಆತ್ಮಾವಿಷ್ಕಾರವಾಗಿದೆ. ಆ ಪ್ರಭುಕವೀಂದ್ರನನ್ನೇ ನಾಗವರ್ಮನು ಸುಕವೀಂದ್ರವಲ್ಲಭ ಅರ್ಥಾತ್ ಹಂಸರಾಜನಾದ ಉದಯಾದಿತ್ಯ, ವಿಷ್ಣುವಿನ ಅಂಶವುಳ್ಳ, ಪೃಥ್ವೀಪತಿಯೆಂದು ನಿರೂಪಿಸಿದ್ದಾನೆ. ಪ್ರಾಚೀನರ ಇಂದ್ರವಂಶವೃತ್ತದ ನಾಮಸಾದೃಶ್ಯ ಮಾಡಿದವನು ತನ್ನ ಪ್ರಭುವಾದ ಸೂರ್ಯರಾಜ, ಇನೋದಯ ಇಲ್ಲವೆ ಉದಯಾದಿತ್ಯನೆಂದು ನಾಗವರ್ಮನೇ ಖಚಿತಪಡಿಸಿರುವ ಬಿಚ್ಚು ನುಡಿಗಳು :

ಶ್ರೀಮಾನಿನೀ ಸಯ್ಯಡಿಯಾತನಿಂತಿದಂ
ನಾಮೋಪಮಂ ಮಾಡಿದನಿಂದ್ರವಂಶಮಂ ॥

ಈ ಪ್ರಾಚೀನ ವೃತ್ತಲಕ್ಷಣವನ್ನು ನಿರೂಪಿಸುತ್ತ ಡಾ॥ ಟಿ. ವಿ. ವೆಂಕಟಾಚಲಶಾಸ್ತ್ರೀ ಅವರು "ಈ ಸಯ್ಯಡಿಯಾತ (ನಾಗವರ್ಮ)" ಎಂಬ ಅವರ ವಿವರಣೆ ಹಾಗೂ 'ಶ್ರೀದೇವಿಯೆ' ಎಂಬ ಕಲ್ಪಿತ ಸಂಬೋಧನೋಕ್ತಿಯನ್ನು ಕವಿಯ 'ಶ್ರೀಮಾನಿನೀ' ಸಮಸ್ತ ಪದದ ವಿಗ್ರಹ ವಾಕ್ಯವು ದೂರೀಕರಿಸಿ ಅಲ್ಲಗಳೆಯುವ ಬಗೆ : 'ಶ್ರೀಮಾನ್+ಇನ>ಶ್ರೀಮಾನಿನ+ಈ>'ಶ್ರೀಮಾನಿನೀ ಸಯ್ಯಡಿಯಾತ'. ವೃತ್ತಸ್ಥ ವಾಕ್ಯದಲ್ಲಿ 'ಸಯ್ಯಡಿಯಾತ ಕರ್ತೃಪದ, ಅದರ ವಿಶೇಷಣವಾಗಿ ಬಂದಿರುವ ಪದವನ್ನು ಸಂಬೋಧನಾರ್ಥಕ ನಾಮವಾಚಿಯಾಗಿಸಿ 'ಶ್ರೀದೇವಿಯೆ' ಎಂದು

ಅರ್ಥೈಸಿರುವುದೇ ಅಸಂಗತ, ಅನನ್ವಯ ಎಂಬುದನ್ನು ನಾಗವರ್ಮನ ಮೇಲಣ ಶ್ರೀಮಾನಿನೀ ಪದದ ಮಾರ್ಮಿಕ ಗೂಡಾರ್ಥ ಗರ್ಭಿತ ಪದಚ್ಛೇದವೈವಿಧ್ಯವೇ ದಿಗ್ದರ್ಶಿಸಿದೆ. ಆಂಗ್ಲಭಾಷೆಯ ನುಡಿಯಲ್ಲಿ ಅದರ ಅರ್ಥವಿದು : `His Majesty the sun king is one who hails from Sayyadi'. 'ಇನ' ಶಬ್ದಕ್ಕೆ ಇರುವ Lord, master, king, Majesty, bold, powerful, ಅರ್ಥಗಳಿದ್ದು ಪ್ರಕೃತ ಸುಸಂಬಂಧವಾಗಿ ಹೊಂದಿಕೆಯಾಗಿರುವುದು ಸುವಿದಿತ. ಆದ್ದರಿಂದ ಡಾ॥ ಟಿ. ವಿ. ವೆಂಕಟಾಚಲ ಶಾಸ್ತ್ರೀ ಅವರು ನಿರೂಪಿಸಿರುವಂತೆ "ಸಯ್ಯಡಿಯ ಪಿನಾಕಿ ಅವರೇ ಕಾಣಿಸಿರುವ ಆವರಣದೊಳಗಣ (ನಾಗವರ್ಮ)ನಲ್ಲ. ಅವನ ದೊರೆ ಪೆನ್ನೆ ಪರಿನಾಡ ಪ್ರಭು 'ಪಿನಾಕಿ' ಕಲ್ಪಿತನಾಮಕ ಉದಯಾದಿತ್ಯನೇ ಸಯ್ಯಡಿಯ ಪಿನಾಕಿಯೆಂದು ವಿದ್ವಾಂಸರು ಬಲ್ಲರು ಎಂಬ ಲೇಖ ಅನ್ಯರ ಅನಗತ್ಯ ಅನಿಸಿಕೆ ಪೂರ್ಣ ವಿರಾಮಚಿಹ್ನೆ ಹಾಕಿದೆ.

2. "ದ್ರುತಪೂರ್ವವಿಲಂಬಿತಂ–ಒಂದು ಟಿಪ್ಪಣಿ

ನಾಗವರ್ಮನ ಛಂದೋಂಬುಧಿಯ ಸಮವೃತ್ತ ಪ್ರಕರಣದಲ್ಲಿರುವ ಈ ವೃತ್ತಲಕ್ಷಣ ೧೮೭೫ರ ಮಂಗಳೂರು ಸಂಪಾದಿತ ಗ್ರಂಥದ ಪಾಠವಿದು :

ನ–ಭ–ಭ–ರಂಗಳವೊಂದಿರೆ ಪಾದದೊಳ್
ಶುಭಕರಂ ಯತಿ ನಿಲ್ತಿರೆ ರಂಧದೊಳ್ ।
ಪ್ರಭು–ಕವೀಂದ್ರ–ಸಹಾಯದಿನಾದುದಿಂ
ತಿಭ–ಗತೀ, ದ್ರುತಪೂರ್ವವಿಲಂಬಿತಂ ॥ ೧೪೭ ॥

ಇದೇ ವೃತ್ತ ೧೯೭೫ರ ಡಿ.ವಿ.ಕೆ. ಮೂರ್ತಿ ಪ್ರಕಟನೆಯ ಶ್ರೀ ಕುಕ್ಕಿಲ ಕೃಷ್ಣಭಟ್ಟರ ಸಂಪಾದಿತ ಛಂದೋಬುಧಿಯಲ್ಲಿ ವೃತ್ತದ ಹಣೆ ಹೆಸರ ಸಮೇತ ವೃತ್ತಲಕ್ಷಣ ಪಾಠ ಇಂತಿದೆ.

"ದ್ರುತವಿಲಂಬಿತಂ–ನಭಭರ–೯"

"ನಭಭ, ರಂಗಳು, ಮೊಂದಿರೆ–ಪದದೊಳ್ ।
ಶುಭಕರಂ ಯತಿ ನಿಲ್ತಿರ–ರಂಧ್ರದೊಳ್ ॥
ಪ್ರಭುಕ, ವೀಂದ್ರ, ಸಹಾಯದೊ–ಳಾದುದಿಂ ।
ತಿಭಗ, ತಿದ್ರುತ, ಪೂರ್ವವಿ,ಲಂಬಿತಂ ॥ ೨–೭೩ ॥

ಈ ಮೇಲಿನ ವೃತ್ತಗಳ ಮೂರನೆ ಪಾದದ ಗೀರು ಹಾಕಿರುವ ಪಾಠಗಳ ಅರ್ಥದಲ್ಲಿ ಯಾವ ವ್ಯತ್ಯಾಸವೂ ಇಲ್ಲವೆಂಬುದು ಎಲ್ಲರಿಗೂ ತಿಳಿದದ್ದೆ. ಆದರೆ ೨೦೦೭ರ ಪ್ರಿಂಟ್‌ಪಾರ್ಕ್ ಮುದ್ರಣದಲ್ಲಿ ಮೇಲಣ ಮೂರನೆ ಪಾದ 'ಪ್ರಭುಕವೀಂದ್ರ' 'ಸಹಾಯನಿನಾದುದಿಂ' ಎಂದು ಮಾರ್ಪಟ್ಟಿರುವುದನ್ನು

ವಿದ್ಯಾರ್ಥಿಗಳಿಗೆ, ಅಧ್ಯಾಪಕರಿಗೆ ಮತ್ತು ಅಧ್ಯಯನಕಾರರಿಗೆ ಎಂದ ಜನಪ್ರಿಯ ವೃತ್ತಿಯಲ್ಲಿ ಅವರೆಲ್ಲರೂ ತಪ್ಪದೆ ಗಮನಿಸಬಹುದು. ಅಷ್ಟೆ ಅಲ್ಲ. ಈ ವೃತ್ತದ ಸಂಬಂಧವಾಗಿ ಗ್ರಂಥಸಂಪಾದಕರಾದ ಡಾ॥ ಟಿ. ವಿ. ವೆಂಕಟಾಚಲ ಶಾಸ್ತ್ರೀ ಅವರು ಮಾಡಿರುವ ವಿವರಣೆ ವಿದ್ವಾಂಸರ ಮನಸ್ಸಿಗೆ ಬಹು ವ್ಯಾಕುಲವನ್ನುಂಟು ಮಾಡುತ್ತದೆ. ನೋಡಿ : **'ಗಜಗಮನೆ'**, ಪಾದದಲ್ಲಿ ನಗಣ ಭಗಣ ಭಗಣ ರಗಣಗಳು ಸೇರಿರಲು, ಯತಿ ರಂಧ್ರದಲ್ಲಿ (೯ನೆಯ ಅಕ್ಷರಸ್ಥಾನದಲ್ಲಿ) ಶುಭಪ್ರದವಾಗಿ ನಿಂತಿರಲು, ಹೀಗೆ **ಪ್ರಭುಗಳ, ಕವಿಶ್ರೇಷ್ಠರ ಸಹಾಯಕನಾದ ನಾಗವರ್ಮನಿಂದ ದ್ರುತ ಎಂಬ ಮಾತು ಹಿಂದೆ ಬರುವ** ವಿಲಂಬಿತ (ದ್ರುತವಿಲಂಬಿತ) ಎಂಬ ವೃತ್ತವಾಯಿತು. 'ಪ್ರಭುಕವೀಂದ್ರ' ಸಮಸ್ತಪದದ ಅರ್ಥವನ್ನು ಪ್ರಭುಗಳ, ಕವಿಶ್ರೇಷ್ಠರ ಸಹಾಯಕನೆಂದು ನಾಗವರ್ಮನು ತನ್ನನ್ನು ಹೆಮ್ಮೆಪಟ್ಟುಕೊಂಡಿರುವನೆಂಬ ವಿವರಣೆ ನಾಗವರ್ಮನ ವ್ಯಕ್ತಿತ್ವಕ್ಕೆ ಕುಂದು ತರುವಂಥದು. ಕಿಟ್ಟೆಲ ಮತ್ತು ಕುಕ್ಕಿಲ ಕೃಷ್ಣಭಟ್ಟರ 'ಪ್ರಭುಕವೀಂದ್ರ' ಏಕವಚನದ ಪಾಠದ ಆಶಯವನ್ನು ಇಲ್ಲಿ ಬಹುವಚನಕ್ಕೆ ತಿರುಚಿ ಅರ್ಥೈಸಿರುವುದು ಎದ್ದುಕಾಣುತ್ತದೆ. ಈ ವಿವರಣೆ ಅಧ್ಯಾಪಕರ ಮಾತು ಬೇಡ, ಜಾಣರಾದ ವಿದ್ಯಾರ್ಥಿಗಳ ಮತಿಗೆ ಹಿಡಿದ ಕೈಗನ್ನಡಿಯೆ ?

ಈ ವೃತ್ತವನ್ನು ನಾಗವರ್ಮನೇ ಸ್ಪಷ್ಟವಾಗಿ 'ದ್ರುತಪೂರ್ವವಿಲಂಬಿತ' ಎಂದಿರುವ ಹೆಸರ ನಡುವಣ 'ಪೂರ್ವ' ಪದವನ್ನು ಪ್ರಾಚೀನರಾಗಲಿ, ಆಧುನಿಕರಾಗಲಿ ಏಕೆ ಲೋಪಗೊಳಿಸಿದರು ? ಅಂಥ ದೋಷಯುಕ್ತ ಪಾಠವನ್ನು ಉಳಿಸಿಕೊಂಡದ್ದಕ್ಕೆ ತಮ್ಮ ನವೀನ ಗ್ರಂಥಸಂಪಾದನ ಗ್ರಂಥದಲ್ಲಿ ಎಡೆಕೊಡಬಹುದೆ ? ಹಿಂದೆ ಆದ ತಪ್ಪನ್ನು ಸರಿಯೆಂದು 'ಅಕ್ರಮವನ್ನು ಸಕ್ರಮಗೊಳಿಸುವ ನೀತಿ ಸಾಹಿತ್ಯ ಕ್ಷೇತ್ರಕ್ಕೆ, ಪಂಡಿತವರ್ಗಕ್ಕೆ, ಸರಸ್ವತಿಗೆ ಸಮ್ಮತವೆ ? ವಸ್ತುನಿಷ್ಠ ಗ್ರಂಥಸಂಪಾದನೆ ಶಾಸ್ತ್ರೀಯ, ಹಾಗಲ್ಲದುದು ಅಶಾಸ್ತ್ರೀಯ ತಾನೆ ? ಈ ವೃತ್ತ ರಚನೆಯಲ್ಲಿ ಸಂಬೋಧನೆಯಿಲ್ಲ ; ಇದ್ದಿದ್ದರೆ ಅರಿ, ತಿಳಿ, ಕೇಳ ಇತ್ಯಾದಿ ಕ್ರಿಯಾಪದಗಳಿರಬೇಕಾಗಿದ್ದಿತು. ಹಾಗಿರುವಾಗ ಕಿಟ್ಟೆಲರ ಎಣಿಕೆಯಲ್ಲಿ 'ತಿಭ'–ಗತೀ (ಇಭ ಮತ್ತು ಗತೀ) ಎಂದೆ ಬಿಡಿಸಿಕೊಂಡಿರುವ ಸಮಸ್ತ ಪದವೇ ತಿಭಗತೀ (ಇಭಗತೀ) ಪದ. ಸಮಸ್ತಪದದ ಅರ್ಥದಲ್ಲಿ ಅದು ಬಳಕೆಗೊಂಡಿಲ್ಲ. ಇಲ್ಲಿ ಸಾಂಕೇತಿಕಾರ್ಥದಲ್ಲಿ ವ್ಯಕ್ತಿನಾಮವಾಗಿ ಬಳಸಿರುವ ಕಲ್ಪಿತ ನಾಮವೇ 'ಇಭ'ವೆಂಬುದು. ಗಜ ಎಂಬುದು ಶಬ್ದಾರ್ಥ, ಅದರ ಏಕಾರ್ಥದ 'ನಾಗ'ಪದ ನಾಗವರ್ಮವ್ಯಕ್ತಿನಾಮ ಪ್ರತೀಕ. ಗತೀ ಶಬ್ದ ಜ್ಞಾನಾರ್ಥ ಪ್ರಯೋಗವೇ ಹೊರತು ಕೇವಲ ನಡೆಯೆಂಬ ಕ್ರಿಯಾರ್ಥದಲ್ಲಿ ಬಳಸಿದಪದವಲ್ಲ. ಸಂಶೋಧಕನಿರಲಿ ಸಂಪಾದಕನಾದವನಿಗೆ ತಾನು ಯಾವ ಧರ್ಮೀಯನಾದವನ ಗ್ರಂಥವನ್ನು ತಾನು ಸಂಪಾದಿಸುತ್ತಿದ್ದೇನೆ ಎಂಬುದರ ಸಾಮಾನ್ಯ ತಿಳಿವಳಿಕೆ ಇದ್ದೇ ಇರಬೇಕು. ಇಲ್ಲದಿದ್ದರೆ ಅರ್ಥ ಅನರ್ಥವಾಗುವುದು ಸಹಜ. ಮೇಲಣ ವೃತ್ತದಲ್ಲಿ ಪ್ರಯೋಜನವಾಗಿರುವ

'ಪೂರ್ವ' ಎಂಬ ಪದ ನಾಗವರ್ಮನ ಹುಟ್ಟು ಧರ್ಮವಾದ ಜೈನಧರ್ಮದ ಪಾರಿಭಾಷಿಕ ಪದ. ತನ್ನ ತತ್ಕಾಲದ ಅಸ್ತಿತ್ವದ ಧರ್ಮಚಿಂತನೆಯ ಸೂಕ್ಷ್ಮವಿಚಾರವನ್ನು ನಾಗವರ್ಮನು ಇಲ್ಲಿ 'ಇಭಗತೀ' ಮತ್ತು 'ಪೂರ್ವವಿಲಂಬಿತ' ಗೂಢಪದಪ್ರಯೋಗಗಳಿಂದ ಪ್ರಕಟಿಸಿದ್ದಾನೆ. ಉದಯಾದಿತ್ಯ ಗುರುವಿನಿಂದ ತಾನು ಶಿವತತ್ತ್ವೋಪದೇಶವನ್ನು ಹೊಂದಿದ ಬಳಿಕ ಆ ತನ್ನ ಮೂಲ ಧರ್ಮದಿಂದ ತಾನು ಹಿಂದೆ ಸರಿದವನೆಂಬ ಜ್ಞಾನವನ್ನು ಪ್ರಕಟಿಸಿರುವ ಪದವೆ 'ದ್ರುತಪೂರ್ವವಿಲಂಬಿತ' ಪದ ಪ್ರಯೋಗ. ಪ್ರಾಚೀನ ಜೈನಧರ್ಮವೆ ಪೂರ್ವಗತ ಧರ್ಮ. ಅದೆ 'ಪೂರ್ವ'ವೆಂದು ಬಳಕೆಗೊಂಡ ಪದ ಎಂಬ ಅರಿವು ಗ್ರಂಥ ಸಂಪಾದಕನಿಗಿದ್ದ ಹೊರತು ಕಾವ್ಯ ಪ್ರಯೋಗ ಅರ್ಥವಾಗದು ಎಂಬುದಕ್ಕೆ ಮೇಲಣ ಡಾ|| ಟಿ. ವಿ. ವೆಂಕಟಾಚಲಶಾಸ್ತ್ರೀ ಅವರ ವಿವರಣೆಯೇ ಸಾಕ್ಷಿ.

ನಿರಹಂಭಾವದ ನಿರ್ಮಮತೆಯ ಸತ್ಯಶುದ್ಧ ಕಾಯಕ
ಸಾಹಿತ್ಯಜ್ಞರಾದ ನಮ್ಮದಾಗಲಿ

ಸಮೃದ್ಧಿ ಸತ್ಯಸಾಧನೆಗೆ ಹಾದಿ
ಓಂ ತತ್ ಸತ್

ಪ್ರತಿಕ್ರಿಯೆ :

ಉದಯಾದಿತ್ಯ–ನಾಗವರ್ಮ ಈ ಇಬ್ಬರು ಕವಿಗಳ ಗ್ರಂಥಗಳ ಆಳವಾದ ಅಧ್ಯಯನದಿಂದ, ಪ್ರೊ|| ಮಹಾದೇವಪ್ಪ. ಸಿ. ಅವರು ತಮ್ಮ ಅಸಾಮಾನ್ಯ ಸಂಶೋಧಕ ಚಾತುರ್ಯದಿಂದ, ಮತ್ತು ತಕ್ಕ ಆಧಾರಗಳ ಮೂಲಕ ನಾಗವರ್ಮನು ಒಬ್ಬನೇ ಎಂಬ ತೀರ್ಮಾನಕ್ಕೆ ಬಂದಿದ್ದಾರೆ. 'ಕಾವ್ಯ ಏವ ಕವಿಚರಿತೆ' ಎಂಬ ತಮ್ಮ ಪುಸ್ತಕದಲ್ಲಿ ಈ ವಿಚಾರವಾಗಿ ಸಂಪೂರ್ಣವಾದ ಸಾಕ್ಷ್ಯಗಳನ್ನು ಒದಗಿಸಿದ್ದಾರೆ.ಅವರು ಈ ಸಂಶೋಧನೆಯಲ್ಲಿ ತೋರಿರುವ ತೀಕ್ಷ್ಣ ಬುದ್ಧಿಯು ಆಳವಾದ ಸಂಶೋಧಕರಿಗೆ ಮಾತ್ರ ಸಿದ್ಧಿಸುತ್ತದೆ. ಈ ಸಂಶೋಧನೆಯು 'ಇಬ್ಬರು ನಾಗವರ್ಮರು' ಎಂಬ ಭ್ರಮೆಯನ್ನು ತೊಲಗಿಸಿಬಿಡುತ್ತದೆ. ಕನ್ನಡ ವಿದ್ವಾಂಸರು ಈ ಸಂಶೋಧನೆಗೆ ತಕ್ಕಷ್ಟು ಪ್ರಾಧಾನ್ಯವನ್ನು ಕೊಟ್ಟು ಅವರ ತೀರ್ಮಾನದ ಪ್ರಾಧಾನ್ಯವನ್ನು ಒಪ್ಪಿಕೊಳ್ಳಬೇಕೆಂದು ನಾನು ಮನಸಾ ಹಾರೈಸುತ್ತೇನೆ. ಈ ಸಂಶೋಧನೆಯ ಸೂಕ್ಷ್ಮ ದೃಷ್ಟಿಗೆ ತಕ್ಕ ಮನ್ನಣೆಯೂ ದೊರೆಯಬೇಕು.

–ಪ್ರೊ|| ಜಿ. ವೆಂಕಟಸುಬ್ಬಯ್ಯ

ಕರ್ನಾಟಕ ಲೋಚನ
ಸಂಪುಟ ೨೬, ಸಂಚಿಕೆ ೧-೨
ಜನವರಿ-ಡಿಸೆಂಬರ್

೧೦. ಸಿದ್ಧವನದಲ್ಲಿ ಸಾರ್ಥಕತೆ ಕಂಡ ರಾಷ್ಟ್ರೀಯ ಹಸ್ತಪ್ರತಿ ಸಮಾವೇಶ

-ಡಾ|| ಕೆ.ಎಸ್.ಎನ್. ಉಡುಪ

ವಿಶ್ವವಿದ್ಯಾಲಯಗಳಿಂದ ಮರೆಯಾಗುತ್ತಿದ್ದ ಗ್ರಂಥ ಸಂಪಾದನ ಶಾಸ್ತ್ರಕ್ಕೆ ಜೀವ ತುಂಬಿ ಅದನ್ನು ಹಸ್ತಪ್ರತಿ ಶಾಸ್ತ್ರದೊಂದಿಗೆ ಉಳಿಸಿ ಬೆಳೆಸಿದವರು ಪ್ರೊ|| ಎಂ. ವಿ. ಸೀತಾರಾಮಯ್ಯನವರು. ಅವರ ಜನ್ಮ ಶತಮಾನೋತ್ಸವದ ಅಂಗವಾಗಿ ರಾಜ್ಯದ ಹಲವೆಡೆ 'ಹಸ್ತಪ್ರತಿ ಅಧ್ಯಯನ ಶಾಸ್ತ್ರ'ದ ರಾಷ್ಟ್ರೀಯ ವಿಚಾರಗೋಷ್ಠಿಗಳನ್ನು ನಡೆಸುತ್ತಾ ಬಂದಿದ್ದು, ಇದೀಗ ಸಿದ್ಧವನ ಗುರುಕುಲ ಉಜಿರೆಯಲ್ಲಿ ಪ್ರಥಮ ಹಸ್ತಪ್ರತಿ ಸಮಾವೇಶವನ್ನು ಏರ್ಪಡಿಸಲಾಯಿತು.

ಬೆಂಗಳೂರಿನ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಉಜಿರೆಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಸ್ವಾಯತ್ತ ಕಾಲೇಜಿನ ಡಾ|| ಹಾ.ಮಾ.ನಾ. ಸಂಶೋಧನ ಕೇಂದ್ರ ಮತ್ತು ಕನ್ನಡ ವಿಭಾಗದ ಸಹಯೋಗದಲ್ಲಿ ಸುಪ್ರಸಿದ್ಧ ಹಸ್ತಪ್ರತಿ ವಿದ್ವಾಂಸ ಬಿ.ಎಸ್. ಸಣ್ಣಯ್ಯನವರ ಸರ್ವಾಧ್ಯಕ್ಷತೆಯಲ್ಲಿ ಮಾರ್ಚ್೨೬ ರಂದು ಈ ಸಮಾವೇಶ ಜರಗಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಅವರು- 'ಅಳಿವಿನಂಚಿನಲ್ಲಿರುವ ಎಲ್ಲಾ ಹಳೆಯ ಗ್ರಂಥ, ಹಸ್ತಪ್ರತಿಗಳನ್ನು ಒಂದೆಡೆ ಸಂಗ್ರಹಿಸುವ ಮೂಲಕ ಅವುಗಳ ಪ್ರಕಟಣೆ, ಪರಿಷ್ಕರಣೆಗೆ ಯೋಜನೆ ರೂಪಿಸಬೇಕು. ಈ ಪ್ರಯುಕ್ತ ಕೇಂದ್ರ ಹಸ್ತಪ್ರತಿ ಭಂಡಾರ ಸ್ಥಾಪನೆ ಅಗತ್ಯ' ಎಂದು ಹೇಳಿದರು. ಇನ್ನೊಬ್ಬ ಹಿರಿಯ ವಿದ್ವಾಂಸ ಎನ್. ಬಸವಾರಾಧ್ಯರು-ಹಸ್ತಪ್ರತಿಗಳು ಯಾರಲ್ಲೇ ಇರಲಿ, ಎಲ್ಲೇ ಇರಲಿ ಅವು ರಾಷ್ಟ್ರೀಯ ಸೊತ್ತುಗಳು, ಲಭ್ಯವಿರುವವುಗಳನ್ನು ಉಳಿಸಿಕೊಳ್ಳಬೇಕಾದ್ದು ಅಗತ್ಯ ಆಗಬೇಕಾಗಿರುವ ಕೆಲಸ' ಎಂದು ಹೇಳಿದರು. ಆತಿಥೇಯ ಕಾಲೇಜಿನ ಪ್ರಾಚಾರ್ಯ ಡಾ|| ಬಿ. ಯಶೋವರ್ಮ ಹಸ್ತಪ್ರತಿ ಪ್ರದರ್ಶನದ ಉದ್ಘಾಟನೆ ಮಾಡಿದರು. ಪ್ರತಿಷ್ಠಾನದ ಕಾರ್ಯದರ್ಶಿ ಡಾ|| ನಾ. ಗೀತಾಚಾರ್ಯ, ಹಾಮಾನಾ ಸಂಶೋಧನ

ಕೇಂದ್ರದ ನಿರ್ದೇಶಕ ಡಾ॥ ಎಸ್. ಡಿ. ಶೆಟ್ಟಿ ವೇದಿಕೆಯಲ್ಲಿದ್ದರು.

ಉದ್ಘಾಟನಾ ಸಮಾರಂಭದ ಬಳಿಕ ಮೂರು ಗೋಷ್ಠಿಗಳಲ್ಲಿ, ನಾಡಿನ ವಿವಿಧ ಭಾಗಗಳಿಂದ ಬಂದಿದ್ದ ವಿದ್ವಾಂಸರುಗಳು ಪ್ರಬಂಧಗಳನ್ನು ಮಂಡಿಸಿದರು. ಮೊದಲ ಗೋಷ್ಠಿಯ ಅಧ್ಯಕ್ಷತೆಯನ್ನು ಡಾ॥ ವೈ. ಸಿ. ಭಾನುಮತಿಯವರು ವಹಿಸಿದ್ದು ವೇಮಗಲ್‌ಮೂರ್ತಿ, ಕೆ. ನರ್ಮದಾಂಬ, ಶ್ಯಾಮಲಾ ರತ್ನಕುಮಾರಿ, ಜಿ. ಕೆ. ದೇವರಾಜಸ್ವಾಮಿ, ವಿಘ್ನರಾಜ್ ಮತ್ತು ಡಾ॥ ನಾ. ಗೀತಾಚಾರ್ಯರು ಪ್ರಬಂಧಗಳನ್ನು ಮಂಡಿಸಿದರು. ಅಧ್ಯಕ್ಷರು 'ಜಲವಾಸ್ತು' ಹಸ್ತಪ್ರತಿಯ ಕುರಿತಾಗಿ ಪ್ರಬಂಧ ಮಂಡಿಸಿದರಲ್ಲದೇ ಈ ಗೋಷ್ಠಿಯಲ್ಲಿ ಮಂಡಿಸಿದ ಪ್ರಬಂಧಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ಅಪರಾಹ್ನ ನಡೆದ ಎರಡನೆಯ ಗೋಷ್ಠಿಯ ಅಧ್ಯಕ್ಷತೆಯನ್ನು ಡಾ॥ ಕೆ.ಎಸ್.ಎನ್. ಉಡುಪ ವಹಿಸಿದ್ದರು. ಪ್ರವೀಣಕುಮಾರ ಯಳಮಲಿ, ಉಷಾರಾಣಿ, ಸಂಧ್ಯಾ ವಿ., ಗಂಗಾಂಬಿಕೆ, ಸೈಯದ್ ಮೊಹಿನ್, ವೆಂಕಟೇಶ ಹಾಗು ಎಚ್. ಎನ್. ಚಿತ್ರಗಾರ ಇವರು ವಿವಿಧ ವಿಷಯಗಳ ಮೇಲೆ ತಾವು ಸಿದ್ಧಪಡಿಸಿದ್ದ ಪ್ರಬಂಧಗಳನ್ನು ವಾಚಿಸಿದರು. ಪ್ರಶ್ನೋತ್ತರದ ಬಳಿಕ ಅಧ್ಯಕ್ಷರು ' ಮುದ್ರಾಮಂಜೂಷದ ವಿವಿಧ ಹಸ್ತಪ್ರತಿಗಳ ಅಧ್ಯಯನ'ದ ಬಗೆಗಿನ ತಮ್ಮ ಪ್ರಬಂಧವನ್ನು ಮಂಡಿಸಿ, ಅಧ್ಯಕ್ಷತೆಯ ನೆಲೆಯಲ್ಲಿ ಪ್ರೋತ್ಸಾಹಕ ಮಾತುಗಳನ್ನಾಡಿದರು.

ಪ್ರೊ॥ ಜಿ. ಅಶ್ವತ್ಥನಾರಾಯಣರ ಅಧ್ಯಕ್ಷತೆಯಲ್ಲಿ ಮೂರನೆಯ ಗೋಷ್ಠಿ ನಡೆದಿದ್ದು, ಬಿ. ರಾಜಶೇಖರಪ್ಪ, ಪಿ. ವಿ. ಕೃಷ್ಣಮೂರ್ತಿ, ಸೋಮಶೇಖರ್ ವಿ., ಸುಂಕಂ ಗೋವರ್ಧನ, ಎಂ. ನರಸಿಂಹಮೂರ್ತಿ ಮೊದಲಾದವರು ಪ್ರಬಂಧ ಮಂಡನೆ ಮಾಡಿದರು.

ಸಮಾರೋಪ ಸಮಾರಂಭದಲ್ಲಿ ಸಮಾವೇಶದ ಸರ್ವಾಧ್ಯಕ್ಷತೆ ವಹಿಸಿದ್ದ ಬಿ. ಎಸ್. ಸಣ್ಣಯ್ಯ ಹಾಗೂ ಹಿರಿಯ ವಿದ್ವಾಂಸ ಎನ್. ಬಸವಾರಾಧ್ಯರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮ ಸಂಘಟನೆಯ ರೂವಾರಿ, ಆತಿಥೇಯ ಕಾಲೇಜಿನ ಪ್ರಾಚಾರ್ಯ ಡಾ॥ ಬಿ. ಯಶೋವರ್ಮರನ್ನು ಬಿ.ಎಂ.ಶ್ರೀ. ಪ್ರತಿಷ್ಠಾನದ ವತಿಯಿಂದ ಗೌರವಿಸಲಾಯಿತು.

ಇದೇ ಸಂದರ್ಭದಲ್ಲಿ ಏರ್ಪಡಿಸಲಾಗಿದ್ದ ಅಪೂರ್ವ ಹಸ್ತಪ್ರತಿಗಳ ಪ್ರದರ್ಶನ, ಪೂರಕ ವಿಷಯಗಳ ಪುಸ್ತಕ ಪ್ರದರ್ಶನ ಮತ್ತು ಮಾರಾಟ ವ್ಯವಸ್ಥೆಯು ಕಾರ್ಯಕ್ರಮದ ಆಶಯಕ್ಕೆ ಅನುಗುಣವಾಗಿದ್ದವು.

ಪ್ರಾಚೀನ ಹಸ್ತಪ್ರತಿಗಳ ಸಂಗ್ರಹ, ರಕ್ಷಣೆ ಹಾಗೂ ಸಂಶೋಧನೆಗಳ ಬಗ್ಗೆ ಅಪಾರ ಕಾಳಜಿಯಿರುವ ಧರ್ಮಸ್ಥಳದ ಧರ್ಮಾಧಿಕಾರಿ ಡಾ॥ ಡಿ. ವೀರೇಂದ್ರ ಹೆಗ್ಗಡೆಯವರ ಮಾರ್ಗದರ್ಶನದಲ್ಲಿ, ಎಸ್.ಡಿ.ಎಂ. ಕಾಲೇಜಿನ ಪ್ರಾಚಾರ್ಯರ ಉತ್ಸಾಹೀ ನೇತೃತ್ವದಲ್ಲಿ ಕನ್ನಡ ವಿಭಾಗದ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು,

ಸ್ವಯಂ ಸೇವಕರಾಗಿ ನೀಡಿದ ಊಟೋಪಚಾರ ಗಮನ ಸೆಳೆಯುವಂತಿತ್ತು. ಸಮಾವೇಶದಲ್ಲಿ ಭಾಗವಹಿಸಿದ್ದ ಆಸಕ್ತ ವಿದ್ಯಾರ್ಥಿಗಳ ಸಂಖ್ಯೆ, ಹಸ್ತಪ್ರತಿ ಅಧ್ಯಯನ ಕ್ಷೇತ್ರದ ಭವಿಷ್ಯದ ದೃಷ್ಟಿಯಿಂದ ಭರವಸೆ ಮೂಡಿಸುವಂತಿತ್ತು.

ಹಸ್ತಪ್ರತಿಗಳಲ್ಲಿ ದೊರಕುವ ವಿವರಗಳಿಂದಲೇ ಸಾಹಿತ್ಯ, ಸಂಸ್ಕೃತಿ, ಇತಿಹಾಸ, ವಿವಿಧ ಶಾಸ್ತ್ರಗಳನ್ನು ಅಂತರ್‌ಶಾಸ್ತ್ರೀಯ ನೆಲೆಯಿಂದ ಅಧ್ಯಯನ ಮಾಡುವುದು, ಹಾಗೆಯೇ ಬಹುಮುಖೀ ಅಧ್ಯಯನದಿಂದ ರೂಪುಗೊಂಡ ಹಸ್ತಪ್ರತಿ ಸಾಹಿತ್ಯಕ್ಕೊಂದು ಶಾಸ್ತ್ರದ ಚೌಕಟ್ಟನ್ನು ನೀಡುವುದು, ಈ ವಿಚಾರಗಳಿಗೆ ನಾಡಿನಾದ್ಯಂತ ಜಾಗೃತಿ ಮೂಡಿಸಲು ಪ್ರಯತ್ನಿಸುವುದು–ಈ ಸಮಾವೇಶದ ಉದ್ದೇಶವಾಗಿದ್ದು, ಇಲ್ಲಿ ಅದು ಸಫಲತೆಯ ದಿಕ್ಕಿನೆಡೆ ಸಾಗಿದೆಯೆಂದು ಧಾರಾಳವಾಗಿ ಹೇಳಬಹುದಾಗಿದೆ.

ಎಂ. ವಿ. ಸೀತಾರಾಮಯ್ಯನವರು ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದಲ್ಲಿ ಆರಂಭಿಸಿದ್ದ 'ಹಸ್ತಪ್ರತಿ ಶಾಸ್ತ್ರ'ವೆಂಬ ನೂತನ ಸಂಶೋಧನ ಕ್ಷೇತ್ರವನ್ನು ಮುನ್ನಡೆಸಿದವರು ಡಾ॥ ನಾ. ಗೀತಾಚಾರ್ಯರು. ಕಳೆದ ಇಪ್ಪತ್ತೆಂಟು ವರ್ಷಗಳಿಂದ ಪ್ರತಿಷ್ಠಾನದ ಸಂಪರ್ಕದಲ್ಲಿದ್ದು ಗ್ರಂಥ ಸಂಪಾದನೆ, ಹಸ್ತಪ್ರತಿಶಾಸ್ತ್ರ ವಿಚಾರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಈ ಕುರಿತಾದ ಗ್ರಂಥಗಳಿಗೆ ಸಂಪಾದಕೀಯ ಸಹಾಯ, ಪೂರ್ವಸಿದ್ಧತೆ, ಪ್ರಕಟಣ ಜವಾಬ್ದಾರಿ ಜೊತೆಯಲ್ಲಿ ಇದೇ ಶಾಸ್ತ್ರ ತರಗತಿಗಳಲ್ಲಿ ಅಧ್ಯಾಪಕರಾಗಿ ದುಡಿದವರು. ಎಂ.ವಿ.ಸೀ.ಯವರ ನೂರನೆಯ ಜನ್ಮದಿನದ ಸಂದರ್ಭದಲ್ಲಿ ಗೀತಾಚಾರ್ಯರು ಹೊರತಂದ 'ಹಸ್ತಪ್ರತಿ ಅಧ್ಯಯನ ಶಾಸ್ತ್ರ' ಹೊತ್ತಿಗೆಯು ಈ ಕ್ಷೇತ್ರದ ಸಮಗ್ರ ಮಾಹಿತಿಗಳನ್ನೊಳಗೊಂಡ ಒಂದು ದಿಕ್‌ಸೂಚಿ ಗ್ರಂಥವಾಗಿದೆ. ಕಣ್ಮರೆಯಾಗುತ್ತಿರುವ ಪ್ರಾಚೀನ ಓಲೆಗರಿ–ಕಾಗದದ ಹಸ್ತಪ್ರತಿಗಳ ಸಂಗ್ರಹ–ಸಂರಕ್ಷಣೆ ಬಗ್ಗೆ ಆಸಕ್ತಿಯಿರುವ ಪ್ರತಿಯೊಬ್ಬರೂ ಗಮನಿಸಬೇಕಾದ ಪುಸ್ತಕವಿದು.

ಗಂಧ ಹಚ್ಚಿ ಪೂಜೆಗೆ ಮಾತ್ರ ಅರ್ಹವೆಂದು ಭಾವಿಸಲಾಗುವ ಓಲೆಗರಿ ಗ್ರಂಥಗಳು ಅಧ್ಯಯನಕ್ಕೆ ಯೋಗ್ಯವಾದವು ಎಂಬ ಭಾವನೆ ಜಾಗ್ರತೆಯಾಗಬೇಕಾದ ಈ ಸಂದರ್ಭದಲ್ಲಿ ಕೇಂದ್ರ ಸರಕಾರದ ಮಟ್ಟದಲ್ಲಿ ರಾಷ್ಟ್ರೀಯ ಹಸ್ತಪ್ರತಿ ಮಿಶನ್ ರೂಪುಗೊಂಡಿದ್ದು, ೨೦೦೫ ರಲ್ಲಿ ರಾಷ್ಟ್ರೀಯ ಹಸ್ತಪ್ರತಿ ರಕ್ಷಣಾ ಅಭಿಯಾನ ನಡೆದಿತ್ತು. ಹಸ್ತಪ್ರತಿಗಳ ವಿಚಾರದಲ್ಲಿ ಭಾರತದಲ್ಲೇ ಅತ್ಯಧಿಕ ಹಾಗೂ ವ್ಯವಸ್ಥಿತ ಕೆಲಸ ನಡೆದಿರುವುದು ಕರ್ನಾಟಕದಲ್ಲಿ. ಹಸ್ತಪ್ರತಿ ಸೂಚಿಗಳ ನಿರ್ಮಾಣ ಕಾರ್ಯದಲ್ಲಿಯೂ ಕರ್ನಾಟಕವೇ ಮುಂಚೂಣಿಯಲ್ಲಿದೆ. ಇಂತಹ ಸಮಾವೇಶಗಳು ಇನ್ನಷ್ಟು ಯುವಕ, ಯುವತಿಯರನ್ನು ಇತ್ತ ಆಕರ್ಷಿಸುವಲ್ಲಿ ಯಶಸ್ವಿಯಾಗಲಿ–ಎಂದು ಹಾರೈಸುತ್ತೇನೆ.

■

ಕರ್ನಾಟಕ ಲೋಚನ
ಸಂಪುಟ ೨೬, ಸಂಚಿಕೆ ೧-೨
ಜನವರಿ-ಡಿಸೆಂಬರ್

೧೧. ಲಿಂ. ಟಿ. ಎನ್. ಮಹಾದೇವಯ್ಯನವರ ಬದುಕು-ಬರಹ

-ಹೀ. ಚಿ. ಶಾಂತವೀರಯ್ಯ

ಮುನ್ನುಡಿ : ತುಮಕೂರು ಜಿಲ್ಲೆ ಕರ್ನಾಟಕದಲ್ಲಿ ತನ್ನದೇ ಆದ ಸ್ವಂತಿಕೆಯಿಂದ ಪ್ರಸಿದ್ಧವಾಗಿದೆ. ಭೌಗೋಳಿಕವಾಗಿ ಅದು ಮಧ್ಯಮದಲ್ಲಿದೆ. ತುಮಕೂರು, ಕುಣಿಗಲ್, ಗುಬ್ಬಿ, ತುರುವೇಕೆರೆ, ತಿಪಟೂರು, ಚಿಕ್ಕನಾಯಕನಹಳ್ಳಿ, ಸಿರಾ, ಪಾವುಗಡ, ಮಧುಗಿರಿ ಮತ್ತು ಕೊರಟಿಕೆರೆಗಳಿವೆ. ಪ್ರತಿಯೊಂದು ತಾಲ್ಲೂಕ ತನ್ನದೇ ಇತಿಹಾಸ ಹೊಂದಿದೆ.

ಕೊರಟಿ (ಜೌಪದ ಸಸ್ಯ) ಕೆರೆ. ಅದರ ಆಗರವೇ ಸಿದ್ಧರ ಬೆಟ್ಟ. ಗುಬ್ಬಿ ತನ್ನದೇ ಇತಿಹಾಸ ಹೊಂದಿದೆ. ಪರಶಿವ ಕುಣಿದ ಊರೇ ಕುಣಿಗಲ್. ಅವನ ಕುಣಿತಕ್ಕೆ ತು(ಮ)ಮುರು ಬಾರಿಸಿದವರೇ (=ಡಮರು) ತುಮಕೂರಿನವರು.

ತುಮಕೂರು ಪ್ರದೇಶದಲ್ಲಿ ತೆಂಗು, ಕವುಂಗು, ಮಾವು, ಮಲ್ಲಿಗೆಗಳು ಪ್ರಸಿದ್ಧ. ಗುಬ್ಬಿಯ ಮಾವು ಭಾರತದಲ್ಲಿಯೇ ವಿಶೇಷವಾದುದು.

ತುಮಕೂರು ಜಿಲ್ಲೆ ಸಾಹಿತ್ಯ, ಜನಪದ, ಕಲೆಗಳಲ್ಲಿ ಮುಂದು. ಮೂಡಲಪಾಯ ಯಕ್ಷಗಾನದ ಕೇಂದ್ರ. ಜನಪದದ ಸೊಗಡು ಜಾಸ್ತಿ (ನಾನೇ ಮಾಡಿದ್ದೇನೆ. ಜನಪದ ಗೀತೆ, ನಿಘಂಟು) ಸಾಹಿತ್ಯದಲ್ಲಿ ತುಮಕೂರಿಗೆ ಹೆಚ್ಚಿನ ಪ್ರಶಸ್ತಿ.

ಪುರದ ನಾಗಣ್ಣ ಶರಣವಚನಕಾರರು (೧೧೬೦) ಅಮರಗುಂಡದ ಮಲ್ಲಿಕಾರ್ಜುನ ಅಂಕಿತ (೧೦ ವಚನ), ತೋಂಟದ ಸಿದ್ಧಲಿಂಗೇಶ್ವರರು (ನೂರೊಂದು ವಿರಕ್ತರು) ಗುರು ವಚನಕಾರರು (೧೪೩೦), ಗುಬ್ಬಿಯ ಮಲ್ಲಣ್ಣ 'ಗಣಭಾಷಿತ ರತ್ನಮಾಲೆ' ಎಲ್ಲ ಸಂಪಾದನೆಗಳಿಗೆ ಮೂಲ. ವಾತೂಲಾಗಮಟೀಕೆ (೧೫೦೦), ಮಲ್ಲಣಯ ಭಾವಚಿಂತಾರತ್ನ, ವೀರಶೈವಾಮೃತ ಪುರಾಣ (೧೮೦೦ ಶ್ಲೋಕ) (೧೫೦೦), ಇವರ ಮಗ ಶಾಂತೀಶ. ತೋಂಟದ ಸಿದ್ಧೇಶ್ವರ ಪುರಾಣ (೧೫೩೦) ಹೊನ್ನಾವಳ್ಳಿ ಗೌರಾಂಕ ಮೊಳಿಗಯ್ಯ ಪುರಾಣ (೧೬೦೦), ಗೂಳೂರು

ಸಿದ್ಧವೀರಶರ್ಮ(೧೫೦೫). ಶೂನ್ಯ ಸಂಪಾದನೆ, ಇಮ್ಮಡಿ ಚಿಕ್ಕಭೂಪಾಲ. (೧೬೦೦). ಬಿಜ್ಜಾವರದವರು, ನಿಟ್ಟೂರು ನಂಜಮ್ಮ (೧೬೦೦). ಶಬ್ದಮಣಿದರ್ಪಣಕ್ಕೆ ಟೀಕು, ಮತ್ತೂರಿನ ನಂಜುಂಡ ಶಿವಯ್ಯ (೧೬೮೦). ನಿಡುಗಲ್ಲಿನ ಚೆನ್ನಪ್ಪ. ಶರಣ ಲೀಲಾಮೃತ (೧೭೦೦), ಹಳಬರದಿ ವೆಂಕಟನಾರಾಯಣಪ್ಪನವರು (೧೮೦೦), ಬೆಳ್ಳಾವೆಯ ಚಿದಂಬರಯ್ಯ ಹೊಸಕೆರೆಯವರು. ತೀ.ನಂ.ಶ್ರೀ, ಕೆ. ಎಸ್. ಧರಣೇಂದ್ರಯ್ಯ, ಬಿ. ಶಿವಮೂರ್ತಿಶಾಸ್ತ್ರಿ, ಕ. ವೆಂ. ರಾಘಾಚಾರ್, ಕೆ. ವೆಂಕಟರಾಮಪ್ಪ, ಗುಬ್ಬಿ ವೀರಣ್ಣ, ಸಿ. ಬಿ. ಮಲ್ಲಪ್ಪ, ಜಿ. ಎಸ್. ಸಿದ್ಧಲಿಂಗಯ್ಯ. ಪ್ರೊ. ರಾಚಪ್ಪ, ಹೀ. ಚಿ. ಶಾಂತವೀರಯ್ಯ, ಡಾ॥ ದೊಡ್ಡರಂಗೇಗೌಡರು, ಪ್ರಧಾನ ಗುರುದತ್ತ, ಡಾ॥ ಪಿ. ವಿ. ನಾರಾಯಣ ಅವರು ಈ ಜಿಲ್ಲೆಯವರು. ಸಿದ್ಧಗಂಗೆಯ ಸಿದ್ಧಿರಾದ ಶ್ರೀ ಶಿವಕುಮಾರ ಸ್ವಾಮಿಜಿಯವರು ಬೆಂಗಳೂರು ಜಿಲ್ಲೆಯ ಮಾಗಡಿ ತಾಲ್ಲೂಕು ವೀರಾಪುರದವರು. ಬಿ.ಎಂ.ಶ್ರೀ ಅವರ ತಾಯಿಮನೆ ಸಂಪಿಗೆ.

ಹೀಗೆ ತುಮಕೂರು ಜಿಲ್ಲೆ ಸಾಹಿತ್ಯ ಕ್ಷೇತ್ರದಲ್ಲಿ ಫಲವತ್ತತೆಯನ್ನು ಪಡೆದಿದೆ, ಫಲವತ್ತಾದ ಭೂಮಿಯಲ್ಲಿ ಏನೇ ಬಿತ್ತಿದರೂ ಫಲ ನೀಡುವಂತೆ ತುಮಕೂರು ಪರಿಸರದ ಸಾಹಿತಿಗಳು ನೀಡಿದ್ದಾರೆ. ಮಲ್ಲಣ್ಣ, ಮಲ್ಲಶರ್ಮ, ಶಾಂತೀಶ, ವಿರಕ್ತ ತೋಂಟದಾರ್ಯ, ಸಿದ್ಧವೀರನ್ನೊಡೆಯರು ವಚನ ಸಂಕಲನವನ್ನು ಮಾಡಿದರು. ಶೂನ್ಯ ಸಂಪಾದನೆ ತುಮಕೂರಿನ ಮನೆ ಮನೆಯ ಸ್ವತ್ತು. ಹೀಗಾಗಿ. ಶ್ರೀ. ಟಿ. ಎನ್. ಮಹದೇವಯ್ಯನವರು ತಮ್ಮ ಹಿಂದಿನ ವಚನರಾಶಿಯನ್ನು ಅಧ್ಯಯನ ಮಾಡಿದ್ದರು.

ವಚನಗಳ ಸಂಖ್ಯೆಯ ಪವಾಡ, ಅಲ್ಲಮ್ಮ ಎರಡೆಂಬತ್ತು ಕೋಟಿ, ಅಪ್ಪಮ್ಮ (ಬಸವಮ್ಮ) ೪,೩೬ ಸಾವಿರ, ಎಲಮ್ಮ (ಸಿದ್ಧರಾಮ ೪.೩೬ ಸಾವಿರ, ನೀಲಮ್ಮ ೧, ೧೧ ಸಾವಿರ, ಗಂಗಾಂಬಿಕೆ ೧, ೮ ಸಾವಿರ, ನಾಗಾಮಿ, ೩.೯೬ ಸಾವಿರ ಮಡಿವಳಮಾಚಿ ೩ಕೋಟಿ ಮುನ್ನೂರು, ಹಡಪದಪ್ಪಣ ೧೧ ಸಾವಿರ ಮರುಳಸಿದ್ಧ ೧೮ ಸಾವಿರ (ಸಿದ್ಧವ್ವ ೧೨೬೨). ಕೇವಲ ೯ ಶರಣರ ವಚನಗಳ ಒಟ್ಟು ಸಂಖ್ಯೆ ೬ ಕೋಟಿ ಸಿಕ್ಕಿರುವುದು ಅಲ್ಪ ಕಳೆದಿರುವುದು ಕಲ್ಪ. ಈ ಅಲ್ಪ ವಚನಗಳಲ್ಲಿ ಕಲ್ಪ ಸದೃಶ ವಚನ ರಚನೆಮಾಡಿ ಪುರಾತನ ವಚನಕಾರರನ್ನು ಮೀರಿಸಿ ನೂತನ ಪುರಾತನರಾದವರೇ ಶ್ರೀ ಟಿ. ಎನ್. ಮಹದೇವಯ್ಯನವರು 'ಪ್ರತಿಭಾನಾಂ ಕಾವ್ಯವಿದ್ಯಾಪ್ರಚಯ ಪರಿಚಯಂ ವೃದ್ಧ ಸೇವಾನುರಾಗಂ ಸತತ ಅಭ್ಯಾಸ ಪ್ರಯತ್ನಂ ನಿಯತಂ ಕವಿತೆಗೆ ಕಾರಣಂ' ಎನ್ನುವ ಆರ್ಯೋಕ್ತಿ ರಚಿತವಾಗಿರುವುದೇ ಲಿಂ. ಟಿ. ಎನ್. ಮಹದೇವಯ್ಯನವರನ್ನು ಕುರಿತು.

ಟಿ. ಎನ್. ಮಹದೇವಯ್ಯನವರು ಪ್ರತಿಭಾವಂತರು, ಜೊತೆಗೆ ಕಾವ್ಯವಿದ್ಯಾ ಪ್ರಚಯ ಪರಿಚಯ ಮಾಡಿಕೊಂಡಿದ್ದವರು. ಓದಿದ್ದಕ್ಕಿಂತ ಪುಸ್ತಕ ಕೊಂಡದ್ದೇ ಹೆಚ್ಚು. ಅವರ ದುಡಿಮೆಯ ಕೆಲವಂಶವನ್ನು ಗ್ರಂಥವನ್ನು ಕೊಳ್ಳಲು ಉಪಯೋಗಿಸುತ್ತಿದ್ದರು. ಬಹಳ ಹಿಂದೆಯೇ ಅವರ ಮನೆಯಲ್ಲಿ ಬಹು ದೊಡ್ಡ ಗ್ರಂಥಾಲಯವಿತ್ತು.

ಇನ್ನು ವೃದ್ಧಸೇವಾನುರಾಗ; ಅಂದಿನ ಕಾಲದ ಎಲ್ಲ ಹಿರಿಯರೊಡನೆ ಸ್ನೇಹವಿಟ್ಟುಕೊಂಡಿದ್ದರು. ಟಿ. ಎನ್. ಮಹದೇವಯ್ಯ ಅವರು ಸಂಸ್ಕಾರ ಸ್ನೇಹದ ಸುಳಿವಿಗೆ ಒಮ್ಮೆ ಸಿಕ್ಕಿದರೆ ಅದರಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇರಲಿಲ್ಲ.

ಸತತ ಅಭ್ಯಾಸ ಪ್ರಯತ್ನವೇ ಅವರ ತತ್ವ. ಇದರ ಆಧಾರದಿಂದ ಅವರು ಹೆಚ್ಚಾಗಿ ಬರೆಯದಿದ್ದರೂ ಹುಚ್ಚೆದ್ದು ಬರೆದರು. ಬರೆದಷ್ಟು ಗಟ್ಟಿ. ಜಳ್ಳು ಪೊಳ್ಳು ಇರಲೇ ಇಲ್ಲ. ಕುಂತಲ್ಲಿ ನಿಂತಲ್ಲಿ, ನಡೆವಲ್ಲಿ ನುಡಿವಲ್ಲಿ ಅವರು ಅಭ್ಯಾಸಪ್ರಿಯರು, ಸತತ ಅಭ್ಯಾಸಿಗಳು.

ಹೀಗಾಗಿ ಟಿ. ಎನ್. ಮಹದೇವಯ್ಯ ಒಂದು ವ್ಯಕ್ತಿಯಲ್ಲ, ಅದೊಂದು ಮಹಾಶಕ್ತಿ, ಟಿ. ಎನ್. ಮಹದೇವಯ್ಯ ಒಂದು ಹೆಸರಲ್ಲ, ಒಂದು ಮಂತ್ರವೆಂಬಂತೆ ಬೆಳೆಯಿತು.

ಆದ್ದರಿಂದಲೇ ಶ್ರೀಯುತರು ಕನ್ನಡ ಸಾಹಿತ್ಯದ ಕಾವ್ಯ ನಾಟಕ ಮತ್ತು ವಚನ ರಚನೆಗಳಲ್ಲಿ ಖ್ಯಾತರಾದರು. ಅವರ ಕೃತಿಗಳು ಗಾತ್ರದಲ್ಲಿ ಕಡಿಮೆ, ಗುಣದಲ್ಲಿ ಹಿರಿಮೆಯದು.

ಲಿಂ. ಟಿ. ಎನ್. ಮಹದೇವಯ್ಯನವರು ನೇರ ಪರಿಚಯವಿಲ್ಲದಿದ್ದರೂ ಅವರ ಅಳಿಯಂದಿರಾದ ಪ್ರೊ॥ ಬಿ. ವೀರಭದ್ರಯ್ಯನವರು ಚಿರಪರಿಚಿತರು.

ಟಿ. ಎನ್. ಮಹದೇವಯ್ಯನವರ ಸಂಸ್ಮರಣ ಗ್ರಂಥ 'ವಚನಗಳು' ಗ್ರಂಥವನ್ನು ೧೯೭೭ ರಲ್ಲಿ ತಿಪಟೂರು ಕರ್ನಾಟಕ ಸಂತರ ವತಿಯಿಂದ ಬಿಡುಗಡೆಗೊಳಿಸುವ ಸಮಾರಂಭದಲ್ಲಿ ನಾನು ಪಾಲ್ಗೊಂಡಿದ್ದೆ. ಅಂದು ಅವರ ಸಂಪೂರ್ಣ ಗ್ರಂಥಗಳ ಪ್ರದರ್ಶನವೊಂದನ್ನು ಏರ್ಪಡಿಸಿತ್ತು. ಅವರ ವಚನ ಗಾಯನ ಸ್ಪರ್ಧೆಯೂ ಇತ್ತು. ಟಿ. ಎನ್. ಎಂ. ಸ್ಮಾರಕ ಗ್ರಂಥಮಾಲೆಯು ಪ್ರಾರಂಭವಾಯಿತು. ಅದರ ಫಲವೇ "ಶ್ರೀ ಟಿ. ಎನ್. ಮಹದೇವಯ್ಯನವರ ವಚನಗಳು ಗ್ರಂಥ. ಅವರು ರಚಿಸಿದ ಅರುವತ್ಮೂರು ವಚನಗಳಿವೆ. ಆಧುನಿಕ ವಚನಕಾರರಾದ ಡಾ॥ ಜಚನಿ, ಡಾ॥ ಸಿದ್ಧಯ್ಯ ಪುರಾಣಿಕ, ಪ್ರೊ॥ ಎಸ್. ವಿ. ರಂಗಣ್ಣ, ಜೇರಿಗೆ ಕಟ್ಟೆ ಬಸವಪ್ಪ, ಶ್ರೀಮತಿ ಗು. ಶಂಕರಮ್ಮ, ಶ್ರೀಮತಿ ಓಂಕಾರಮ್ಮನವರು ಅಂದು ಪ್ರಸಿದ್ಧರಾಗಿದ್ದರು.

೧೯೭೭ ರಲ್ಲಿ ಪ್ರಕಟವಾದ ಈ ವಚನ ಗ್ರಂಥವನ್ನು ಶ್ರೀಮಲೆ ಮಹದೇಶ್ವರ ಸ್ವಾಮಿಗೆ ಅರ್ಪಿಸಲಾಗಿದೆ. ಏಕೆಂದರೆ ಟಿ. ಎನ್. ಮಹದೇವಯ್ಯನವರು ಶ್ರೀಮಲೆ ಮಾದೇಶ್ವರರ ಪರಮ ಆರಾಧಕರು, ಭಕ್ತರು. 'ಮಲೆಯ ಮಹಾದೇವ' ಎಂಬುದು ಅಂಕಿತ.

"ಏಳುಗಿರಿ ಹತ್ತಿ ಏಳುಗಿರಿಯಿಳಿದು ಬಾಳ ಬಯಲಿಗೆ ಬಂದೆ, ಹೆಬ್ಬಿದಿರ

ಪಡೆದಾಟಿ ಗಿರಿಶೃಂಗದವೆಮರಸಿ ನಿನ್ನರಸಿ ಬಂದೆ ಕಲ್ಮಳ್ಳ ಬಯಲೆಂದು ಮೃಗಜಾತಿಯಿರವೆಂದು ಹಿಂಜರಿಯದಲೆ ಬಂದೆ ಬಂದ ಭಕ್ತರಿಗೆಲ್ಲ ವರದ ಹಸ್ತವ ನೆತ್ತಿ ನಿಲವ ತೋರಿದ ಗುರುವೇ ಶ್ರೀ ಮಲೆಯ ಮಹದೇವ ನಿನ್ನ ಶ್ರೀ ಚರಣಕ್ಕೆ ನಮೋ ನಮೋ ಎಂಬೆನು."

ಅವರು ಹತ್ತಿದ ಏಳುಗಿರಿಗಳೆಂದರೆ ಮಹೇಂದ್ರ, ಮಲಯ, ಸಹ್ಯ, ಶುಕ್ತಿಮತ್, ಋಕ್, ವಿಂಧ್ಯ ಮತ್ತು ಪಾರಿಮಾತ್ರ ಎಂಬ ಸಪ್ತಕುಲ ಪರ್ವತಗಳು. ಅವರು ಹತ್ತಿದುದು ಆ ಭೌತಿಕ ಪರ್ವತಗಳನ್ನು ಅಲ್ಲ, ತಮ್ಮೊಳಗೆ ಬೆಳೆದು ನಿಂತಿರುವ ಕುಲ, ಯೌವನ, ಸ್ತ್ರೀ, ಅನ್ನ, ಧನ, ವಿದ್ಯೆ ಮತ್ತು ಉದ್ಯೋಗ ಮದಗಳೆಂಬ ಮತಂಗಗಳನ್ನು, ಇವನ್ನು ಮೆಟ್ಟಿನಿಂತವರೇ ಶರಣರು, ನಮ್ಮ ಮೈಮನದಲ್ಲಿರುವ ಕಾಮ, ಮೋಹ, ಮದ, ಮತ್ಸರ, ಲೋಭ, ಮತ್ತು ಕ್ರೋಧ ಎಂಬ ಆರು ಶತ್ರುಗಳನ್ನು ಗೆದ್ದು ಬದುಕಬೇಕು. ಪಶುವರ್ಗ ಈ ಆರಕ್ಕೆ ಸಿಕ್ಕಿ ತೊಳಲುತ್ತದೆ. ನರವರ್ಗವೂ ಇದಕ್ಕೆ ಹೊರತಿಲ್ಲ. ಶರಣವರ್ಗ ಮಾತ್ರ ಆ ಆರನ್ನು ಗೆದ್ದಿದೆ, ಅಂತಹವನೇ ಧನ್ಯಾತ್ಮ, ಪುಣ್ಯಾತ್ಮ ಹಾಗೂ ಶರಣಾತ್ಮ ಅನುಭಾವಿಯಾದ ಸಾಧಕನಿಗೆ ಮಾತ್ರ ಈ ಅರಿಗಳನ್ನು ಮೆಟ್ಟಲು, ಏಳು ಗಿರಿಗಳನ್ನು ಹತ್ತಲು ಸಾಧ್ಯ ಎಂಬುದೇ ಇಲ್ಲಿಯ ಆಶಯ.

ಕಾವ್ಯ ರಚಿಸುವವನು ಅನುಭವಿ (ಕವಿ), ವಚನಕಾರನು ಅನುಭಾವಿ; ಕವಿ-ಬುದ್ಧಿ ಜೀವಿ, ವಚನಕಾರ ಭಾವಜೀವಿ, ಕವಿ-ಜ್ಞಾನನಿಷ್ಠ ವಚನಿಗ-ಜ್ಞಾನ ಕ್ರಿಯಾನಿಷ್ಠ, ಕವಿಯದು ಪದ್ಯಬಂಧ, ಅನುಭಾವಿಯದು (ವಚನಗದ್ಯ) ಮಿಶ್ರಬಂಧ. ಕವಿಯದ್ದು ಕಲ್ಪನಾಶಕ್ತಿ ವಚನಕಾರನದ್ದು ಅನುಭಾವನಾ ಶಕ್ತಿ. ಕವಿ ಅನುಭವಿಯಾಗಬಲ್ಲ, ವಚನಕಾರ ಅನುಭಾವಿ ಕಡೆಗೆ ಅನುಭೂತಿಯಾಗಬಲ್ಲ ಎಂದು ಡಾ॥ ಜಚನಿಯವರು ಮುನ್ನುಡಿಯಲ್ಲಿ ತಿಳಿಸುತ್ತಾ ಶ್ರೀ ಮಹದೇವಯ್ಯನವರು ತಮ್ಮ ಈ ವಚನಗಳ ಅನುಭಾವಿಯಾಗಿ ಭಾವಪೂರ್ಣ ಶೈಲಿಯಲ್ಲಿ ಅನುಗೊಳಿಸಿದ್ದಾರೆ. ಇವು ಅವರ ಅನುಭವದಿಂದ ಪರಿಪ್ಲುತವಾಗಿದೆ. ನುಡಿಗಳ ಬಳಕೆಯಲ್ಲಿ ತೂಕವಿದೆ, ಮಾತು ಮಾತಿನಲ್ಲಿ ಬಗೆಯ ಬೆಡಗಿದೆ, ಅವರ ಅನಿಸಿಕೆ ನಿಚ್ಚಳವಾಗಿ ಕುದುರಿದೆ, ಅವರ ಶೀಲ ಅವರ ಸಂಸ್ಕಾರ, ಅವರ ಅಂತರ್ ಮೌಲ್ಯದ ಅಭಿರುಚಿಗೆ ಈ ಕಿರುಹೊತ್ತಿಗೆ ಮುಕುರದಂತಿದೆ ಅವರ ಪಾರಮಾರ್ಥಿಕ ಹಾಗೂ ಪ್ರಾಕೃತಿಕ ಪ್ರಜ್ಞೆಗೆ ಪರಿಸ್ಫುಟ ಸಾಕ್ಷಿಯಾಗಿದೆ. ಅವರು ತಮ್ಮ ಅಂತರ್ಭಾವವನ್ನು ಆಳವಾಗಿ, ಅಂಶವಾಗಿ, ಅಚ್ಚುಕಟ್ಟಾಗಿ ಹೊರಗೆಡಹಿದ್ದಾರೆ. ಅವರ ಬಗೆ ಮೊಗ್ಗುಗಳು, ಭಾವಪುಷ್ಪಗಳಾಗಿ ಅರಳಿವೆ. ಅನುಭಾವ ನರುಗಂಪು ಸೂಸಿವೆ. ಆನಂದಾಮೃತ ಮಕರಂದದಿಂದ ತುಂಬಿದೆ. ಇವರ ವಚನಗಳು ಮೇಲು ನೋಟಕ್ಕೆ ಸರಳವಾಗಿ ಕಂಡರೂ ಒಳಹೊಕ್ಕು ನೋಡಿದರೆ ವಿಶೇಷ ಗುರುಪರವಾದ, ಸಮರಸವಾದ ಭಾವಾನುಭಾವಗಳಿಂದ ಕೂಡಿರುವುದು ಕಂಡುಬರುತ್ತವೆ. ಎಂಬ ಡಾ॥ ಜಚನಿ ಅವರ ಅನಿಸಿಕೆಗಳನ್ನು ಸಂಪೂರ್ಣವಾಗಿ ಅನುಮೋದಿಸುತ್ತೇನೆ.

ಟಿ. ಎನ್. ಮಹದೇವಯ್ಯನವರು ಭಾವಜೀವಿಗಳು ಮಹಾದೇವನ ದಿವ್ಯದರ್ಶನಕ್ಕಾಗಿ ತವಕಗೊಂಡ ಸಾತ್ವಿಕ ಜೀವಿ, ಅಂತರಂಗದ ಆಧ್ಯಾತ್ಮಜೀವಿಗಳ ಎನ್ನಬಹುದು.

ಚಿತ್ತಾರಕ್ಕೊಂದು ಗೆರೆಯಾಗಿ, ಲಿಪಿಗೊಂದು ಅಕ್ಷರವಾಗಿ , ಕಾವ್ಯಕ್ಕೊಂದ ಕಲೆಯಾಗಿ, ಜೀವಕ್ಕೊಂದು ಚೇತನವಾಗಿ ಜಗವೆಲ್ಲವನು ಆವರಿಸಿರುವ ನಿನ್ನ ನಿಲವ ನೋಡಯ್ಯ ಹಕ್ಕಿಗಳ ಕೊರಳಲ್ಲಿ ನೀನು ವಾಣಿ, ಮೋಡಗಳ ಮರೆಯಲ್ಲಿ ನೀನ ಮಿಂಚು, ಅರಳಿದಲರಿನಲಿ ನೀನು ಕಂಪು ಸೊಂಪು ಶ್ರೀ ಮಲೆಯ ಮಹಾದೇವ ನನ ಜೀವನದಲಿ ನೀನೆ ಪ್ರಾಣ.

ಪ್ರಕೃತಿ ಮತ್ತು ಜೀವನವನ್ನು ದ್ವಂದ್ವತೆಯಲ್ಲಿ ಸರಿಯಾಗಿ ಪ್ರತಿಬಿಂಬಿಸಿದ್ದಾರೆ ಮೂಡಣ ಮುಂಬೆಳಕಿನಲ್ಲಿ ಗಿರಿಯೇರಿ ನಿಂತು ಮೊದಲ ವಚನದ ಕಹಳೆಯನೂದಿ ಜಗಕೆ ತೋರಿದವರಾರಯ್ಯ, ಹೊನ್ನಗಿಂಡಿಯ ಪಿಡಿದು ಮೊದಲ ವಚನ ಸುಧೆಯ ಸವಿಯೂಟ ಬಡಿಸಿದವರಾರಯ್ಯ, ಮುತ್ತು ಮಣಿಕ ಬೆರಸಿ ಮೊದಲ ವಚನದ ಕಟ್ಟನಾರು ಪದಬಂಧದಲಿ ಕೂಡಿಸಿಟ್ಟರಯ್ಯ, ಆ ಕಾರುಣಿಕ ಮಹಾಶಿವಶರಣರಿಗ ಶಿಮಲೆಯ ಮಹದೇವ ಸಾಕ್ಷಿಯಾಗಿ ನಮೋ ನಮೋ ಎನುತಿರ್ದೆನಯ್ಯ (ಮಹದೇವ) ಈ ವಚನ ಹಳೆಬೇರು, ಹೊಸ ಚಿಗುರು ಕೂಡಿದರೆ ಮರ ಸೊಗಸು ಹಳೆ ತತ್ವದೊಡನೆ ನವಕಳೆ ಮೇಳವಿಸೆ ಜಸವು ಜನಜೀವನಕ್ಕೆ ಅನ್ನುವಂತೆ ಹಳತು ಹೊಸದರ ಸೇತುವಾಗಿದೆ.

ಭವರೋಗ ವೈದ್ಯನೆಂದು ನಂಬಿದೆ ನಾನು ಒಮ್ಮೆಂಗೆ ಕರುಣಿಸಯ ಭಕ್ತಿಫಲದಾಯಕ ನೀನು ಒಮ್ಮೆಂಗೆ ಕರುಣಿಸಯ್ಯಾ ಜಯ ಜಯ ಮಹಾದೇವ ಎನುತಿರ್ದೆನು ಕೂಡಲ ಸಂಗಮದೇವಯ್ಯಾ (ಮಲೆಯ ಮಹಾದೇವ) ನಿಮ ಶ್ರೀಕಾರಕ್ಕೆ ನಮೋ ನಮೋ ಎನುತಿರ್ದೆನು (ಬಸವ. (೧೩೦೧) (ಶೂನ ಸಂಪಾದನೆ).

ಯಾವುದು ಹಳತು, ಯಾವುದು ಹೊಸತು ಎಂದು ಕಂಡು ಹಿಡಿಯುವುದೇ ಕಷ್ಟ ಅನ್ನುವಷ್ಟರಮಟ್ಟಿಗೆ ಮಹದೇಯ್ಯನವರು ವಚನ ರಚನೆ ಮಾಡಿ ಹಿಂದಿನವರು ಇಂದಿನವರು ಮತ್ತು ಮುಂದಿನವರೂ ಆಗಿದ್ದಾರೆ.

ಕಾಮದ ಬೆಟ್ಟದ ಮೇಲೆ ಕ್ರೋಧದ ಕೋಟೆಯನ್ನಿಕ್ಕಿ ಲೋಭದ ಕಂದಕದ ತೋಡಿ, ಮೋಹದ ಸೇನೆಯ ಬಿಟ್ಟು, ಮದದ ಗದ್ದುಗೆಯೇರಿ, ಮತ್ಸರದಾಳ್ವಿಕೆ ನಡೆಸಿ ಬಟುಕಿನ ಭೈರವ ಕಹಳೆಯನೂದಲು ತಾಣವೆನಗಿಲ್ಲವೆಂದು, ಏಳು ಗಿರಿಗಳ ಹತ್ತಿ ಏಳು ಗಿರಿಗಳನಿಳಿದು ಏಳು ಹರಿದಾರಿ ದೂರಸೇರಿ ಶ್ರೀಮಲೆಯ ಮಹದೇವ ಸೇರಿದನು ಗಿರಿಯ ಕಿಬ್ಬದಿಯ ಇಳಿಬಯಲ ಮನೆಯನ್ನು (ಮಹದೇವ.೧೨)

ಅರಿಷಡ್‌ವರ್ಗವನ್ನು ಗೆಲ್ಲಬೇಕು ಎಂದು ಮಹದೇವಯ್ಯನವರು ಹೇಳುವರೆ ಶಿವಯೋಗಿ ಸಿದ್ಧರಾಮರು ಆ ಆರು ಶತ್ರುಗಳನ್ನು "ಅರಿಷಡ್ವರ್ಗಂಗಳಳಿದವ ಶರಣನೆಂಬರು, ಅಂತೆಂದಯ್ಯಾ ಕಾಮವದು ಲಿಂಗಾರ್ಚನೆಯಲ್ಲಿ, ಕ್ರೋಧವದು ಷಣ್ಮತನಾಶದಲ್ಲಿ ಲೋಭವದು ಸಮ್ಯಜ್ಞಾನದಲ್ಲಿ, ಮೋಹವದು ಮುಕ್ತಾಂಗನೆಯಲ್ಲಿ ಮದವದು ದಮನದಲ್ಲಿ ಮತ್ಸರವದು ಶಮನದಲ್ಲಿ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ (ಸಿದ್ಧವ, ೧೩೭೩).

ಅವ್ವಾ ಬಾಲೆತನದಲ್ಲಿ ನಿನ್ನ ಜೀವ ಮುಪ್ಪು ಕಂಡಿತೇ, ಅವ್ವಾ ಚಿಗುರಿನಲ್ಲಿ ನಿನ್ನ ಸುವು ಹಣ್ಣಾಗಿ ಬಂದಿತ್ತೆ, ಅವ್ವಾ ಬೀಣೆಯಿಂಚರ ನುಡಿಗಿಂತ ಮೊದಲಾಗಿ ಪಂಚಮದ ತಾನದಲ್ಲಿ ನುಡಿಸಿದ್ದಿತೇ ಅವ್ವಾ ತಿರೆಯ ಚರಿತೆಯೊಳೆಲ್ಲಾ ನಿನ್ನಂತೆ ಇನ್ನಿಲ್ಲ ಶ್ರೀಮಲೆಯ ಮಹಾದೇವಂಗೆ ಮನ ಮಾರುಗೊಟ್ಟ ಶರಣರ ಮನೆಯ ಮಹಾಮಗಳೆ ಅಕ್ಕಮಹಾದೇವಿ ನಿಮ್ಮ ನಿಲುವಿಂಗೆ ಶರಣು ಶರಣು ಎನುತಿರ್ದೆನವ್ವಾ (ಮಹವ. ೩೧)

ಶೂನ್ಯದೊಳಗೊಂದು ಗದ್ದುಗೆಯ ಕಂಡೆ, ಗದ್ದುಗೆಯ ಮೇಲೊಂದು ಸತ್ತಿಗೆಯ ಕಂಡೆ, ಸತ್ತಿಗೆಯ ನೆರಳಿನೊಳಗೊಂದು ಮೂರ್ತಿಯ ಕಂಡೆ, ಶೂನ್ಯದಾಳವನರಿಸಿ, ಲಿಂಗದನುಭವತರಿಸಿ, ಅಂಗಕಳವಡಿಸಿ ಜಗದ ಗುರುವಾದೆಯಯ್ಯಾ, ಶ್ರೀ ಮಲೆಯ ಮಹಾದೇಶ್ವರನೊಲಿದು ಬಚ್ಚಬರಿಬಯಲಿನೊಳಗೋಲಾಡಿದ ನಿನ್ನ ಶ್ರೀ ಚರಣಕ್ಕೆ ನಮೋ ನಮೋ ಎನುತ್ತಿರ್ದೆನಯ್ಯಾ ಗುರುಗುಹೇಶ್ವರಾ (ಮಹಾವ. ೩೨).

'ಬ' ಎಂಬಲ್ಲಿ ಎನ್ನ ಭವ ಹರಿಯಿತ್ತು, 'ಸ' ಎಂಬಲ್ಲಿ ಸರ್ವಜ್ಞನಾದೆನು, 'ವ' ಎಂಬಲ್ಲಿ ವಂಚಿಸುವಡೆ ಚೈತನ್ಯಾತ್ಮಕನಾದೆನು ಇಂತೀ ಬಸವಾಪರತ್ರಯವೆನ್ನ ಸರ್ವಾಂಗದಲ್ಲಿ ತೊಳಗಿ ಬೆಳಗುವ ಭೇದವನರಿದು ಆನೂನೀನೂ ಬಸವಾ ಬಸವಾ ಬಸವಾ ಎನುತಿರ್ದೆವಯ್ಯ ಗುಹೇಶ್ವರಾ' (ಅಲ್ಲವ. ೧೩೭೮) ಎಂಬ ಅಲ್ಲಮಪ್ರಭುವಿನ ವಚನವನ್ನು ನೆನಪಿಗೆ ತರುತ್ತಾರೆ.

ಮಹದೇವಯ್ಯನವರ ವಚನದಲ್ಲಿ ಬೆಡಗಿನ ಸೊಗಡೂ ಇದೆ. ಆಕೃತಿ ಕಿರಿದಾದರು ಆ ಕೃತಿ ಕಿರಿದಲ್ಲ. ಅಲ್ಪದಲ್ಲಿ ಕಲ್ಪ ಸದೃಶ ಕಲ್ಪನೆ, ಭಾವನೆ, ಸಾಧನೆ ಮತ್ತು ನಿರೂಪಣೆಯನ್ನು ತಮ್ಮ ವಚನಗಳಲ್ಲಿ ತಂದಿದ್ದಾರೆ. ಆಧುನಿಕ ವಚನಕಾರರಲ್ಲಿ ಮಹದೇವಯ್ಯನವರು ಆದ್ಯರು, ಅಗ್ರರು ಮತ್ತು ಆರ್ಯರು.

ಕನಕಪುರಂದರರಿಗದಾವ ಮಂತ್ರ ವಿಸ್ತರಿಸಿತ್ತು ಹೇಳಾ, ಕಣ್ಣಪ್ಪಕೊಡುಗೂಸುಗಳಿಗಾವ ಮಂತ್ರ ವಿಸ್ತರಿಸಿತ್ತು. ಹೇಳಾ. ತಿಮ್ಮವ್ವೆಯರಕದಿರೆ ಮಂತ್ರ ನುಡಿದಿತ್ತೆ ಹೇಳಾ, ಶಿವಶರಣ ಶರಣೆಂಬ ಘನಮಂತ್ರವೊಂದಿರಲು

ಶ್ರೀಮಲೆಯ ಮಹಾದೇವನ ಅರಿಯಲು ಮತ್ತಾವ ಮಂತ್ರಕ್ಕಿಂಬುಂಟು ಹೇಳಾ (ಮಹಾವ. ೧೦)-ಹೀಗೆ ವೃದ್ಧ ಸೇವಾನುರಾಗವನ್ನು ಅವರ ವಚನಗಳಲ್ಲಿ ಗುರುತಿಸಬಹುದು.

ವಚನಕಾರ ಮಹಾದೇವಯ್ಯನವರಂತೆ ನಾಟಕಕ್ಕೆ ಮಹಾದೇವಯ್ಯನವರೂ ಖ್ಯಾತರು. ಕನ್ನಡ ನಾಟಕ ಪ್ರಪಂಚದಲ್ಲಿ ಅವರ ಏಕಾಂಕ ನಾಟಕಗಳು ಬಹಳ ಪ್ರಸಿದ್ಧವಾದವುಗಳು.

'ವಿಜಯಶ್ರೀ' ನಾಲ್ಕು ಏಕಾಂಕ ರೇಡಿಯೋ ನಾಟಕಗಳು. ವಿಜಯಶ್ರೀ, ಶ್ರೀ ವಿದ್ಯಾರಣ್ಯ, ನೀಲಾಂಬಿಕೆ ಮತ್ತು ಮುಕ್ತಾಯಕ್ಕ, ಜೈನ, ವೈದಿಕ, ವೀರಶೈವಿಕ ಮತಗಳ ಉಚ್ಛ್ರಾಯಕ್ಕೆ ಕಾರಣರಾದ ಭರತ ಬಾಹುಬಲಿ, ವಿದ್ಯಾರಣ್ಯ, ಹಕ್ಕಬುಕ್ಕರು, ಬಸವಣ್ಣ ನೀಲಾಂಬಿಕೆ ಮುಕ್ತಾಯಕ್ಕ, ಅಲ್ಲಮಪ್ರಭುಗಳ ಬಗೆಗೆ ಚಿತ್ರಿಸಲಾಗಿದೆ. ಮಹಾದೇವಯ್ಯನವರ ಭಾವ ಸಹೃದಯತೆಗಳು ಅನುಭಾವದ ಆಲಿಂಗನದಿಂದ ಆನಂದಗೊಂಡು ಈ ಏಕಾಂಕಗಳನ್ನು ಹೊರಹೊಮ್ಮಿಸಿವೆ, ಅವರ ಭಾವ, ಚೇತನದ ಆಳ-ಅಗಲ, ಎತ್ತರ-ಬಿತ್ತರಗಳನ್ನು ಭಾವಿಸಲು 'ವಿಜಯಶ್ರೀ' ಪುಸ್ತಕವೊಂದೇ ಸಾಕು, ಅನ್ನವನ್ನು ಪರೀಕ್ಷಿಸಲು ಅಗುಳೊಂದು ಸಾಕ್ಷಿಯಾದಂತೆ.

ವೀರತ್ವ ಬೇಕು ಆದರೆ ಅದು ವಿರಾಗಮುಕ್ತ ವೀರತ್ವವಾಗಿರಬೇಕು ಎಂಬ ಮಾತನ್ನು ಶ್ರೀ ಮಾಧವರ-ವಿದ್ಯಾರಣ್ಯರ ಉದಾಹರಣೆಯಿಂದ ಸಂಪತ್ ಸಿದ್ಧಿಗಾಗಿ ಸನ್ಯಾಸವನ್ನು ಸ್ವೀಕರಿಸಲೇಬೇಕಾಗಿರುವ ಮರ್ಮವನ್ನು ಇಲ್ಲಿ ನಿರೂಪಿಸಲಾಗಿದೆ.

'ನೀಲಾಂಬಿಕೆ' ಏಕಾಂಕ ನಾಟಕದಲ್ಲಿ ದಂಡನಾಯಕ ಬಸವಣ್ಣನವರ ಮೇಲೆ ಅಪವಾದ ಬಂದು ರಾಮಾಯಣದ ರಾಮನ ಉದಾಹರಣೆಯನ್ನು ನೆನೆದು, ಬಸವಣ್ಣನವರು ಕಲ್ಯಾಣವನ್ನು ತ್ಯಜಿಸುವುದು, ಕಾಡಿನಲ್ಲಿ ಅರುಣೋದಯದ ಪ್ರಸಂಗ, ಶೂನ್ಯ ಸಿಂಹಾಸನದ ದರ್ಶನ, ಕಳ್ಳ ಜಂಗಮ ಓಲೆಯನ್ನು ಪಡೆದುದು, ನೀಲಾಂಬಿಕೆ ಕಂಡ ಬಸವಣ್ಣನವರ ಲೆಕ್ಕಗಳು ಒಂದಕ್ಕಿಂದ ಒಂದು ಹಿತವಾಗಿ ಮಿತವಾಗಿ ನಾಟಕಕ್ಕೆ ಮೆರುಗುತಂದಿದೆ.

ಮುಕ್ತಾಯಕ್ಕ ನಾಟಕದಲ್ಲಿ ಅಲ್ಲಮಪ್ರಭು ಅನುಗ್ರಹದಿಂದ ಲಿಂಗಾಂಗ ಸಾಮರಸ್ಯವನ್ನು ಸಾಧಿಸಿದ ಮುಕ್ತಾಯಕ್ಕನ ಅನುಭಾವ ಪ್ರಸಂಗದ ವರ್ಣನೆ ಅದ್ಭುತವಾಗಿದೆ. ಅಜಗಣ್ಣ-ಮುಕ್ತಾಯಕ್ಕ ಅವರ ಸಂಭಾಷಣೆಯ ಸ್ವರೂಪ ಮಿಂಚಿನಂತಿದೆ. ಬೆಳಕು-ಬೆಳಕು ಬೆಳಕಿನಲ್ಲಿ ಬೆಳಕಾದಂತೆ ಪ್ರತಿಯೊಂದು ಪ್ರಸಂಗವೂ ಚಮತ್ಕಾರದಿಂದ ಕೂಡಿವೆ. ಟಿ. ಎನ್. ಮಹದೇವಯ್ಯನವರ ಏಕಾಂಕ ನಾಟಕಗಳು ಸಹಜವಾದ ಸಂಭಾಷಣೆ ಸಹಜವಾದ ಪ್ರಸಂಗದೊಡನೆ ಸಹಜತೆಯಿಂದ ಕೂಡಿವೆ.

'ಮಕರಂದಾಜಿ' ಮಹಾದೇವಯ್ಯನವರ ಮತ್ತೆರಡು ಏಕಾಂಕ ನಾಟಕ. ಅದನ್ನು

ಅವರು ಪದ್ಯ (ಗೀತಾ) ನಾಟಕ ಎಂದು ಕರೆದಿದ್ದಾರೆ. ಕನ್ನಡ ಸಾಹಿತ್ಯದ ಯುಗಪುರುಷ ಸಾಂಗತ್ಯದ ಸರದಾರ ರಸಿಕಕವಿ ರತ್ನಾಕರ ವರ್ಣಿಯು ಚಿತ್ರಿಸಿದ 'ಮಕರಂದಾಜಿಯ' ವ್ಯಕ್ತಿಚಿತ್ರವನ್ನು ಇಲ್ಲಿ ಚಿತ್ರಿಸಿದೆ. ರತ್ನಕರವರ್ಣಿಯು ಭರತೇಶ ವೈಭವದಲ್ಲಿಯ 'ಮಕರಂದಾಜಿ'ಯ ಪಾತ್ರ, ಆದರ್ಶ ಅಪರೂಪ ಮತ್ತು ಅನುರೂಪವಾದುದು. ಅದನ್ನು ಟಿ. ಎನ್. ಮಹಾದೇವಯ್ಯನವರು ವಿಸ್ತರಿಸಿ, ಸುಂದರವಾದ, ಶೃಂಗಾರಪೂರ್ಣವಾದ ಸಂಭಾಷಣಾ ಚಾತುರ್ಯದಿಂದ ಕೂಡಿದ ಚಾಕಚಕ್ಯತೆಯ ಸನ್ನಿವೇಶಗಳಿಂದ ರಚಿಸಿದ್ದಾರೆ. ಇಲ್ಲಿಯ ಸಂಭಾಷಣೆಯ ನಾಟಕೀಯ ಚತುರತೆ, ಶೃಂಗಾರದ ನಿರ್ಭರತೆ, ಸನ್ನಿವೇಶಗಳ ರಚನಾ ಕೌಶಲ್ಯ ಮತ್ತು ಮೃದು ಮಧುರವಾದ ಬಂಧನದಿಂದ 'ಮಕರಂದಾಜಿ' ಕನ್ನಡ ನಾಟಕ ಪ್ರಪಂಚದಲ್ಲಿ ಸುಂದರವಾದ ಪದ್ಯನಾಟಕವಾಗಿ ತನ್ನದೇ ಆದ ಕೀರ್ತಿಯನ್ನು ಹೊಂದಿದೆ.

'ಕ್ರಾಂತಿಯದೀಪ' ಮಹಾದೇವಯ್ಯನವರ ಮತ್ತೊಂದು ಪ್ರಸಿದ್ಧ ನಾಟಕ. ಜಗಜ್ಯೋತಿಯಾದ ಬಸವಣ್ಣನವರ ಜೀವನವನ್ನು ಅದ್ಭುತವಾದ ಕಲಾದೃಷ್ಟಿಯಿಂದ ನಾಟಕದಲ್ಲಿ ಚಿತ್ರಿಸಿದ್ದಾರೆ. ಇದೊಂದು ಕಲಾಪೂರ್ಣ ನಾಟಕ. ನಾಟಕವು ಅನೇಕ ಮಾರ್ಮಿಕ ಮಾತುಗಳಿಂದ ಅಲ್ಲಲ್ಲಿ ಬರುವ ಕಾವ್ಯಲಹರಿಗಳಿಂದ, ವಚನಗಳನ್ನು ಸನ್ನಿವೇಶಗಳಿಗೆ ಅಳವಡಿಸಿಕೊಂಡಿರುವ ಜಾಣ್ಮೆಯಿಂದ, ಬಸವಣ್ಣನವರ ಅಹಿಂಸೆ, ಶಾಂತಿ ಮತ್ತು ಬೋಧೆಗಳು ಎದೆ ತುಂಬಿ ಬರುತ್ತವೆ. ಈ ನಾಟಕ ದೃಶ್ಯಗಳ ಹೊಂದಿಕೆ ರಂಗಭೂಮಿಗಿಂತ ಚಲನಚಿತ್ರಕ್ಕೆ ಹೇಳಿ ಮಾಡಿಸಿದಂತೆ ಇರುವುದು ನಾಟಕವನ್ನು ಹೆಚ್ಚು ರಮಣೀಯಗೊಳಿಸಿವೆ. ಬಿಜ್ಜಳನ ಪಾತ್ರವನ್ನು ಹೆಚ್ಚು ಉದಾತ್ತವನ್ನಾಗಿ ಮಾರ್ಪಡಿಸಿ 'ಕ್ರಾಂತಿಯದೀಪ ನಾಟಕಕ್ಕೆ ಹೆಚ್ಚು ಕಲಾ ಪ್ರತಿಭೆ ಬರುವಂತೆ ಮಾಡಿ, ನಾಡಿನಲ್ಲಿ ಕ್ರಾಂತಿಯದೀಪ ಕ್ರಾಂತಿಕಾರಕವಾಗುವಂತೆ ತಮ್ಮ ಪ್ರತಿಭೆಯಿಂದ ಮತ್ತು ಸತತ ಅನುಭವದಿಂದ 'ಕ್ರಾಂತಿಯದೀಪ' ನಾಟಕ ತನ್ನದೇ ಆದ ಸ್ವಂತಿಕೆಯಂದ ಕನ್ನಡ ನಾಟಕ ಚರಿತ್ರೆಯಲ್ಲಿ ಮಿಂಚು ಮಾಡಿದ್ದಾರೆ ಶ್ರೀ ಟಿ. ಎನ್. ಮಹಾದೇವಯ್ಯನವರು.

ಟಿ. ಎನ್. ಮಹದೇವಯ್ಯನವರ ಯಶೋಕುಡಿ ಹಬ್ಬಿರುವುದು ಅವರು ರಚಿಸಿದ ಜೀವನ ಚರಿತ್ರೆಗಳಿಂದ. ಮಹದೇವಿಯಕ್ಕನವರ ಜೀವನ ಚರಿತ್ರೆ ಯಶೋವಲ್ಲರಿಯಾಗಿದೆ.

ಮಹದೇವಿಯಕ್ಕ ಅವರ ಜೀವನ ಚರಿತ್ರೆ ಚರಿತ್ರೆಯ ತಿರುಳಿಗೂ, ಕವಿಗಳು ರಚಿಸಿದ ರೀತಿ (ಶೈಲಿಗೂ) ಹೊಂದಾಣಿಕೆಯಿದ್ದು, ಸಂಗ್ರಹವಾಗಿ ಹತ್ತು ಕಟ್ಟುವಕಡೆ ಒಂದು ಮುತ್ತು ಕಟ್ಟು ಎನ್ನುವ ಕನ್ನಡದ ಗಾದೆಯ ವೇದದ ಮಾತಿನಂತೆ ಸಂಕ್ಷಿಪ್ತ ಸಂಗ್ರಹವಾಗಿ ರಚಿಸುವ ಶ್ರೀಯುತರ ನೈಪುಣ್ಯತೆಗೆ ಬೆರಗಾಗುವಂತಿದೆ.

ದೊಡ್ಡ (ದೀರ್ಘ)ದಾಗಿ ಯಾವುದೇ ದಡ್ಡರೂ ಬರೆಯಬಹುದು, ಚಿಕ್ಕದಾಗಿ,

ಚೊಕ್ಕವಾಗಿ, ಸಂಕ್ಷಿಪ್ತವಾಗಿ, ಸಂಗ್ರಹವಾಗಿ ಹೇಳುವುದೂ ಬರೆಯುವುದೂ ಒಂದು ಕಲೆ. ಆ ಸಂಗ್ರಹ ಕಲೆ ಶ್ರೀ ಟಿ. ಎಸ್. ಮಹಾದೇವಯ್ಯನವರಲ್ಲಿ ರಕ್ತಗತ. ಆಗರ್ಭ ಶ್ರೀಮಂತರಂತೆ ಮಹಾದೇವಯ್ಯನವರು ಆಗರ್ಭ ಸಂಕ್ಷಿಪ್ತಕರು.

ತುಂಬ ಅವಸರದ ಈ ಕಾಲದಲ್ಲಿ ಎಲ್ಲರೂ ಬಿಜಿ ಮತ್ತು ಬಿಸಿ. ಹೇಳಬೇಕಾದ ವಿಷಯವನ್ನವಲಂಬಿಸಿದೆ. ಪುರಾಣ ಹೇಳದೆ, ರಗಳೆ ಮಾಡದೆ ಸಂಕ್ಷಿಪ್ತವಾಗಿ ಚೆಂದುಕಾ, ನೀಟಾಗಿ ಹೇಳಬಲ್ಲಾತನೇ ಕನ್ನಡದ ಕಡುಜಾಣ. ಅವರೇ ಭಾಷಾಪ್ರವರ್ಧಕರು ಈ ದೃಷ್ಟಿಯಿಂದ ಶ್ರೀ ಮಹಾದೇವಯ್ಯನವರು; ಕನ್ನಡದ ಕಡುಜಾಣರು, ಕನ್ನಡದ ಪ್ರಸಿದ್ಧ ಪ್ರವರ್ಧಕರು.

ಶ್ರೀ ಟಿ. ಎಸ್. ಮಹದೇವಯ್ಯನವರು ತುಮಕೂರಿನ ಸಾಮಾನ್ಯ ಕುಟುಂಬದಿಂದ ಬಂದರೂ ಅಸಾಮಾನ್ಯ ಪ್ರತಿಭೆಯನ್ನು ಹೊಂದಿದವರು. ಅವರ ಪರಂಪರೆಯೇ ಹಾಗೆ. ಕವಿ, ವಚನಕಾರ, ನಾಟಕಕಾರ ಮತ್ತು ಸಮಾಜ ಸುಧಾರಕರಾಗಿ ಒಬ್ಬರೇ ವ್ಯಕ್ತಿಯಿರುವುದು ಅಪರೂಪ. ಬಿ.ಎಸ್.ಸಿ. ಪದವೀಧರರಾದರೂ ಗ್ರಾಮೀಣ ಜೀವನವನ್ನು ಆಯ್ಕೆಮಾಡಿಕೊಂಡು ಹಳ್ಳಿಯ ಪರಿಸರದಲ್ಲಿರುವ ವಸ್ತುಗಳನ್ನೇ ಉಪಯೋಗಿಸಿಕೊಂಡು ಕನ್ನಡದ ನೆಲ, ಜಲ, ಭಾಷೆ ಮತ್ತು ಸಂಸ್ಕೃತಿಯ ಬಗ್ಗೆ ಜನತೆಯಲ್ಲಿ ಅಭಿಮಾನ ಮೂಡಿಸಿ, ನವಚೇತನ ಬರುವಂತೆ ಮಾಡಿ ಪ್ರೋತ್ಸಾಹಿಸುತ್ತಿದ್ದರು. ಸಾವಿರ ಪ್ರಚಾರ, ಕನ್ನಡ ಸಂಘಗಳ ಮೂಲಕ ಜನರ ಸಂಘಟನೆ. ಸಂಘಟಿಸಿದ ಜನತೆಯಲ್ಲಿ ನಾಡು ಮತ್ತು ನುಡಿಯ ಅಭಿಮಾನ ಉಕ್ಕಿಸುವುದು ಪತ್ರಿಕೆ, ವಿಚಾರಗೋಷ್ಠಿ, ಸಮ್ಮೇಳನ, ಸಾಮೂಹಿಕ ಯೋಚನೆ ಮುಂತಾದ ಹಲವಾರು ಸಾಂಘಿಕ, ಸಾಹಿತ್ಯಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಯೋಚಿಸಿ, ಯೋಜಿಸಿ ತಮ್ಮ ಪ್ರವಚನವನ್ನು ಜಾನಪದಕ್ಕಾಗಿ ಮೀಸಲಿಟ್ಟಿದ್ದರು. ಕವಿತ್ವ ಹುಟ್ಟುಗುಣ, ಅದು ರಕ್ತದಿಂದಲೇ ಬರಬೇಕು. ಅದು ರಕ್ತಗುಣವಾಗಬೇಕು. ಶ್ರೀಯುತರು ವಿದ್ಯಾರ್ಥಿ ಜೀವನದಲ್ಲಿಯೇ ಆಶುಕವಿಯಾಗಿ ಹಲವಾರು ಕವಿತೆಗಳನ್ನು ರಚಿಸಿ 'ನಂದಕಿಶೋರ' ಎಂಬ ಕಾವ್ಯನಾಮ (ಅಂಕಿತ)ದಿಂದ ಕಾವ್ಯಗಳನ್ನು ರಚಿಸುತ್ತಿದ್ದರು. ಕನ್ನಡದ ಕಣ್ವ ಬಿ.ಎಂ.ಶ್ರೀ. ಅವರು ಮಹಾದೇವಯ್ಯ ಅಧಿದೇವತೆ. ವೀಣಾ ಮತ್ತು ಹಂಪೆಯ ಕನಸು ಮಹಾದೇವಯ್ಯನವರ ಕಾವ್ಯಗಳು. 'ಭೂಮಿ ತೊಟ್ಟಿಲಲ್ಲಿ, ಜೀವ ಹಾಲುಕುಡಿದ ಮಗುವಿನಂತೆ ಮಲೆತು ನಿದ್ರೆಯಲ್ಲಿ ಮರೆತು ತೂಗುತಿರುವುದು, ತಿಮಿರ ನೋಡಿ, ತೂಗಿ ಹಾಡಿ ಹಾಡುತಿರುವುದು' ಇದು ಮಹಾದೇವಯ್ಯನವರ 'ರಾತ್ರಿ' ಕವಿತೆ, ಅವರ ಅನುಭವ, ಅನುಭಾವ ಮತ್ತು ಅನುಸಂಧಾನ ಈ ಕವನ.

ಈ ಪ್ರಕೃತಿಯಲ್ಲಿ ತನ್ನ ಬಾಳಿನ ವೀಣೆಯನ್ನು ಹಿಡಿದು ಮೋಹಗೀತೆಯ ಹಾಡಿ, ನಾದ ಝೇಂಕೃತಿಯನ್ನು ಮೀಟಿ, ತಾನೇ ಮೈಮರೆಯುವಂತೆ ಮಾಡಬೇಕೆಂದು ಪರಮಾತ್ಮನನ್ನು ಪ್ರಾರ್ಥಿಸಿದ್ದಾರೆ. ಈ ಕವನ ಸಂಕಲನಕ್ಕೆ 'ವೀಣಾ' ಅರ್ಥ, ಪದ,

ಪ್ರಯೋಗ ಮತ್ತು ಪ್ರಯೋಜನೆಯಲ್ಲಿ ಅನ್ವರ್ಥವಾಗಿ ನಿಜಕ್ಕೂ ವೀಣಾ ಕಾವ್ಯದ ವೀಣಾ.

'ಹಂಪೆಯ ಕನಸು' ಕಾವ್ಯ ವಿಜಯನಗರ ಸಾಮ್ರಾಜ್ಯದ ಆರನೆಯ ಶತಮಾನೋತ್ಸವದ ಸಾಹಿತ್ಯೋತ್ಸವದ ಶುಭ ಸಂದರ್ಭದಲ್ಲಿ ರಚಿಸಿದ ಕವನ. ಹಂಪೆಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಕವಿ ಸಮ್ಮೇಳನದ ಸಮಾರಂಭದಲ್ಲಿ ಬಿ.ಎಂ.ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ ವಾಚನ ಮಾಡಿದ್ದಾರೆ. ಅದೊಂದು ಅಪರೂಪದ ಅನುರೂಪದ ಸಮಾರಂಭ.

ಶ್ರೀ ಟಿ. ಎನ್. ಮಹಾದೇವಯ್ಯನವರು ಎಳಮೆಯಿಂದಲೂ ಗುರುಪರಂಪರೆಯ ಮತ್ತು ಅಪ್ಪಾವರರು, ಪಂಚಾಚಾರ ಹಾಗೂ ಷಟಸ್ಥಲದ ಪ್ರಭಾವಕ್ಕೆ ಒಳಗಾದವರು, ಗುರುಗಳಿಂದ ಆಚಾರ್ಯರಿಂದ ಶಕ್ತಿ ವಿಶಿಷ್ಟಾದ್ವೈತವನ್ನು ಆಳವಾಗಿ ಅಭ್ಯಸಿಸಿದವರ, ಎಲ್ಲೇ ಧಾರ್ಮಿಕ ಸಮಾರಂಭ ನಡೆಯಲಿ ಅಲ್ಲಿ ಹಾಜರಿದ್ದು, ಧಾರ್ಮಿಕ ಜಿಜ್ಞಾಸೆಯಲ್ಲಿ ಅಗ್ರರೂ ಆದ್ಯರೂ ಆಗಿ ತಮ್ಮ ವಿದ್ವತ್ವವನ್ನು ಪ್ರದರ್ಶಿಸುತ್ತಿದ್ದರು. ಇದು ಕೇವಲ ಧಾರ್ಮಿಕ ಪಾಂಡಿತ್ಯಕ್ಕಲ್ಲದೆ ನುಡಿಯಲ್ಲಿ ಮಾತ್ರ ಇರದೆ. ನಡೆಯಲ್ಲಿ, ಕ್ರಿಯಾಶೀಲತೆಯಲ್ಲಿ ಅನುಷ್ಠಾನದಲ್ಲಿ ಪ್ರಕಟವಾಗುತ್ತಿತ್ತು. ಹೀಗಾಗಿ ಶ್ರೀ ಟಿ.ಎಸ್. ಮಹಾದೇವಯ್ಯನವರ ನಡೆ ಮತ್ತು ನುಡಿಗಳು ಒಂದಾಗಿದ್ದವು. ವಿಚಾರವಿದ್ದರೇನು ಆಚಾರವಿಲ್ಲದನ್ನಕ್ಕ ಎಂಬ ಶರಣ ಸೂಳ್ನುಡಿಗೆ ಭಾಜ್ಯರು ಭಾಜನರು.

ಇಂದಿನ ವೇಗದ ಯುಗದಲ್ಲಿ ಆಚಾರಕ್ಕಿಂತ ವಿಚಾರ ಅದಕ್ಕಿಂತ ಪ್ರಚಾರ ಮುಖ್ಯ. ಶ್ರೀ ಟಿ. ಎನ್. ಮಹದೇವಯ್ಯನವರು ಆಚಾರವಂತರು, ವಿಚಾರ ಪ್ರಿಯರು, ಪ್ರಚಾರಕ್ಕಿಲ್ಲದವರು.

ಲಿಂಗವೆನ್ನೆ, ಲಿಂಗೈಕ್ಯವೆನ್ನೆ ಅನ್ನೆ, ನಾನೆನ್ನೆ, ನೀನೆನ್ನೆ ಕರದಿಷ್ಟಲಿಂಗವೆಂಬೆ ಮನದಲ್ಲಿ ಪ್ರಾಣಲಿಂಗವೆಂದೆ, ಭಾವದಲ್ಲಿ ಭಾವಲಿಂಗವೆಂಬೆ ಆದರೆ ಅರಿವಿನ್ನು ಶಿಶುವಾಗಿ ನುಡಿ ಬರದೆ ತೊದಲುತ್ತಿದೆ. ಮನ ಪ್ರಾಣ ಭಾವದ ಕುರಿತು ಬೀಗಿ ನುಡಿದರೆ ನಾನು ನಮ್ಮ ಶ್ರೀಮಲೆಯ ಮಹಾದೇವನ ಚರಣಕತಿ ದೂರದೂರ ಎಂದು ಭಕ್ತನ ಅಳಲನ್ನು ತೋಡಿಕೊಂಡಿದ್ದಾರೆ. ಈ ಮೇಲಿನ ವಚನದಿಂದ ಅವರಲ್ಲಿ ಮಡುಗಟ್ಟಿದ್ದ ಆಧ್ಯಾತ್ಮ ವಿಷಯಗಳನ್ನು ನಾವು ತಿಳಿಯಬಹುದು.

ಮಂಗನಿಂದಾದನೀಮನುಜ, ಮಂಗನಂತೆ ಅವನ ಮನವಿಹಾರ ಕಾಯಕ್ಕೆ ಹಸಿವು, ತುಸು ಸಕ್ಕರೆ ತಿಂದು ನಾಲಿಗೆಗಳಾದರು, ದುಃಖ ಬಂತೆಂದಳುವವನು ಹೇಡಿ, ತೆಂಗು ಕಲ್ಪವೃಕ್ಷವಯ್ಯಾ, ಕಳಬೇಡವೆಂದರೂ ಕಳುವುದ ಬಿಡರು, ಶೂನ್ಯದೊಳಗೊಂದು ಗದ್ದುಗೆ ಗುಟ್ಟೆಲ್ಲಿ ಬಂತು ಎದೆಯಲ್ಲಿ ಚಿತ್ತಾರಕ್ಕೊಂದು ಗೆರೆ,

ಲಿಪಿಗೊಂದು ಅಕ್ಷರ, ಕಾವ್ಯಕ್ಕೊಂದು ಕಲೆ, ಉಸುರಿನ ಹೋರಾಟಕ್ಕೆ ಹೆಸರಿಟ್ಟರು. ಪ್ರಾಣಯಾವುದೆಂದು ಬ್ರಹ್ಮಸತ್ಯ, ಜನನ್ಮಿಥ್ಯಾ, ಅಂಗಾಂಗ ಒಂದು ಕೂಡಿದರೆ ಲಿಂಗಪೂಜೆ ಶರಣನ ಶಿವಾರ್ಚನೆಯೇ ಪ್ರಾಣಪೂಜೆ, ಹೀಗೆ ಅನುಭವದ ಸುಳ್ನುಡಿಗಳನ್ನು ಬಿತ್ತರಿಸಿದ್ದಾರೆ.

ಶ್ರೀ ಟಿ. ಎನ್. ಮಹಾದೇವಯ್ಯನವರು, ಕವಿಗಳು, ವಚನಕಾರರು, ನಾಟಕಕಾರರು, ವಿಮರ್ಶಕರು, ಚಿಂತಕರು, ಸಾಧಕರು ಜನಪದದ ಉದ್ಧಾರಕರು ಅವರ ಶ್ರೀ ಪ್ರತಿಭೆಗೆ ನಮಿಸೋಣ.*

■

---

* ದಿನಾಂಕ ೧೭-೧೦-೨೦೧೧ ರಂದು ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದಲ್ಲಿ ನೀಡಿದ ದತ್ತಿ ಉಪನ್ಯಾಸ.

ಕರ್ನಾಟಕ ಲೋಚನ
ಸಂಪುಟ ೨೬, ಸಂಚಿಕೆ ೧-೨
ಜನವರಿ-ಡಿಸೆಂಬರ್

೧೨. 'ಶ್ರೀ ಉತ್ಸವ'

-ಪ್ರೊ॥ ಎಲ್. ಎಸ್. ಶೇಷಗಿರಿರಾವ್

ಆತ್ಮೀಯರೆ, ಆಚಾರ್ಯ ಶ್ರೀ ಅವರು ಕನ್ನಡ ನಾಡಿಗೇ ಗುರುಗಳು. ನನಗೆ ಅವರ ತರಗತಿಯಲ್ಲಿ ಕುಳಿತು ಪಾಠ ಕೇಳುವ ಸುಯೋಗ ಲಭ್ಯವಾಗಿತ್ತು. ಆದುದರಿಂದ 'ಶ್ರೀ ಉತ್ಸವ'ದಲ್ಲಿ ಭಾಗಿಯಾಗಲು ಉತ್ಸುಕನಾಗಿದ್ದೆ. ಆದರೆ ವಿಪರೀತ ಕೆಮ್ಮು ಇರುವುದರಿಂದ ಆ ಸಂತೋಷದಿಂದ ವಂಚಿತನಾಗಿದ್ದೇನೆ. ಈ ಸಣ್ಣ ಭಾಷಣವನ್ನು ಮನ್ನಿಸುವ ಕೃಪೆಯನ್ನು ತಾವೆಲ್ಲ ಮಾಡಬೇಕು.

ಇಂದು ಎರಡು ಕೃತಿಗಳು ಬಿಡುಗಡೆಯಾಗುತ್ತಿವೆ. ಕನ್ನಡ ಭಾಷೆ ಮತ್ತು ಸಾಹಿತ್ಯಗಳ ಸಂದರ್ಭದಲ್ಲಿ ಎರಡೂ ಐತಿಹಾಸಿಕ ಪ್ರಕಟಣೆಗಳೇ, 'ಇಂಗ್ಲಿಷ್ ಗೀತೆಗಳ'ಲ್ಲಿ ಸೇರಿರುವ ಕವನಗಳೆಲ್ಲ ಅನುವಾದಗಳಲ್ಲ, ಬಹುಪಾಲು ಅನುವಾದಗಳು. 'ಶ್ರೀ' ಅವರ ಈ ಅನುವಾದಗಳು ಪ್ರಕಟವಾಗುವ ಮುನ್ನವೇ ಶ್ರೀಹಟ್ಟಂಗಡಿ ನಾರಾಯಣ ರಾಯರಂತಹವರು ಕೆಲವು ಒಳ್ಳೆಯ ಅನುವಾದಗಳನ್ನು ಮಾಡಿದ್ದರು. ಆದರೆ 'ಶ್ರೀ' ಅವರ ಈ ಕೃತಿ ಒಂದು ಶಕ್ತಿಯೇ ಆಯಿತು.

"ಇಂಗ್ಲಿಷ್ ಗೀತೆಗಳು" ಹಲವು ರೀತಿಗಳಲ್ಲಿ ಒಂದು ಮೈಲಿಗಲ್ಲಾಯಿತು. ಕನ್ನಡ ಪ್ರೇಮವನ್ನು ಕನ್ನಡ ನಾಡಿನ ಪ್ರೇಮವನ್ನು ಹಾಡಿತು. ನವೋದಯ ಕಾವ್ಯದ ಮುಖ್ಯ ಲಕ್ಷಣಗಳನ್ನು ಆ ಕಾವ್ಯಕ್ಕೆ ಹೆಬ್ಬಾಗಿಲಾದ, ಸುವರ್ಣ ದ್ವಾರವಾದ ಈ ಸಂಗ್ರಹದಲ್ಲಿ ಕಾಣಬಹುದು. ಸಾಮಾನ್ಯ ಮನುಷ್ಯನ ಭಾವನೆಗಳಿಗೆ, ಸುಖ ದುಃಖಗಳಿಗೆ ಬೇಸರ ಹಂಬಲಗಳಿಗೆ ಅಭಿವ್ಯಕ್ತಿ ದೊರೆತಿದ್ದು, ಎಲ್ಲ ಮನುಷ್ಯರೂ ಸಮಾನ, ಎಲ್ಲ ಮನುಷ್ಯರ ಭಾವನೆಗಳೂ ಅನುಭವಗಳೂ ಕಾವ್ಯದ ವಸ್ತುವಾಗಬಹುದು ಎಂದು ಸ್ಪಷ್ಟವಾಯಿತು. ನಿಸರ್ಗವು ಮನುಷ್ಯನಿಗೆ ಹತ್ತಿರವಾಯಿತು, ಅವನ ಭಾವನಾ ಪ್ರಪಂಚದ ಭಾಗವಾಯಿತು. ಕವಿ, ಓದುಗರ ಸಂಬಂಧದಲ್ಲಿ ಕ್ರಾಂತಿಯನ್ನೆ ಉಂಟು ಮಾಡಿತು. ಅವನು ಎತ್ತರದಲ್ಲಿ ನಿಂತು ಬಾಳನ್ನೆಲ್ಲ ಸಮೀಕ್ಷಿಸುವ ಮಹಾನುಭಾವನಾಗಿರಲಿಲ್ಲ. ಸಾಮಾನ್ಯ ಮನುಷ್ಯನಿಗಿಂತ ಸೂಕ್ಷ್ಮ ಸಂವೇದನೆಯ, ಸಾಮಾನ್ಯ ಮನುಷ್ಯನಿಗಿಲ್ಲದ

ಭಾಷೆಯ ಭಾಗ್ಯವನ್ನು ಪಡೆದ, ಆದರೆ ತಾನೂ ಮನುಷ್ಯನೇ ಆದ ವ್ಯಕ್ತಿ. ಇಲ್ಲಿನ ಭಾಷೆ ನಿತ್ಯ ಜೀವನದ ಭಾಷೆಯಿಂದ ದೂರವಿಲ್ಲ. ಇದು ನಿತ್ಯ ಜೀವನದ ಭಾಷೆಯೇ ಎನ್ನುವಂತಿಲ್ಲ. ಕಾವ್ಯಕ್ಕೆ ಅಗತ್ಯವಾದ ಬಗೆಯನ್ನು, ಭಾವಗೌರವವನ್ನು ಶ್ರೀಯುತರು ತಂದುಕೊಟ್ಟರು. ಅದಕ್ಕೆ ಈ ಭಾಷೆ ನಿತ್ಯ ಜೀವನದ ಭಾಷೆಯಿಂದ ದೂರವಿಲ್ಲ !

ಶ್ರೀಯವರನ್ನು ಕವಿಗಳ ಕವಿ ಎನ್ನಬಹುದು. ಆಧುನಿಕ ಯುಗದಲ್ಲಿ ಕವಿರಾಜಮಾರ್ಗವನ್ನು ತೋರಿಸಿಕೊಟ್ಟವರು ಅವರು. ಆಧುನಿಕ ಜಗತ್ತಿನಲ್ಲಿ ಸೃಷ್ಟಿಯಾದ ಕನ್ನಡ ಕಾವ್ಯಕ್ಕೆ ಆಧುನಿಕತೆಯನ್ನು ತಂದುಕೊಟ್ಟರು.

ಗಮನಿಸಬೇಕಾದ ಮತ್ತೊಂದು ಅಂಶವಿದೆ. ಆವರೆಗೆ ಕನ್ನಡಕ್ಕೆ ಅನುವಾದವಾಗಿದ್ದ ಕಾವ್ಯ ಬಹುಮಟ್ಟಿಗೆ ಸಂಸ್ಕೃತದಿಂದ ಕನ್ನಡ ಜನತೆಯ ಸಂಸ್ಕೃತಿಯಲ್ಲೆ, ಕನ್ನಡಕ್ಕೆ ಅಷ್ಟೇನೂ ದೂರವಲ್ಲದ ಸಂಸ್ಕೃತ ಭಾಷೆಯಿಂದ ಆಚಾರ್ಯ 'ಶ್ರೀ' ಅವರು ಕನ್ನಡ ಜನತೆಯ ಸಂಸ್ಕೃತಿಗೆ ತೀರ ಭಿನ್ನವಾದ ಸಂಸ್ಕೃತಿಯಲ್ಲಿ ಕನ್ನಡ ಭಾಷೆಯೊಡನೆ ಯಾವ ಮಾಧ್ಯಮ ಇಲ್ಲದ ಇಂಗ್ಲಿಷ್ ಭಾಷೆಯಿಂದ ಕವನಗಳನ್ನು ಆರಿಸಿಕೊಂಡರು. ಇದರಲ್ಲಿ ಅವರು ಸಾಧಿಸಿದ ಯಶಸ್ಸು ಅವರು ಈ ಬಗೆಯ ಅನುವಾದದ ಸಮಸ್ಯೆಗಳನ್ನೂ ಸವಾಲುಗಳನ್ನೂ ಕುರಿತು ಎಷ್ಟು ಯೋಚಿಸಿದ್ದರು ಎನ್ನುವುದನ್ನು ತೋರಿಸುತ್ತದೆ.

ಬಹು ಮುಖ್ಯವಾದ ಸಂಗತಿ ಎಂದರೆ ಈ ಸಂಗ್ರದಿಂದ ಭಾವಗೀತೆ ಅಥವಾ ಲಿರಿಕ್ ಕನ್ನಡ ಕಾವ್ಯಲೋಕದಲ್ಲಿ ಪ್ರಧಾನ ಸ್ಥಾನವನ್ನು ಪಡೆಯಿತು. ಭಾವಗೀತಾತ್ಮಕ ಪ್ರತಿಭೆಗೆ ಹೆದ್ದಾರಿ ನಿರ್ಮಾಣವಾಯಿತು. ಭಾವಗೀತೆಯ ವ್ಯಾಪ್ತಿಯ–rangeನ ಅನಾವರಣವಾಯಿತು. ಯಾವ ಸಾಹಿತ್ಯದಲ್ಲಿಯೇ ಆಗಲಿ ಭಾವಗೀತೆ ಆ ಭಾಷೆಯನ್ನಾಡುವ ಸಾಮಾನ್ಯ ಮನುಷ್ಯನಿಗೂ 'ಈ ಸಾಹಿತ್ಯ ನನ್ನದು' ಎನ್ನಿಸುತ್ತದೆ.

ಸಾಮಾನ್ಯ ಮನುಷ್ಯನ ಕಷ್ಟ ಸುಖಗಳು, ಪ್ರೇಮ ಸ್ನೇಹಗಳು, ಅನುಭವಗಳು ಆ ಸಾಹಿತ್ಯದ ಭಾವಗೀತೆಗಳಲ್ಲಿ ಅಭಿವ್ಯಕ್ತಿ ಪಡೆಯುತ್ತವೆ. 'ಇಂಗ್ಲಿಷ್ ಗೀತೆಗಳ' ಕವನಗಳು ಪ್ರಕಟವಾಗುವವರೆಗೆ ಗಂಡು–ಹೆಣ್ಣಿನ ಪ್ರೇಮವು ಶಕುಂತಳೆ–ದುಷ್ಯಂತ, ಸುಭದ್ರೆ–ಅರ್ಜುನ ಇಂತಹ ಪೌರಾಣಿಕ ವ್ಯಕ್ತಿಗಳ ಮೂಲಕ ಪ್ರಕಟವಾಗುತ್ತಿತ್ತು. ಈಗ ಮಾದ, ಮಾದಿಯರ ಪ್ರೇಮವು ಕಾವ್ಯದಲ್ಲಿ ಸ್ಥಾನ ಪಡೆಯಿತು. ಸಾಮಾನ್ಯ ಮನುಷ್ಯನೂ 'ನನ್ನ ಪ್ರೇಮದ ಹುಡುಗಿ ತಾವರೆಯ ಹೊಸಕೆಂಪು' ಎಂದು ಹಾಡುವಂತಾಯಿತು. ಆವರೆಗೆ ಕನ್ನಡ ಕಾವ್ಯದಲ್ಲಿ ಪುಟ್ಟ ಹುಡುಗಿಯ 'ಕುಡಿಯೊ ಕಂದ, ಕುಡಿಯೊ' ಎಂಬ ಮತು ಎಲ್ಲಿ ಕೇಳಿ ಬಂದಿತ್ತು ? ಬಾನಾಡಿಯಂತಹ ಪಕ್ಷಿಯು ಗಾಢವಾದ ಚಿಂತನೆಗೆ ಕಾರಣವಾಗಿದ್ದುದೆಲ್ಲಿ ? ರಾಜಕುಮಾರಿ ಕುಂತಿಯು ಮದುವೆಯಾಗದೆ ಮಗುವನ್ನು ಪಡೆದ ಸಂಕಟವನ್ನು ಕಾವ್ಯ ಹೇಳಿತ್ತು, ಆದರೆ ಸಾಮಾನ್ಯ ಹೆಂಗಸು ಗಂಡಸಿನಿಂದ ಮೋಸಹೋದ ಯಾತನೆಯನ್ನು 'ದುಃಖಸೇತು' ಕವನ ಓದುಗನಿಗೆ ತಂದುಕೊಟ್ಟಿತು. ಗರ್ಭಿಣಿಯಾಗಿ ನದಿಯಲ್ಲಿ ಮುಳುಗಿ ಆತ್ಮಹತ್ಯ ಮಾಡಿಕೊಂಡ ಹೆಣ್ಣನ್ನು ಕಂಡು

ಅಹ, ಎಲ್ಲಡಗಿತೊ
ಆರ್ಯ ಧರ್ಮದ ಕರುಣ,
ಆರ್ಯ ಜನಗಳ ಮರುಕ
ಉರಿಯುವನೆ ಬಲ್ಲ
ಎನ್ನುವ ಅನುಕಂಪದ ಮಾತು ಎಲ್ಲಿ ಕೇಳಿ ಬಂದಿತ್ತು ?

ಕನ್ನಡ ಭಾವಗೀತೆಯ ಭಂಡಾರದ ನಿಧಿಯನ್ನು ಲಭ್ಯಮಾಡಿಕೊಟ್ಟು, 'ಶ್ರೀ' ಅವರು ಬಹುದೊಡ್ಡ ಉಪಕಾರ ಮಾಡಿದರು.

'ಇಂಗ್ಲಿಷ್ ಗೀತೆಗಳ'ನ್ನು ಕುರಿತು ಹೇಳಬಹುದಾದ ಮಾತುಗಳು ಹಲವು. ಇನ್ನೊಂದೇ ಅಂಶವನ್ನು ಪ್ರಸ್ತಾಪಿಸುತ್ತೇನೆ. ಈ ಸಂಗ್ರಹದಲ್ಲಿ ಛಂದಸ್ಸಿನ ಪ್ರಯೋಗ, ಶ್ರೀಮಂತಿಕೆ, ವೈವಿಧ್ಯ ಬೆರಗುಗೊಳಿಸುವಂತಹದು. ಶ್ರೀಯವರು ಕವನದ ಛಂದಸ್ಸು, ಭಾಷೆ, ಸಂವೇದನಗಳ ಸಂಬಂಧವನ್ನು ಗುರುತಿಸಿದರು. ಇದರಿಂದ ಅವರು ಕವನಗಳ ಅನುವಾದಕ್ಕೆ ಒಂದು ಹೆದ್ದಾರಿಯನ್ನು ಹಾಕಿಕೊಟ್ಟರು. ಅವರಿಗೆ ಮೊದಲು ಇಂಗ್ಲಿಷ್ ಕವನಗಳನ್ನುಅನುವಾದ ಮಾಡಿದವರು ಸಾಮಾನ್ಯವಾಗಿ ಹಿಂದಿನ ಕಂದ ಅಥವಾ ವೃತ್ತಗಳನ್ನು ಬಳಸಿದರು. ಶ್ರೀಯವರು ಮೂಲಕ್ಕೆ ಸಮೀಪವಾದ ಛಂದಸ್ಸು, ಕವನದ ಸಂವೇದನೆಗೆ ಹೊಂದಿಕೊಂಡ ಭಾಷೆ ಇವನ್ನು ಬಳಸಿದರು. ಇದರಿಂದಲೇ ಅವರ 'Lead, Kindly Linght' 'ಅನ್ನು' 'ಕರುಣಾಳು ಬಾ ಬೆಳಕೆ' ಎನ್ನುವ ಅಷ್ಟಷಟ್ಪದಿಯಾಗಿ ಅನುವಾದಿಸಿ ಕಾವ್ಯದ ಅನುವಾದದಲ್ಲಿ ಒಂದು ಪವಾಡವನ್ನೆ ಸಾಧಿಸಿದರು. ಈ ಸಂಗ್ರಹದ ಕವನಗಳಲ್ಲಿ ಮತ್ತೆ ಮತ್ತೆ ಅನುವಾದದ ನಿಖರತೆ, ಸೊಬಗು ಸಂತೋಷವನ್ನುಂಟು ಮಾಡುತ್ತವೆ. 'ದೀರ್ಘವಾದ ಭಾಗಗಳ ನಿದರ್ಶನಗಳನ್ನು ಕೊಡದೆ ಪಂಕ್ತಿಗಳ ನಿದರ್ಶನಗಳನ್ನು ಕೊಡುತ್ತಿದ್ದೇನೆ.

But westward, look, the land in bright
ಹಿಂದೆ, ಪಡುವಲ ನೋಡು, ನೆಲದ ಸಂಪತ್ತು !

For while the tired waves, vainly breaking
ತೆರೆ ಬಳಲಿ, ಹೊಯ್ದು ಹೊಯ್ದುರುಳುಗಳ ಚೆಲ್ಲಿ

ತಿ.ನಂ.ಶ್ರೀ. ಅವರು ಗುರುತಿಸಿದಂತೆ, ಆಚಾರ್ಯ ಶ್ರೀ ಅವರು ಛಂದಸ್ಸಿನ ವಿಷಯದಲ್ಲಿ ಒಂದು ಕ್ರಾಂತಿಯನ್ನೆ ಮಾಡಿದರು.

ಇಂದು ಲೋಕಾರ್ಪಣೆಯಾದ ಆವೃತ್ತಿಯಲ್ಲಿ ಇಂಗ್ಲಿಷ್ ಮೂಲ ಕವನಗಳನ್ನು ಸೇರಿಸಿರುವುದು ಒಳ್ಳೆಯ ಕ್ರಮ. ಅನುವಾದವನ್ನು ಅಭ್ಯಾಸ ಮಾಡಲು ನೆರವಾಗುತ್ತದೆ.

ಈ ಸಂಗ್ರಹದ ಒಂದು ಕವನವನ್ನು ಕುರಿತು ಎರಡು ಮಾತು ಹೇಳಬೇಕು.

ಇದು 'ಎರಡು ಮನಸ್ಸು' ಎಂಬ ಕವನ : "ಹೋಗಬಾರದೆ ಅವನು ನಾನು" ಎಂದು ಪ್ರಾರಂಭವಾಗುತ್ತದೆ. ಇದಕ್ಕೆ ಬೇರೆ ಕವಿಯ ಇಂಗ್ಲಿಷ್ ಮೂಲ ಕವನವಿಲ್ಲ. ಇದು 'ಶ್ರೀ' ಅವರ ಕವನವೇ ಅವರು ಬದುಕಿನಲ್ಲಿ ಬಹಳ ನೋವನ್ನು ಅನುಭವಿಸಿದರು. ಮಗ ಕುರುಡನಾದ, ಚಿಕ್ಕ ವಯಸ್ಸಿನ ಅಳಿಯ ತೀರಿಕೊಂಡರು, ಹೆಂಡತಿಯೂ ಹೋಗಿಬಿಟ್ಟರು. ತಮ್ಮ ದುಃಖದ ಭಾವಕ್ಕೆ ಶ್ರೀ ಅವರು ಇಲ್ಲಿ ದನಿ ಕೊಟ್ಟಿದ್ದಾರೆ.

ಇಂದು ಬಿಡುಗಡೆಯಾಗುತ್ತಿರುವ ಮತ್ತೊಂದು ಪುಸ್ತಕ 'ಕನ್ನಡ ಮಾತು ತಲೆಯೆತ್ತುವ ಬಗೆ' ಸರಿಯಾಗಿ ಒಂದುನೂರು ವರ್ಷಗಳ ಹಿಂದೆ ಶ್ರೀ ಅವರು ಮಾಡಿದ ಭಾಷಣ. ೨೭ ವರ್ಷ ವಯಸ್ಸಿನ ಈ ಇಂಗ್ಲಿಷ್ ಪ್ರೊಫೆಸರು ಎಷ್ಟು positive ಆಗಿ, ಕೂಲಂಕಶವಾಗಿ, ಕ್ರಿಯಾಶೀಲವಾಗಿ ಯೋಚನೆ ಮಾಡಿದ್ದಾರೆ ಎಂಬುದನ್ನು ಗಮನಿಸಿದಾಗ ಆಶ್ಚರ್ಯವಾಗುತ್ತದೆ. ಇಲ್ಲಿರುವುದು ಕನ್ನಡ ಭಾಷೆ ತಲೆ ಎತ್ತಬೇಕೆಂಬ ಕಳಕಳಿ ಅಷ್ಟೇ ಅಲ್ಲ ಮೂರ್ತವಾದ, ಕ್ರಿಯಾಶೀಲವಾದ ಚಿಂತನೆ ಶ್ರೀ ಅವರ ತಾಳ್ಮೆ ಅಷ್ಟೇ ಗಮನಾರ್ಹ. ದೇಶಭಾಷೆಗಳು ಪ್ರಬಲವಾಗುವುದಕ್ಕೆ ಇಷ್ಟವಿಲ್ಲದವರನ್ನು ಕುರಿತು ತೀವ್ರ ಅಸಮಾಧಾನ ವ್ಯಕ್ತಪಡಿಸುವರೆಂದೇ ನಾವು ನಿರೀಕ್ಷಿಸಬಹುದು. ಆದರೆ ಅವರ ಮಾತು ಕೇಳಿ, "ಹೀಗೆ, ಎಂದರೆ ಇಂಗ್ಲಿಷ್ ಅಥವಾ ಹಿಂದಿ ಒಂದು ಭಾಷೆ ಸಾಕು ಎಂದು ಯೋಚಿಸತಕ್ಕವರು ತಿಳಿಯದವರು, ಕೆಡುಕಿಗಳು, ಅಭಿಮಾನವಿಲ್ಲದವರು ಎಂದು ಹೇಳುವುದಕ್ಕಾಗುವುದಿಲ್ಲ. ಇವರು ಬಹು ದೂರ ಯೋಚನೆ ಮಾಡಿ, ಒಗ್ಗಿ ಬಂದ ಪಕ್ಷಪಾತವನ್ನು ತೊರೆದು, ರಾಜ್ಯಕ್ಕೆಲ್ಲ ಉತ್ತಮವಾಗಿಯೂ ಶ್ರೇಯಸ್ಕರವಾಗಿಯೂ ಇರುವ ಮಾರ್ಗವನ್ನು ಉಪದೇಶ ಮಾಡುತ್ತಿರುವರು." "ಪ್ರತಿಯೊಬ್ಬ ವಿದ್ಯಾವಂತನೂ ಇಂಗ್ಲಿಷ್, ಸಂಸ್ಕೃತ ತನ್ನ ಕಡೆಯ ದೇಶಭಾಷೆ ಈ ಮಾತನ್ನು ಚೆನ್ನಾಗಿ ತಿಳಿದಿರಬೇಕು", ಎನ್ನುತ್ತಾರೆ. ಈ ಮಾತನ್ನೂ ಕಲಿಸತಕ್ಕ ಭಾರ ವಿಶ್ವವಿದ್ಯಾಲಯದ ಪಂಡಿತರ ಮೇಲೆ ಬಿದ್ದಿದೆ ಎನ್ನುತ್ತಾರೆ.

ಈ ಭಾಷಣದ ಹೃದಯ ಎನ್ನಬಹುದಾದ ಚಿಂತನೆಯನ್ನು ಒಂದು ಮರೆಯಲಾಗದ ವ್ಯಾಕ್ಯದಲ್ಲಿ ಹೇಳುತ್ತಾರೆ. "ನಮ್ಮ ಭಾಷೆಯನ್ನು ನಾವು ಎತ್ತದೆ ಹೋದರೆ, ಎತ್ತುವವರು ಯಾರು ? ಎತ್ತುವುದಕ್ಕೆ ನಿಂತರೆ ತಡೆಯುವವರು ಯಾರು ? "ಇಲ್ಲಿ ಒತ್ತಿ ಹೇಳಬೇಕಾದದ್ದು 'ನಾವು' ಎನ್ನುವ ಪದವನ್ನು ಸರ್ಕಾರ ಮಾಡಬೇಕು ಎನ್ನುವುದಕ್ಕಿಂತ ಒತ್ತು ಬೀಳುವುದು ನಾವು ಮಾಡಬೇಕು ಎನ್ನುವುದರ ಮೇಲೆ. ಭಾಷೆ-ಸಾಹಿತ್ಯಗಳ ಬೆಳವಣಿಗೆಯ ವಿಷಯದಲ್ಲಿ ಸರ್ಕಾರಕ್ಕೆ ದೊಡ್ಡ ಹೊಣೆಯೇ ಉಂಟು. ಆದರೆ ಸರ್ಕಾರ ಮಾಡಬೇಕೆನ್ನುವುದಕ್ಕೆ ಮೊದಲು ನಾವು ಕೇಳಿಕೊಳ್ಳಬೇಕಾದದ್ದು, ನಾವು ಕನ್ನಡಿಗರು ನಮ್ಮ ಭಾಷೆ-ಸಾಹಿತ್ಯಗಳಿಗಾಗಿ ಏನು ಮಾಡಬಹುದು, ಮಾಡಬೇಕು.

ಜೊತೆಗೆ ಶ್ರೀ ಅವರಿಗೆ ಜನಸಾಮಾನ್ಯರಿಗೆ, ಕೆಳವರ್ಗದವರಿಗೆ ನಾಡಿನ ಪ್ರಗತಿಯಲ್ಲಿ ಭಾಗ ಸಲ್ಲಬೇಕೆಂಬ ಕಳಕಳಿ ಬಲವಾಗಿದೆ. ಮೇಲು ವರ್ಗದವರು

ಗ್ರಂಥಗಳನ್ನು ಕೆಳವರ್ಗದವರ ಏಳಿಗೆಗೆ ಬರೆಯಲಿಲ್ಲ, ತಮ್ಮಲ್ಲೇ ಬಚ್ಚಿಟ್ಟುಕೊಂಡರು ಎಂದು ಹರಿತವಾದ ಮಾತುಗಳಲ್ಲಿ ಆಕ್ಷೇಪಿಸುತ್ತಾರೆ. ಶ್ರೀ ಅವರ ಭಾಷಣದ ಸಮಗ್ರತೆಯ ಒಂದು ಮುಖ ಇದು. ಇಡೀ ಕನ್ನಡ ಸಮುದಾಯದ ಏಳಿಗೆ ಅವರಿಗೆ ಮುಖ್ಯ.

ಶ್ರೀಯವರು ಸಂಪ್ರದಾಯ, ಸ್ವತಂತ್ರ ಮಾರ್ಗ ಇವುಗಳ ಪ್ರಶ್ನೆಯನ್ನು ಎತ್ತಿಕೊಳ್ಳುತ್ತಾರೆ. ಹಿಂದಿನ ಕಾವ್ಯಗಳ ಅಷ್ಟಾದಶ ವರ್ಣನೆಗಳ ಹಾವಳಿಯನ್ನು ಗಮನಿಸುತ್ತಾರೆ. ಆದರೂ ತಾಯಿಬೇರನ್ನು ಕಡಿದು ಮರವನ್ನು ಚಿಗುರಿಸುವುದು ಸಾಧ್ಯವಿಲ್ಲ ಎಂಬ ವಿವೇಕದ ಮಾತನ್ನು ಹೇಳುತ್ತಾರೆ. ಹೊಚ್ಚ ಹೊಸ ಮಾರ್ಗವನ್ನು ನಿರ್ಮಿಸುವ ಈ ವಿದ್ವಾಂಸರು ಪೂರ್ವದ ಕಾವ್ಯಗಳನ್ನು ಅಧ್ಯಯನ ಮಾಡಬೇಕು, ದೇಶದಲ್ಲಿ ಹುಳು ತಿಂದುಹೋಗದೆ ಉಳಿದಿರುವ ಗ್ರಂಥಗಳನ್ನೆಲ್ಲ ಶೇಖರಿಸಿ ಅಚ್ಚು ಮಾಡಬೇಕು, ಹಿಂದಿನ ಸಂಸ್ಕೃತ ಮಾರ್ಗವನ್ನು ಈಗಿನ ಇಂಗ್ಲಿಷ್ ಮಾರ್ಗವನ್ನು ಪ್ರಕೃತದಲ್ಲಿ ಜನರ ಸ್ವಭಾವ ಅಭಿಪ್ರಾಯ ಲಾಭಗಳನ್ನು ಗಣನೆಗ ತಂದು ವಿಪರೀತಕ್ಕೆ ಹೋಗದೆ ಉತ್ತಮ ಪಕ್ಷವನ್ನೆ ಹಿಡಿಯಬೇಕು ಎನ್ನುತ್ತಾರೆ. ಸಂಸ್ಕೃತದಲ್ಲಿರುವ ಶ್ರೇಷ್ಠ ಸಾಹಿತ್ಯ, ಇಂಗ್ಲಿಷ್‌ನಲ್ಲಿರುವ ಶ್ರೇಷ್ಠ ಸಾಹಿತ್ಯ ಎರಡೂ ಭಾಷಾಂತರಗಳಿಂದ ಕನ್ನಡಿಗರಿಗೆ ಲಭ್ಯವಾಗಬೇಕು ಎಂದು ಶ್ರೀ ಅವರ ಆಶಯ.

'ಶ್ರೀ' ಅವರ ಉಪನ್ಯಾಸ ನಡೆದು ಒಂದು ಶತಮಾನ ಕಳೆದಿದೆ. ಐಟಿ, ಮೊಬೈಲ್‌ಫೋನ್, ಎಂ. ಜಿ. ರೋಡಿನಲ್ಲಿ ಹೊಸ ವರ್ಷಕ್ಕೆ ಸ್ವಾಗತಗಳ ಯುಗದಲ್ಲಿ ನಮ್ಮ ಸಮಸ್ಯೆಗಳು ಬೇರೆ. ಅವರು ಮಾತನಾಡುತ್ತಿದ್ದುದ್ದು ಸಂಸ್ಕೃತದ ಪ್ರಾಬಲ್ಯದ ದಿನಗಳಲ್ಲಿ. ಈಗ ಸಂಸ್ಕೃತ ಭೂಯಿಷ್ಟವಾದ ಕನ್ನಡವನ್ನು ಬರೆಯುವ ಅಪಾಯ ಹೆಚ್ಚಿಲ್ಲ. ಕನ್ನಡದಲ್ಲಿ ನಾಟಕಗಳು ಇಲ್ಲ ಎನ್ನುವ ಶ್ರೀ ಅವರ ಕೊರಗಿಗೆ ಇವತ್ತು ಕಾರಣವಿಲ್ಲ. ಶ್ರೀ ಅವರ ಕೆಲವು ಅಭಿಪ್ರಾಯಗಳು ನಮ್ಮ ಯುಗಕ್ಕೆ ಹೊಂದದೆ ಹೋಗಬಹುದು. ವಿದ್ಯಾವಂತರಾದವರು ಕನ್ನಡ, ಸಂಸ್ಕೃತ ಮತ್ತು ಇಂಗ್ಲಿಷ್ ಕಲಿಯಬೇಕೆಂದು ಅವರ ಅಭಿಪ್ರಾಯ. ಸಂಸ್ಕೃತವನ್ನು ಎಲ್ಲ ವಿದ್ಯಾವಂತರೂ ಕಲಿಯಬೇಕು ಎಂಬ ಮಾತು ನಮಗೆ ಒಪ್ಪಿಗೆಯಾಗದೆ ಹೋಗಬಹುದು. ಹೊಸ ರಾಷ್ಟ್ರವಾಗಿ ಇಸ್ರೇಲ್ ಜನ್ಮ ತಾಳಿದಾಗ ಐನ್‌ಸ್ಟೀನ್ ಅವರ ಅಭಿಪ್ರಾಯದಂತೆ ಎರಡು ಸಾವಿರ ವರ್ಷಗಳ ಹಿಂದಿನ ಹೀಬ್ರೂವನ್ನು ರಾಜ್ಯಭಾಷೆ ಮಾಡಿಕೊಂಡಿದ್ದು ಬುದ್ಧಿವಂತಿಕೆಯ ಮಾರ್ಗವಾಯಿತು. ಭಾರತವು ಬೇರೆ ಮಾರ್ಗವನ್ನು ಆರಿಸಿಕೊಂಡಿತು. ಆದರೆ ಕೆಲವು ಮೂಲ ಸಮಸ್ಯೆಗಳು ಉಳಿದಿವೆ. ನಿರ್ದಿಷ್ಟ ಸಮಸ್ಯೆಗಳು ಹಾಗಿರಲಿ, ಮುಖ್ಯವಾದದ್ದು, ಶ್ರೀ ಅವರ ಉಪನ್ಯಾಸದಲ್ಲಿ ಕಾಣುವ ಮನೋಧರ್ಮ–ವಿದ್ಯಾಭ್ಯಾಸದ, ಉಪಯುಕ್ತ ಗ್ರಂಥಗಳ ಪ್ರಯೋಜನ ಶ್ರೇಣೀಕೃತ ಸಮಾಜದ ಕೆಳವರ್ಗದವರಿಗೂ ಮಹಿಳೆಯರಿಗೂ ತಲುಪಬೇಕು, ಹಿಂದಿನ ಸಾಹಿತ್ಯದ ಜೊತೆಗೆ ಫಲಪ್ರದವಾದ ಸಂಬಂಧವನ್ನು ಇಟ್ಟುಕೊಳ್ಳಬೇಕು, ಎಲ್ಲ

ಭಾಷೆಗಳಿಂದಲೂ ಉತ್ತಮವಾದ ಸಾಹಿತ್ಯವನ್ನು ಅನುವಾದಿಸಿ ಕನ್ನಡಕ್ಕೆ ತಂದುಕೊಳ್ಳಬೇಕೆಂಬ ಸಲಹೆ ಇಂದಿಗೂ ಪ್ರಸ್ತುತ. ಇಂದು ನಮಗೆ ಭಾಷೆ ತಲೆ ಎತ್ತುವುದೆಂದರೆ, ಎಲ್ಲ ಘಟ್ಟಗಳಲ್ಲಿ ಶಿಕ್ಷಣದ ಮಾಧ್ಯಮವಾಗುವಂತೆ ಬೆಳೆಸುವುದು, ಅತ್ಯಂತ ಆಧುನಿಕ ಜ್ಞಾನವನ್ನು ನಿರೂಪಿಸಲು ಸಾಧ್ಯವಾಗುವಂತೆ ಬೆಳೆಸುವುದು, ಇದಕ್ಕೆ ಅಗತ್ಯವಾದಂತೆ ಭಾಷೆ ಬೆಳೆಸುವುದು, ಪುಸ್ತಕಗಳನ್ನು ಸಿದ್ಧಮಾಡುವುದು. ನಮ್ಮ ಕಿವಿಯಲ್ಲಿ ಅನುರಣನಗೊಳ್ಳಬೇಕಾದ, ಮನಸ್ಸಿನಲ್ಲಿ ಮಾರ್ನುಡಿಯಬೇಕಾದ ಮಾತು, "ನಮ್ಮ ಭಾಷೆಯನ್ನು ನಾವು ಎತ್ತದೆ ಹೋದರೆ, ಎತ್ತುವವರು ಯಾರು? ಎತ್ತುವುದಕ್ಕೆ ನಿಂತರೆ ತಡೆಯುವವರು ಯಾರು"

■

---

* ದಿನಾಂಕ : ೩–೧–೨೦೧೨ ರಂದು 'ಶ್ರೀ ಉತ್ಸವ'ದಂದು ಮಾಡಿದ ಅಧ್ಯಕ್ಷ ಭಾಷಣ.

ಕರ್ನಾಟಕ ಲೋಚನ
ಸಂಪುಟ ೨೬, ಸಂಚಿಕೆ ೧–೨
ಜನವರಿ–ಡಿಸೆಂಬರ್

೧೩. ಮೈದುನ ರಾಮಯ್ಯನ ಕಥೆ*

–ಪ್ರೊ॥ ಜಿ. ಅಬ್ದುಲ್ ಬಷೀರ್

ಹಿನ್ನೆಲೆ :

ಮೈದುನ ರಾಮಯ್ಯ ಹನ್ನೆರಡನೆಯ ಶತಮಾನದ ಒಬ್ಬ ವಚನಕಾರ; ತೆಲುಗುನಾಡಿನಿಂದ ಕಲ್ಯಾಣಕ್ಕೆ ಆಗಮಿಸಿದ ಒಬ್ಬ ಶಿವಶರಣ. ಈತನು ತನ್ನ ಮುಗ್ಧಭಕ್ತಿಗೆ ಹೆಸರಾದವನು. ಇವನ ಬದುಕಿನ ವಿವರಗಳನ್ನು ಈತನನ್ನು ಕುರಿತು ರಚಿತವಾದ ಜನಪದ ಕಥೆಗಳಿಂದಲೂ, ಶಿಷ್ಟಸಾಹಿತ್ಯ ಕೃತಿಗಳಿಂದಲೂ ಅರಿಯಬಹುದು. ಬಸವಣ್ಣನವರು ಪ್ರಾರಂಭಿಸಿದ ಸಾಮಾಜಿಕ ಕ್ರಾಂತಿಯಲ್ಲಿ ಈತನದು ಗಣನೀಯ ಪಾತ್ರವಾಗಿದ್ದಿರಬಹುದು. ಪಾಲ್ಕುರಿಕೆ ಸೋಮನಾಥನು ತನ್ನ ಕನ್ನಡ ಹಾಗೂ ತೆಲುಗು ಕೃತಿಗಳಲ್ಲಿ ಈತನನ್ನು ಸ್ಮರಿಸಿಕೊಂಡಿದ್ದಾನೆ. ಅಷ್ಟೇ ಅಲ್ಲದೆ ಸಿದ್ಧಜಂಜೇಶ, ಗುಬ್ಬಿಮಲ್ಲಣಾರ್ಯ ವಿರೂಪಾಕ್ಷ ಪಂಡಿತರೇ ಮುಂತಾದ ಕನ್ನಡ ಕವಿಗಳು ಈತನ ಬಗ್ಗೆ ಅನೇಕ ವಿವರಗಳನ್ನು ನೀಡಿದ್ದಾರೆ. ಶಂಕರ ದೇವ ಕವಿ ರಾಮಯ್ಯನನ್ನು ಕುರಿತು ರಗಳೆಯೊಂದನ್ನು ರಚಿಸಿದ್ದಾನೆ. ಅವನನ್ನು ಕುರಿತು ರಚಿತವಾದ ಕೃತಿಗಳಿಂದ ಲಭಿಸುವ ವಿವರಗಳು ಇಷ್ಟು :

ರಾಮಯ್ಯನು ಕೋಮಲವೂ ಮುಗ್ಧವೂ ಆದ ಭಕ್ತಿಗೆ ಹೆಸರಾದವನು; ಶಿವ–ಪಾರ್ವತಿಯರನ್ನೇ ತನ್ನ ಭಾವ– ಅಕ್ಕರೆಂದು ಭಾವಿಸಿದ ಈತನು ಅವರನ್ನು ಹಬ್ಬಕ್ಕೆ ಆಹ್ವಾನಿಸಿ, ಅವರ ದರ್ಶನ ಭಾಗ್ಯವನ್ನು ಪಡೆದು ಕೊನೆಗೆ ಮೈದುನ ರಾಮಯ್ಯನೆನಿಸಿದನು.

ಇನ್ನಿತರ ಶಿವಶರಣರಂತೆ ಈತನೂ ವಚನಗಳನ್ನು ರಚಿಸಿದ್ದಾನೆ.[೧] ಸದ್ಯಕ್ಕೆ

* ಸಂ:ಕೆ.ಸಿ. ಗುರುಮಲ್ಲದೇವರು : ಪ್ರ: ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು : ಪುಟಗಳು : xvi+೭೬ : ಬೆಲೆ ರೂ. ೭೦೦ : ೧೯೯೦.

೧. ಸಕಲ ಪುರಾತನರ ವಚನಗಳು : ಸಂ : ೨ : ಸಂ : ಡಾ॥ ಎಂ. ಎಸ್. ಸುಂಕಾಪುರ : ೧೯೭೯ :

ಈತನ ಆರುವಚನಗಳು ಲಭಿಸಿವೆ.[೨] ಈತನ ವಚನಗಳ ಅಂಕಿತ 'ಮಹಾಲಿಂಗ ಚೆನ್ನರಾಮಾ'. ರಾಮಯ್ಯನ ವಚನಗಳು ತುಂಬ ಸರಳವೂ ಸ್ವಾರಸ್ಯಪ್ರದವೂ ಆಗಿವೆ. ಅವುಗಳಲ್ಲಿ 'ಎರಡಳಿದು ಅಡಗಿದ ನಿಜಲಿಂಗೈಕ್ಯ' (೧೪೧೧); 'ಸಾತ್ವಿಕ ಸದ್ಗುರುವಿನ ಕರುಣೆ' (೧೪೧೨); 'ಮನಸ್ಸು' (೧೪೧೩) 'ಡಾಂಭಿಕ ಭಕ್ತಿ' (೧೪೧೪) ಎಂಬಿವೇ ಮುಂತಾದ ವಿಚಾರಗಳನ್ನು ನಿದರ್ಶನಗಳ ಮುಖಾಂತರ ನಿರೂಪಿಸಿದ್ದಾನೆ.

ಈತನು ಒಂದು ವಚನದಲ್ಲಿ (೧೪೪೨) 'ಬಸವಣ್ಣ, ನಂಬಿಯಣ್ಣ, ಜಗದೇವ, ಚೆನ್ನಬಸವಣ್ಣನವರನ್ನು ಭಕ್ತಿಯಿಂದ ಸ್ತುತಿಸಿದ್ದಾನೆ. ರಾಮಯ್ಯನ ವ್ಯಕ್ತಿತ್ವದ ಮಹತಿ ಮತ್ತು ತಾತ್ತ್ವಿಕ ನಿಷ್ಠೆಯ ಅರಿವಿಗಾಗಿ ಆತನ ಒಂದು ವಚನವನ್ನು ಗಮನಿಸಬಹುದು;

"ಎನಗೆ ನೀ ಕಟ್ಟಿದೊರೆಯೆಂಬಲ್ಲಿಗೆ ಕೇಳು, ಭಂಡಾರಿ ಬಸವಣ್ಣನೆ
ಎನಗೆ ನೀ ಕಟ್ಟಿದೊರೆಯೆಂಬಲ್ಲಿಗೆ ಕೇಳು, ನಂಬಿಯಣ್ಣನೆ
ಎನಗೆ ನೀ ಕಟ್ಟಿದೊರೆಯಿಂಬಲ್ಲಿಗೆ ಕೇಳು, ಜಗದೇವನೆ
ಎನಗೆ ನೀ ಕಟ್ಟಿದೊರೆಯೆಂಬಲ್ಲಿಗೆ ಕೇಳು, ಚೆನ್ನಬಸವಣ್ಣನೆ.
ಆನೆ ಮುಂದಲ್ಲಿ ಸುಂಡಾಳವೆ ಹೇಳಾ।
ನಾನಿಲ್ಲದಿರ್ದಡೆ ನೀನಿಲ್ಲ ನೀನಿಲ್ಲದಿರ್ದಡೆ ನಾನಿಲ್ಲ.
ನಾನು ನೀನೆಂಬುದಂತಿರಲಿ.
ಹಿಡಿಯೊ, ಮುಡಿಯೊ ಮಾಡಿದಂತೆಯಪ್ಪೆನು
ನಗುವುದು ಕೆಲಕಡೆ ನೋಡಾ.
ಸಾತ್ವಿಕ ಸಜ್ಜನ ಸದ್ಗುರುವಿನಿಂದ ಬದುಕಿದೆ ನಾನು
ನಿನಗಂಜೆ ಮಹಾಲಿಂಗ ಚೆನ್ನರಾಮಾ"

ರಾಮಯ್ಯನ ವಚನ ರಚನಾ ವಿಧಾನವನ್ನರಿಯಲು ಹಾಗೂ ಆತನು ಉಪಮೆ–ದೃಷ್ಟಾಂತಗಳನ್ನು ಹೇಗೆ ಧಾರಾಳವಾಗಿ ಬಳಸುತ್ತಾನೆಂಬುದಕ್ಕೆ ಒಂದೆರಡು ವಚನಗಳನ್ನು ಉದಾಹರಿಸಬಹುದು.'

೧. "ಆಲಿಕಲ್ಲು, ನೀರೊಳಗೆ ಬೆರೆಸಿದಂತೆ,
ಉಪ್ಪಿನ ಹರಲ, ಉದಕದೊಳಗೆ ಹಾಕಿದಂತೆ,
ಕರ್ಪುರದ ಹಣತೆಯಲ್ಲಿ ಜ್ಯೋತಿಯ ಬೆಳಗ ಬೆರೆಸಿದಂತೆ,
ಮಹಾಲಿಂಗ ಚೆನ್ನರಾಮೇಶ್ವರ ಲಿಂಗದಲ್ಲಿ ಬೆರೆಸಿ,
ಎರಡಳಿದಡಗಿದ ನಿಜಲಿಂಗೈಕ್ಯನು" (೧೪೧೧)

---

೨. ಇತ್ತೀಚಿನ ಕೃತಿಯಲ್ಲಿ ಈತನ ಆರು ವಚನಗಳು ಪ್ರಕಟವಾಗಿವೆ. ನೋಡಿ : ಸಮಗ್ರ ವಚನ ಸಂಪುಟ : ಸಂಕೀರ್ಣ ವಚನ ಸಂಪುಟ : ೩ : ಸಂ ಡಾ॥ ಬಿ. ಆರ್. ಹಿರೇಮಠ : ಪ್ರ : ಕರ್ನಾಟಕ ಸರ್ಕಾರ; ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು; ೧೯೯೩ : ಪುಟ ೪೯೪–೪೯೫ : ವಚನ ಸಂಖ್ಯೆ ೧೪೧೧–೧೪೧೬.

೨. ಮಳಲಲ್ಲಿ ರಸ ಉಂಟೆ ? ನೆಳಲಿಗೆ ತಡೆಯುಂಟೆ ?
ರಣದಲ್ಲಿ ತಪ ಉಂಟೆ ?
ನೇಹತಪ್ಪಿದಲ್ಲಿ ಮೋಹವನರಸಲುಂಟೆ ?
ಮಹಾಲಿಂಗ ಚೆನ್ನರಾಮ
ಮನ ಮುರಿದ ಬಳಿಕ, ಕಂಗಳಿಗೆ ವಿಷವಯ್ಯಾ" (೧೪೧೩)

೩. ಹೊನ್ನು ಪ್ರಾಣನಾಯಕ, ಹೆಣ್ಣು ಜೀವರತ್ನ
ಮಣ್ಣು ಮೈಸಿರಿಯ ಕೇಡು;
ಈ ಮೂರು ಮಹಾಲಿಂಗ ಚೆನ್ನರಾಮಯ್ಯಂಗೆ ಸಲ್ಲುತವಲ್ಲ" (೧೪೧೬).

ಕೃತಿ–ಕವಿ–ಕಾಲ :

ವಚನಕಾರ ಮೈದುನ ರಾಮಯ್ಯನನ್ನು ಕುರಿತು ರಚಿತವಾಗಿರುವ ಕೃತಿಯೇ 'ಮೈದುನ ರಾಮಯ್ಯನ ಕಥೆ'. ಈ ಕೃತಿಯ ಕರ್ತೃ ಯಾರೆಂದು ಗೊತ್ತಿಲ್ಲ. ಈ ಕೃತಿ ಕ್ರಿ.ಶ. ಸುಮಾರು ೧೨೫೦ ರಲ್ಲಿ ರಚಿತವಾಗಿರುವ ಸಾಧ್ಯತೆಗಳಿವೆ. ಆ ಕಾಲದ ಸಾಮಾಜಿಕ ಪರಿಸರ, ಈ ಕೃತಿಯ ಭಾಷೆ ಹಾಗೂ ಇನ್ನಿತರ ಕೆಲವು ಸಂಗತಿಗಳನ್ನಾಧರಿಸಿ ಈ ತೀರ್ಮಾನಕ್ಕೆ ಬರಬಹುದು.

ಪೀಠಿಕಾ ವಿಚಾರಗಳು :

ಮೈದುನ ರಾಮಯ್ಯನ ಕೃತಿಯಲ್ಲಿ ಮೂರು ಸಂಧಿಗಳಿವೆ. ಒಂದನೆಯ ಸಂಧಿ (ಪಂಥಸಂಧಿ)ಯಲ್ಲಿ ೨೬೯ ಪದ್ಯಗಳು, ಎರಡನೆಯ ಸಂಧಿ (ಶರಣರಸಂಧಿ)ಯಲ್ಲಿ ೯೫ ಪದ್ಯಗಳು, ಮೂರನೆಯ ಸಂಧಿ (ಕೈಲಾಸಸಂಧಿ)ಯಲ್ಲಿ ೧೫೬ ಪದ್ಯಗಳು ಇವೆ. ಒಟ್ಟು ೫೨೦ ಪದ್ಯಗಳಿವೆ. ಅಂತ್ಯದಲ್ಲಿ 'ಮಂಗಳಾರತಿ' ಪದ್ಯವೊಂದಿದೆ. 'ಹಾಡುಗಬ್ಬದ' ಈ ಕೃತಿಯ ಪ್ರತಿ ಪದ್ಯವೂ 'ಸುವ್ವಿ' ಎಂದು ಮುಕ್ತಾಯವಾಗುತ್ತದೆ. ತ್ರಿಪದಿ ಛಂದಸ್ಸಿನಲ್ಲಿ ಭಕ್ತಕವಿಯೊಬ್ಬನ ಬದುಕಿನ ಬಗ್ಗೆ ಬರೆದ ಸರಳವೂ ಲಲಿತವೂ ಭಕ್ತಿ–ಕರುಣ ರಸಪ್ರಧಾನವೂ ಆದ ಒಂದು ವರ್ಣಕಕೃತಿ ಇದು. ಕಥೆ ತುಂಬ ಕಡಿಮೆ ಇದೆ; ವರ್ಣನೆಗಳ ಹೆಚ್ಚಳವಿದೆ. ಅಲ್ಲಲ್ಲಿ ಕೆಲವು ವಿಚಾರಗಳು ಪುನರಾವರ್ತನೆಯಾದರೂ ಒಮ್ಮೆ ಓದಿಸಿಕೊಳ್ಳುವ ಕೃತಿಯಿದು.

ಕವಿ ಒಂದನೆಯ ಸಂಧಿಯ ಪ್ರಾರಂಭದಲ್ಲಿ ಶಿವ, ಗಣಪತಿ, ಭೂದೇವಿ ಮತ್ತು ಸರಸ್ವತಿಯರನ್ನು ಸ್ತುತಿಸಿದ್ದಾನೆ. ಕವಿ ತನ್ನ ಕೃತಿಯ ಮಹತ್ವವನ್ನು ಹೀಗೆ ಸಾರಿದ್ದಾನೆ :

"ಕಾಳಗದ ಕತೆಕೇಳಿ ಕಲಿಯುಗದವರೆಲ್ಲ
ಆಳಾಗಿ ಹೋಗಿ ಪರರಿಗೆ ರಣದಲ್ಲಿ
ಕಾದು ಮಡಿದವರ ಕತೆಯಲ್ಲ ಸುವ್ವಿ" (೧–೮)
"ವಿರಹದ ನುಡಿಗೇಲಿ ವಿರಹವೆಗ್ಗಳವಾಗಿ

ಪರನಾರಿಯರಿಗೆ ಮನಸೋತು ಕರ್ಮದಲಿ
ಸೇರಿಹೋದವರ ಕಥೆಯಲ್ಲ" (೧–೯)
"ನಾರಿಯ ನುಡಿಕೇಳಿ ನಾನಾಭವಗಳ ಬಂದೋ
ಸಾರಾಯದೊಳಗೆ ಮುಳುಮಾಡಿ ಕರ್ಮದಲಿ
ಸೇರಿಹೋದವರ ಕಥೆಯಲ್ಲ" (೧–೧೧)
"ಇದು ಶಿವಸಾಂಗತ್ಯ ಇದು ಕೇಳೆಗತಿಮುಕ್ತಿ
ಇದನಾವನೊಬ್ಬ ಜರಿದರೆ ಅವನಿಗೆ
ವಿಧಿ ಬಂದು ಬೆನ್ನಲಿಳುಹುದು" (೧–೧೧)

ತನ್ನ ಕೃತಿ ಸಾಮಾನ್ಯವಾದ ವಿಚಾರಗಳನ್ನೊಳೊಂಡಿರುವಂಥದ್ದಲ್ಲ; ಶಿವ ಕಥೆಯನ್ನೊಳಗೊಂಡಿರುವಂಥದ್ದು ಎಂದು ಕವಿ ತನ್ನ ಕೃತಿಯ ಮಹತ್ವವನ್ನು ಸಾರಿದ್ದಾನೆ. ಎಂಟು ಮತ್ತು ಹನ್ನೊಂದನೆಯ ಪದ್ಯಗಳ ಮೇಲೆ ಕ್ರಮವಾಗಿ ಚಾಮರಸನ ಪ್ರಭುಲಿಂಗ ಲೀಲೆಯ ಪದ್ಯ ಹಾಗೂ ಶಾಸನಗಳಂತ್ಯದಲ್ಲಿ ಬರುವ ಸಮಾಪ್ತಿ ವಾಕ್ಯಗಳ ಪ್ರಭಾವವಾಗಿರುವುದನ್ನು ಸಹೃದಯರು ಗುರುತಿಸಬಹುದು.

ಕೃತಿಯ ಅಂತರಂಗ :

"ಹರನ ಅರ್ಧಾಂಗಿಯರಗಿಣಿ ಸಾಕಿದಳು
ಹಲವು ಮಾತುಗಳ ಕಲಿಸಿದರೆ ಹುಸಿಬರಲು
ಇಳೆಗೆ ಹೋಗೆಂದು ಕಳುಹಿದಳು" (೧–೧೨)

ಎಂಬ ಪದ್ಯದ ಮೂಲಕ ಕೃತಿಯ ಕಥಾವತರಣವಾಗುತ್ತದೆ. ಹರಿಹರನ ರಗಳೆಗಳ ಮಾದರಿಯನ್ನನುಸರಿಸಿ ಕವಿ ಕಥೆ ಹೇಳಲು ತೊಡಗುವುದನ್ನಿಲ್ಲಿ ಗಮನಿಸಬೇಕು. ಕೈಲಾಸದಲ್ಲಿರುವವರು ಕಾರಣಾಂತರಗಳಿಂದ ಭೂಲೋಕದಲ್ಲಿ ಜನಸಿ ಮತ್ತೆ ನಿಜನೆಲೆಯನ್ನು ಪಡೆಯುತ್ತಾರೆ.

ಉತ್ತರನಾಡಿನ ಭೀಮಾವತಿ ಎಂಬ ಪಟ್ಟಣದ ಸೋಮಯ್ಯ ಮತ್ತು ಮಹಾದೇವಿ ಎಂಬ ಶಿವಭಕ್ತ ದಂಪತಿಗಳಿಗೆ ಆ ಅರಗಿಣಿ ರಾಮಯ್ಯನ ಹೆಸರಿನಲ್ಲಿ ಜನಿಸುತ್ತದೆ.

"ಆಟ ಭಕ್ತರ ಕೂಡೆ ಕೂಟ ಜಂಗಮರಲ್ಲಿ
ನೋಟ ಲಿಂಗದಲಿ ಬೆರೆದಿಹುದು ಇವನ ಭಕ್ತಿ ಕ
ರ್ನಾಟಕದವರೊಳಗಿಲ್ಲ" (೧–೧೨)

ಬಾಲ್ಯದಲ್ಲಿಯೇ ಆ ಮಗು ಹೇಗೆ ಶಿವಭಕ್ತಿಯ ಮುದ್ದೆಯಾಗಿತ್ತು ಎಂಬುದು ಇದರಿಂದ ವ್ಯಕ್ತವಾಗುತ್ತದೆ. ಬೆಳೆಯುತ್ತಿದ್ದ ಮಗುವಿಗೆ ಶಿಕ್ಷಣ ಕೊಡಿಸುವ ಉದ್ದೇಶದಿಂದ ಮಗುವಿನೊಡನೆ ಹೊರಟ ಸೋಮಯ್ಯ ಮಾರ್ಗ ಮಧ್ಯದಲ್ಲಿ

ಲಿಂಗೈಕ್ಯನಾಗುತ್ತಾನೆ., ವಿಧವೆ ಮಹಾದೇವಿ ತನ್ನ ಮಗ ರಾಮಯ್ಯನನ್ನು ವಿದ್ಯೆ ಕಲಿಯಲು ಮಠವೊಂದರಲ್ಲಿ ಬಿಡುತ್ತಾಳೆ. ಅದೇ ಮಠದ ಒಬ್ಬ ಹುಡುಗ ದೀಪಾವಳಿ ಹಬ್ಬಕ್ಕೆ ತನ್ನ ಅಕ್ಕ ಹಾಗೂ ಭಾವನನ್ನು ಕರೆತರಲು ಓದಿಗೆ ಬಿಡುವು ಪಡೆದು ಹೊರಡುತ್ತಾನೆ. ಎರಡರಿಯದ ರಾಮಯ್ಯ ತಾನೂ ತನ್ನ ಅಕ್ಕ ಹಾಗೂ ಭಾವನನ್ನು ಕರೆತರುತ್ತೇನೆಂದು ಹೊರಡುತ್ತಾನೆ. ಅಲ್ಲಿದ್ದ ಅವನ ಸಹಪಾಠಿಗಳು "ನಿನಗೆ ಅಕ್ಕ ಇಲ್ಲ; ನಿನ್ನ ತಾಯಿ ಪಡಿಯಕ್ಕಿ ಪಡೆದು ಬದುಕುತ್ತಿದ್ದಾಳೆ" ಎಂದು ತಮಾಷೆ ಮಾಡುತ್ತಾರೆ :

"ಎಲ್ಲರ ನುಡಿಗೇಳಿ ಅಲ್ಲಿಂದ ಮುನಿದೆದ್ದು
ಚೆಲ್ವ ಕಣ್ಗಳಲಿ ಜಲತುಂಬಿ ರಾಮಣ್ಣ
ಮೆಲ್ಲನೆ ಮನೆಗೆ ನಡೆದನು" (೧–೩೯)
ರಾಮಯ್ಯ ತಾಯಿಯ ಬಳಿ ಬರುತ್ತಾನೆ :
"ಮಗನೆ ಮರಿಯಾನೆಯ ಮಕ್ಕಳ ಮಾಣಿಕವೆ
ಅಗಲದೈಶ್ವರ್ಯ ಚೆನ್ನಿಗರಾಮ ನಿನ್ನ
ಮುದ್ದು ಮುಖವೇಕೆ ಕುಂದಿಹುದು" (೧–೪೩)

ಎಂದು ತಾಯಿ ಮಗನನ್ನು ಪ್ರೀತಿಯಿಂದ ಪ್ರಶ್ನಿಸುತ್ತಾಳೆ.[೩] ಅದಕ್ಕುತ್ತರವಾಗಿ ರಾಮಯ್ಯ ತನ್ನ ಮನದಳಲನ್ನು ಹೀಗೆ ತೋಡಿಕೊಳ್ಳುತ್ತಾನೆ :

"ಅಕ್ಕನುಂಟೇನಮ್ಮ ಭಾವನುಂಟೆ ತಾಯಿ
ಮಿಕ್ಕಬಾಂಧವರು ಎನಗುಂಟೆ ಹೇಳಮ್ಮ
ಗಕ್ಕನೆ ಹೋಗಿ ಕರೆತರುವೆ" (೧–೪೮)
ರಾಮಣ್ಣನ ತಾಯಿ ಅನ್ಯಮಾರ್ಗವಿಲ್ಲದೆ ಹೀಗೆ ಉತ್ತರಿಸುತ್ತಾಳೆ :
"ನಾನೇನ ಮಾಡಲಿ ನೀ ಮುನ್ನ ಮಾಡಿದ
ದಾನಧರ್ಮದ ಫಲವಿನಿತಾಯ್ತಕ್ಕ ಭಾವಗಳ
ನೋಡುವ ಪುಣ್ಯ ನಿನಗಿಲ್ಲ" (೧–೫೩)[೪]

ತಾಯಿ ಮಗನನ್ನು 'ಶಿವ–ಶಿವೆಯರೇ ನಿನ್ನ ಭಾವ ಮತ್ತು ಅಕ್ಕ' ಎಂದು ಸಮಾಧಾನಪಡಿಸುತ್ತಾಳೆ. ಆದರೆ ರಾಮಯ್ಯ ಪರಿಪರಿಯಲ್ಲಿ ತನ್ನ ಮನದಳಲನ್ನು ತೋಡಿಕೊಳ್ಳುತ್ತಾನೆ. "ತಾನು ಮಾಡಿದ ಯಾವುದೋ ಪಾಪದಿಂದ ತನಗೆ ಅಕ್ಕ

---

೩. ಮಗುವನ್ನು ಸಂಬೋಧಿಸುವಾಗ ಬಳಸಿರುವ ಮರಿಯಾನೆ, ಮಕ್ಕಳ ಮಾಣಿಕ, ಅಗಲದೈಶ್ವರ್ಯ ಎಂಬ ಪದ ಪುಂಜಗಳ ಸೊಗಸನ್ನು ಪರಿಭಾವಿಸಬೇಕು. ಈ ಬಗೆಯ ಉಪಮೆ–ದೃಷ್ಟಾಂತಗಳು ಜನಪದ ಸಾಹಿತ್ಯದಲ್ಲಿ ಮಾತ್ರ ಬರುವಂಥವು.

೪. ೧–೫೩, ೨೫ನೆಯ ಪದ್ಯಗಳ ಭಾಷೆ–ಭಾವ–ಬಂಧಗಳು ಒಂದೇ ರೀತಿ ಇವೆ. ಶೋಕಸಂದರ್ಭದಲ್ಲಿ ಮಾತುಗಳು ಪುನರಾವರ್ತನೆಯಾಗುತ್ತವೆಂಬ ಮಾತು ಸುಳ್ಳಲ್ಲ.
೧–೨೬ ರಿಂದ ೮೪ರ ವರೆಗಿನ ಪದ್ಯಗಳಿಗೂ ಸರ್ವಜ್ಞನ ತ್ರಿಪದಿಗಳಿಗೂ ತುಂಬ ಸಾಮ್ಯವಿರುವುದನ್ನು ಓದುಗರು ಗುರುತಿಸಬಹುದು.

ಭಾವಂದಿರಿಲ್ಲ' ಎಂದು ಗೋಳಾಡುತ್ತಾನೆ. ಈ ಭಾಗದಲ್ಲಿ ಬರುವ ಪದ್ಯಗಳು (೧–೫೪–೭೩) ಸ್ವಾರಸ್ಯವಾಗಿವೆ. ಇಲ್ಲಿ ಕವಿ ಪಾಪ–ಪುಣ್ಯಗಳ ಮೀಮಾಂಸೆಯನ್ನು ನಡೆಸಿದ್ದಾನೆ :

"ಗುಬ್ಬಿ ಕಾಗೆಯಂಥ ಪಕ್ಷಿಗಳನ್ನು ಕೊಂದೆನೊ, ಗರ್ಭದ ಪಶುವನ್ನು ಒದ್ದೆನೊ, ಕರು ಮೊಲೆಯನ್ನು ಉಣ್ಣುವಾಗ ಒಡೆಯನಿಗೆ ಹೇಳಿದೆನೊ, ಅಗ್ರಹಾರ ನಾಶ ಮಾಡಿದೆನೊ, ಸೋಗೆ ಹಿಂಡುಗಳನ್ನು ಕಲಕಿದೆನೊ, ಹೆಮ್ಮರವನ್ನು ಕಡಿದೆನೊ, ಮಕ್ಕಳ ಕೊಂದೆನೊ, ಇಕ್ಕಿದ ರಂಗೋಲಿ ಅಳಿಸಿದೆನೊ, ಆಸೆಯ ಕೊಟ್ಟೆನೊ, ಭಾಷೆಗೆ ತಪ್ಪಿದೆನೊ, ಮೋಸದಿ ಪರರ ಕೆಡಿಸಿದೆನೊ, ಪಶುವನ್ನು ಇರಿದೆನೊ, ಬಸವನನ್ನು ಕಾಲಲ್ಲಿ ಒದ್ದೆನೊ, ಬಟ್ಟೆಯಲ್ಲಿ ಮುಳ್ಳು ಎಳೆದೆನೊ, ತಂಗಿಯ ಒದ್ದೆನೊ, ತಾಯಿಯನ್ನು ಬೈದೆನೊ, ತೆಂಗಿನ ಮರವನ್ನು ತರಿದೆನೊ, ಶಂಭುವನು ಮರೆತೆನೊ, ನಂಬಿದವರನ್ನು ಕೆಡಿಸಿದೆನೊ, ಕೆರೆದ ಕಾಲಲ್ಲಿ ಶಿವನ ಗುಡಿಯ ಹೊಕ್ಕೆನೊ, ಗುರುಹಿರಿಯರನ್ನು ನೊಂದು ನುಡಿದೆನೊ, ಮುಪ್ಪಿನವರ ಕೈಕೋಲ ಸೆಳೆದೆನೊ, ಅಪ್ಪನನ್ನು ನೋಯಿಸಿದೆನೊ, ಉಣ್ಣ ಬಂದವರಿಗೆ ಅರೆ ಊಟವಿಕ್ಕಿದೆನೊ, ಕಣ್ಣು ಮೂರುಳ್ಳವನ ಜರಿದೆನೊ, ದಾರಿಯಲ್ಲಿ ಶಿಶು ಅಳುತ್ತಿರಲು ವಾರೆಗಣ್ಣಲ್ಲಿ ನೋಡಿದೆನೊ, ಪುಷ್ಪಫಲ ಬಿಟ್ಟ ಮರಗಳನ್ನು ತರಿದೆನೊ, ಕಚ್ಚುವ ನಾಯಿಯನ್ನು ಬಿಟ್ಟೆನೊ, ಮಲ್ಲಿಗೆಯ ವನಗಳನ್ನು ತರಿದೆನೊ, ಪಂಕ್ತಿಯೊಳಗೆ ಪ್ರಪಂಚವ ಮಾಡಿದೆನೊ, ಚಂಚಿಸಿ ಪರರಿಗೆ ಇಕ್ಕಿದೆನೊ–ಹೀಗೆ ಯಾವುದೋ ಕಾರಣ ನನಗೆ ಅಕ್ಕ ಮತ್ತು ಭಾವ ಇಲ್ಲ ಎಂದುಕೊಳ್ಳುತ್ತಾನೆ ರಾಮಯ್ಯ. ಮುಗ್ಧ ವ್ಯಕ್ತಿಯೊಬ್ಬನ ಆಲೋಚನಾಲಹರಿ ಹೇಗಿರುತ್ತದೆಂಬುದರ ಚಿತ್ರವೊಂದು ಇಲ್ಲಿದೆ.

ರಾಮಯ್ಯ ಪರಿಪರಿಯಾಗಿ ನೊಂದುಕೊಂಡು 'ನನ್ನ ಅಕ್ಕ ಮತ್ತು ಭಾವ ಇರುವ ಜಾಗವನ್ನು ತಿಳಿಸು' ಎಂದು ತಾಯಿಯನ್ನು ಬೇಡುತ್ತಾನೆ. ತಾಯಿ 'ಅವರಿಬ್ಬರೂ ಶ್ರೀಗಿರಿಯಲ್ಲಿದ್ದಾರೆ' ಎಂದು ಹೇಳಿ ಅಲ್ಲಿನ ವರ್ಣನೆಯನ್ನು ಮಾಡುತ್ತಾಳೆ :

"ಕಾಮಧೇನುಗಳುಂಟು ಕಲ್ಪವೃಕ್ಷಗಳುಂಟು
ಹೇಮರಾಶಿಗಳುಂಟು ಫಲವುಂಟು ಮರುಜವಳಿ
ಸ್ವಾಮಿ ಮಲ್ಲಯ್ಯನ ಗಿರಿಯೊಳಗೆ" (೧–೯೪)
"ಶಿಲೆಯೆಲ್ಲ ಲಿಂಗಗಳು ಜಲವೆಲ್ಲ ತೀರ್ಥಗಳು
ಕುಲಗಿರಿಗಳೆಲ್ಲ ಮುನಿನಿಕರವು ಪರ್ವತ
ಸರ್ವಗಿಡವೆಲ್ಲ ವನಮಾಲೆ" (೧–೯೬)

ಈ ಭಾಗದ ಪ್ರಕೃತಿ ಚಿತ್ರಗಳು, ಮೃದುಶಬ್ದ ಪುಂಜಗಳು ಓದುಗರ ಮನಸ್ಸನ್ನು ಸೆರೆಹಿಡಿಯುತ್ತವೆ. 'ಶ್ರೀಗಿರಿಗೆ ತೆರಳಿ ಅಕ್ಕಭಾವಂದಿರನ್ನು ಕರೆತರುತ್ತೇನೆ' ಎಂದು ಮಗ

ಬಲವಂತ ಮಾಡಿದಾಗ ತಾಯಿ ಬುತ್ತಿಯನ್ನು ಕಟ್ಟಿಕೊಡುತ್ತಾಳೆ. ಶೋಕತಪ್ತ ಹೃದಯದಿಂದ :

"ಪುತ್ರ ನಿನ್ನನು ಕಳುಹಿ ಹೆತ್ತೊಡಲು ನಿಲ್ಲದು
ಮತ್ತೊಬ್ಬನಿಲ್ಲ ಮರೆಯಾಕೆ ಚೆನ್ನಿಗರಾಮ
ಹೆತ್ತೊಡಲು ಹ್ಯಾಗೆ ಹಿಡಿಯಲಿ" (೧-೧೧೪)
"ಗತಿ ನಿನಗೆ ಗೌರಮ್ಮ ಮರೆ ನಿನಗೆ ಮಲ್ಲಯ್ಯ
ಸುತನು ನೀನೊಬ್ಬನಿರಲಾಗಿ ಮೂವರು
ಹಿತವೆಂದು ನಂಬು ನಿಜವಾಗಿ" (೧-೧೧೫)

ಎಂದು ಹೇಳಿ ಕಂದನನ್ನು ಬೀಳ್ಕೊಡುತ್ತಾಳೆ. ಈ ಭಾಗದ ಪದ್ಯಗಳು ಹೃದಯವನ್ನು ಕಲಕುತ್ತವೆ. ಬದುಕಿನಲ್ಲಿ ಬಹಳಷ್ಟು ಅನುಭವವನ್ನು ಪಡೆದ ಕವಿಯೊಬ್ಬನ-ಜನಪದ ಕವಿತೆಯಂತೆ-ರಚನೆ ಈ ಕೃತಿ ಎಂದರೆ ಅಚ್ಚರಿಯೇನಲ್ಲ !

ರಾಮಯ್ಯ ಶಿವ-ಪಾರ್ವತಿಯರನ್ನು ಊರಿಗೆ ಕರೆತರುವ ಅದಮ್ಯಾಕಾಂಕ್ಷೆಯಿಂದ ಬೆಟ್ಟಗುಡ್ಡಗಳನ್ನು ದಾಟುತ್ತಾ ಶ್ರೀಶೈಲವನ್ನು ತಲುಪುತ್ತಾನೆ. ರಾಮಯ್ಯನ ಹುಚ್ಚನ್ನು ಕಂಡ ಶಿವ ಮುಸಿಮುಸಿ ನಗುತ್ತಾನೆ. 'ಮಲ್ಲಯ್ಯನೆಲ್ಲಿದ್ದಾನೆಂದು' ಆತನನ್ನು ಕೇಳಲು ತಿರುಗಿದರೆ ಶಿವ ಮಂಗಮಾಯವಾಗಿರುತ್ತಾನೆ. "ಪಾಪಿಯ ಕಣ್ಣಿಗೆ ಪರುಷವೂ ಕಲ್ಲಾದಂತೆ" ಎಂದುಕೊಂಡು ರಾಮಯ್ಯ ಮುಂದೆ ಮುಂದೆ ನಡೆಯುತ್ತಾ

"ಮಲ್ಲಿಗೆಯ ವನಗಳಿರ ಮಲ್ಲಿಗೆಯ ಹೂಗಳಿರ
ಮೆಲ್ಲನೆ ಓದೊ ಗಿಳಿಗಳಿರ ಕಾಣಿರ
ಮಲ್ಲಿಕಾರ್ಜುನನ ಅರಮನೆಯ" (೧-೧೬೩)

ಎಂದು ಮರಗಿಡಗಳ ಬಳ್ಳಿಗಳನ್ನು ಸಂಬೋಧಿಸುತ್ತಾನೆ. ಸಮಸ್ತ ಪ್ರಕೃತಿಯೇ ರಾಮಯ್ಯನಿಗೆ ಚೈತನ್ಯಮಯವಾಗಿ ಕಂಡಿದೆ. ಪ್ರಕೃತಿಯನ್ನು ಸಂಬೋಧಿಸುವ ನೆಪದಲ್ಲಿ ಕವಿ ಪ್ರಕೃತಿ ಸೌಂದರ್ಯವನ್ನು ವರ್ಣಿಸಿದ್ದಾನೆ; ಜೊತೆಗೆ ಆತನ ಪ್ರಕೃತಿ ಪ್ರೀತಿಯೂ ವ್ಯಕ್ತವಾಗುತ್ತದೆ.

"ಕೂಗುವ ಕೋಗಿಲೆಯ ರಾಗ ಮಾಡುವ ಗಿಳಿಯೆ
ಸೋಗೆ ನವಿಲುಗಳ ಎಲೆ ಹಂಸೆ ಕಾಣಿರ
ಭೋಗಿ ಪಾರ್ವತಿಯರರಸನ" (೧-೧೫೮)

ಎಂದು ಸಮಸ್ತ ಪಶುಪಕ್ಷಿ ಪ್ರಾಣಿಗಳಾದ ಹುಲ್ಲೆ, ಕೋಗಿಲೆ, ಗಿಳಿ, ನವಿಲು, ಹಂಸ, ಶಕುನದ ಹಕ್ಕಿ, ಗರುಡ ಮುಂತಾದವನ್ನು ಪ್ರಶ್ನಿಸುತ್ತಾ ಶಿವನಿರವನ್ನು ಕಾಡಿಕಾಡಿ ಬೇಡುತ್ತಾನೆ; ಕೊನೆಗೆ ರಾಮಯ್ಯ ತುಂಬ ದಣಿದನು :

"ಉರಿದವು ಹೆಜ್ಜೆಗಳು ಒಡೆದವು ಖಂಡಗಳು
ಸೋರುತ್ತ ರಕ್ತ ಸುರಿವುತ ರಾಮಣ್ಣ
ದಾರಿ ದಾರಿಯಲಿ ಹೊರಳಿದ" (೧-೧೯೬)[೫]

ದಾರಿಯುದ್ದಕ್ಕೂ ಶಿವನಗುಣಗಾನ ಮಾಡುತ್ತಾ, ಬಹು ಪ್ರಯಾಸದಿಂದ ತೆವಳುತ್ತಾ ಬಂದು 'ಮೂರು ಸೊಲ್ಲುಗಳೊಳಗೆ ತೋರಿ ನಿಮ್ಮ ನಿಜರೂಪ, ಇಲ್ಲದಿದ್ದರೆ ನನ್ನ ಪ್ರಾಣವನ್ನು ನಿಮ್ಮಡಿಯಲ್ಲಿ ಅರ್ಪಿಸುತ್ತೇನೆ' ಎಂದು ಶಪಥ ಮಾಡಿದನು. ಆಗ ರಾಮಯ್ಯ.

"ಎಡದಲ್ಲಿ ಕಂಡನು ಒಡಹುಟ್ಟಿದಕ್ಕನ
ಬಲದಲ್ಲಿ ಕಂಡ ನಿಜಭಾವ ಮಲ್ಲಯ್ಯನಿಗೆ
ಮುಡಿಯ ಚಾಚಿದನು ಚರಣಕ್ಕೆ (೧-೨೪೧).

ರಾಮಯ್ಯ ಶಿವ-ಪಾರ್ವತಿಯರ ಯೋಗಕ್ಷೇಮವನ್ನು ವಿಚಾರಿಸುತ್ತಾನೆ. 'ನೀನು ಬಂದ ಕಾರಣವೇನೆಂದು' ಗಿರಿಜೆ ಕೇಳಿದಾಗ "ನಿಮ್ಮನ್ನು ಹಬ್ಬಕ್ಕೆ ಕರೆದುಕೊಂಡು ಹೋಗಲು ಬಂದಿದ್ದೇನೆ, ಬನ್ನಿ" ಎಂದು ಆಹ್ವಾನಿಸಿದನು. ಗಿರಿಜೆ ರಾಮಯ್ಯನಿಗೆ ಬಗೆಬಗೆಯ ತಿಂಡಿತಿನಿಸುಗಳನ್ನು ನೀಡಿ ಬಹು ಮಮತೆಯಿಂದ ಕಾಣುತ್ತಾಳೆ[೬].

'ನನ್ನೊಡನೆ ಊರಿಗೆ ಬಂದರೆ ನಿಮ್ಮ ಕೊರಳಿಗೆ ಪದಕ, ಬೆರಳಿಗೆ ಉಂಗುರವನ್ನು ಉಡುಗೊರೆಯಾಗಿ ನೀಡುತ್ತೇನೆ' ಎಂದು ರಾಮಯ್ಯ ಶಿವನಿಗೆ ಹೇಳುತ್ತಾನೆ. ಶೃಂಗರಿಸಿದ ನಂದಿಯೊಡನೆ ಶಿವ-ಪಾರ್ವತಿಯರೂ ಶಿವಗಣಂಗಳೂ ಅಲಂಕಾರ ಮಾಡಿಕೊಂಡು ರಾಮಯ್ಯನೊಡನೆ ಹೊರಡಲು ಸಿದ್ಧವಾಗುತ್ತಾರೆ.

ಸತ್ಯಕ್ಕ ಚಂಗಳೆ ಒಪ್ಪುವ ಮುಕ್ತಾಯಿ
ಅಕ್ಕಮಹದೇವಿ ಅಜಗಮ್ಮ ನೀಲಮ್ಮ
ಹೊಕ್ಕು ಬರುವಿರಿ ಬನ್ನಿ ನಮ್ಮ ತವರೂರಿಗೆ" (೨-೩೬)[೭] .

ಎಂದು ನಾಗಲದೇವಿ, ಕೆಂಭಾವಿ ಭೋಗಮ್ಮ, ರಂಭೆ ಮಾಚವ್ವೆ, ಮಲುಹಣಿ, ಕರಿಕಾಲಮ್ಮೆ, ವೀರಚೋಳವ್ವೆ, ನಾರಿ ಅಮ್ಮವ್ವೆ, ಕಮಳವ್ವೆಯರನ್ನೂ ತಮ್ಮ ತವರಿಗೆ ಶಿವೆ ಕರೆಯುತ್ತಾಳೆ :

---

೫. ಭಕ್ತನೊಬ್ಬನು ಭಕ್ತಿ ಮಾರ್ಗದಲ್ಲಿ ಕ್ರಮಿಸುವಾಗ ಪಡಬಹುದಾದ ನೋವನ್ನು ಎದುರಾಗುವ ಸಮಸ್ಯೆಯು ಇಲ್ಲಿ ಸಾಂಕೇತಿಕವಾಗಿ ಚಿತ್ರಿತವಾದಂತಿದೆ. ೧೯೭ನೆಯ ಪದ್ಯವನ್ನೂ ಗಮನಿಸಿ.

೬. ಸಂಧಿ ೧ : ೨೪೮-೨೫೫, ೨೫೯ನೆಯ ಪದ್ಯಗಳಲ್ಲಿ ಬರುವ ತಿಂಡಿ-ತಿನಿಸುಗಳ ಹೆಸರುಗಳನ್ನು ಗಮನಿಸಿ.

೭. ಪದ್ಯ ೩೬ ರಿಂದ ೩೮ರ ವರೆಗೆ ಬರುವ ಶಿವಶರಣರ ಹೆಸರನ್ನು ಗಮನಿಸಿ.

"ಬಂದ ಗಣಂಗಳು ವಂದಿಸಿ ಕರಮುಗಿದು
ಚೆಂದದಿಂದಲಿ ಮುಂದೆ ನಡೆದರು ಮಲ್ಲಯ್ಯ
ನಂದಿಯ ಮೇಲೆ ಕುಳಿತರು" (೨-೫೬)

ಹೀಗೆ ಸರ್ವರೂ ಪರಿವಾರ ಸಮೇತರಾಗಿ ಬರುತ್ತಿದ್ದರು. ಪಾರ್ವತಿ ರಾಮಯ್ಯನಿಗೆ " ನಿಮ್ಮ ಭಾವನವರೊಡನೆ ಸರಸವಾಡುತ್ತಾ ನಡೆ" ಎಂದಳು. ಶಿವನನ್ನು 'ನಿಂದಾಸ್ತುತಿಯ' ರೂಪದಲ್ಲಿ ಗೇಲಿ ಮಾಡುತ್ತಾ ರಾಮಯ್ಯ ಬರುತ್ತಿದ್ದನು :

"ಏರುವುದು ಮುದಿಯೆತ್ತು ಕೊರಳ ಮುತ್ತಿನ ತೊಣಚಿ ಮಸಣಗಾಡಿನೊಳು ಮಸಿಮಾಡಿ ತಿರುಕನಿಗೆ ಕೊಡಬಹುದೆ ನಮ್ಮಕ್ಕಗವುರಿಯ" (೨-೭೩).

ಒಂದು ತಿಂಗಳ ಹಾದಿ ಒಂದು ದಿನದಲ್ಲಿ ಸವೆಯಿತು. ಎಲ್ಲರೂ ಬಂದರು ಭೀಮತಿಗಾಗಿ ಸುರಸಭೆಯು ನಂದನವನದಲ್ಲಿಳಿದರು !

"ಪಲಸು ಪಾದರಿ ಮರನು ಕುಲವುಳ್ಳ ಖರ್ಜುರವು
ಚೆಲುವ ರದ್ರಾಕ್ಷಿ ಸುರಹೊನ್ನೆ ಮರದಡಿಯ
ಪುಲಿದೊಗಲ ಗದ್ದುಗೆಯಲ್ಲಿ ಶಿವಕುಳಿತ" (೨-೯೫)

ಆ ಸಂದರ್ಭದಲ್ಲಿ ಪ್ರಕೃತಿ ಸಂಭ್ರಮಗೊಂಡಿದ್ದನ್ನು ಕವಿ ಅನೇಕ ಪದ್ಯಗಳಲ್ಲಿ ವರ್ಣಿಸಿದ್ದಾನೆ.[೮]

"ಎಂದು ಫಲವಾಗದ ಬಂಜೆ ಮಾವಿನಮರವು
ಕೆಂದಳಿರು ಹೊತ್ತು ಫಲವಾಗಿ ಆ ಮರನು
ಬಂದವು ಚೆಂದವು ಶಿವನ ಬಳಿಗಾಗಿ" (೩-೧)

ತೆಂಗು, ಅಡಿಕೆ, ಬಾಳೆ, ಮುಡಿವಾಳ, ಮರುಗ, ದವನ, ನಿಂಬೆ, ನೇರಿಲೆ, ತಾವರೆ, ಕೇತಕಿ, ಬಿಲ್ವಪತ್ರ ಮುಂತಾದ ಸಮಸ್ತ ವಸ್ತುಗಳು "ಶಿವಗೆಂದು ಜಡಿದು ತೂಗಿದವು".

"ಕೆಂಪು ಕಂಪಿನ ಹಣ್ಣು ಪಣ್ಫಲಾದಿಗಳೆಲ್ಲ
ತಂಪುಳ್ಳವವನ ಪೊರಮಟ್ಟು ನಡೆದವು
ಕೆಂಪೆ ಗವುರಮ್ಮ ಜಯತೆಂದು" (೩-೧೩)

ಅರಮನೆಯಿಲ್ಲವೆಂದು ಶಿವೆ ಹೇಳಲು ಶಿವನು "ಕರೆದು ನಿರ್ಮಾಯನ ಕಳುಹಿದರಾಕ್ಷಣದಿ ಅರಮನೆಯಾಗಿ ಸಿರಿಯಾಗಿ". (೩-೧೬) ಎಲ್ಲಿ ನೋಡಿದರೂ ವೈಭವವೇ ವೈಭವ! ಸಂಭ್ರಮವೇ ಸಂಭ್ರಮ !

---

೮. ನೋಡಿ : ಸಂಧಿ : ೩ : ಪದ್ಯಗಳು ೧ ರಿಂದ ೧೩.

ರಾಮಯ್ಯನ ತಾಯಿ ಮಾತ್ರ 'ನನ್ನ ಮಗ ರಾಮನನ್ನು ಪರ್ವತಕೆ ಕಳುಹಿದೆ; ಅಲ್ಲಿ ಅವನನ್ನು ಹುಲಿ, ಸಿಂಹ ಕೊಂದವೋ ಏನೋ ! ರಾಮಣ್ಣ 'ಹೋಗಿ ಹದಿನೈದು ದಿನಗಳಾದವು ; ಇಂದಿಗೆ ಗಡುವು ಮೀರಿತು ; ಏನು ಮಾಡವುದು' ಎಂದು ಚಿಂತಾಗ್ನಿಯಲ್ಲಿ ಬೇಯುತ್ತಿದ್ದಳು. ಈ ಭಾಗದಲ್ಲಿ ಬರುವ ಪದ್ಯಗಳು ಕರುಣರಸದ ಮಡುವೊಂದನ್ನು ನಿರ್ಮಾಣ ಮಾಡುತ್ತವೆ.[೯] ಈ ಕೃತಿಯ ಕವಿಗೆ ಕರುಣರಸದತ್ತ (ಭಕ್ತಿರಸದ ಜೊತೆಗೆ) ಒಲವು ಹೆಚ್ಚು ಎಂಬುದು ಇದರಿಂದ ಸ್ಪಷ್ಟಪಡುತ್ತದೆ.

ಅಕ್ಕ–ಭಾವಂದಿರ ಜೊತೆ ತನ್ನ ಮಗ ಬಂದನೆಂಬ ಸುವಾರ್ತೆಯನ್ನು ತಿಳಿದ ತಾಯಿ ಮಹದೇವಿ ಬಹುವರ್ಷಗೊಳ್ಳುತ್ತಾಳೆ. ಶಿವ–ಪಾರ್ವತಿಗೂ ಶರಣರಿಗೂ ಬಗೆ ಬಗೆಯ ಅಡಿಗೆಯನ್ನು ಮಾಡುತ್ತಾಳೆ.[೧೦] ಎಲ್ಲರೂ ಪರಸ್ಪರ ಭೇಟಿಯಾಗುತ್ತಾರೆ. ಊಟೋಪಚಾರಗಳು ಮುಗಿದ ಮೇಲೆ ಎಲ್ಲರೂ ಸಂತೃಪ್ತರಾಗುತ್ತಾರೆ. ಭಕ್ತರೆಲ್ಲರ ಇಷ್ಟಾರ್ಥಗಳು ನೆರವೇರುತ್ತವೆ. ಶಿವ ರಾಮಯ್ಯನಿಗೆ ಗಣಪದವಿಯನ್ನೀಯುತ್ತಾನೆ.

"ತಂದ ಪುಷ್ಪಕವನ್ನು ತಂದಿಳುಹಿ ಶಿವರಾಯ
ಅಂದು ರಾಮಯ್ಯಗೆ ಗಣಪದವು ಬಪ್ಪಂತೆ
ಮಂದಿರದೊಳಗೆ ಸುಖಮಿರೆ" (೩–೧೫೪)
"ಅಲ್ಲಿಗಲ್ಲಿಗೆ ಪದನು ಮಲ್ಲಿಗೆಯ ಸರದಂತೆ
ಮಲ್ಲಿಕಾರ್ಜುನನ ಕೃಪೆಯಿಂದ ಈ ಕಥೆಯು
ಇಲ್ಲಿಗೆ ಕೈಲಾಸ ಸಂಧಿ ಮುಗಿಯಿತು." (೩–೧೫೪)

"ಇಂದು ರಾಮನ ಕಥೆಯ ನಿಂದಿಸದೆ ಕೇಳಿದರೆ
ಹೊಂದಿರ್ದ ಪಾಪ ಪರಿಹಾರ ಇದು ನಮ್ಮ
ಚಂದ್ರಶೇಖರನ ಕೃಪೆಯಿಂದ" (೩–೧೫೫)

"ಸತ್ಯಶರಣರು ತಾವು ಭಕ್ತರೆಲ್ಲರು ಕೇಳಿ
ಭಕ್ತಿಯುಳ್ಳವರು ಕಿವಿಗೊಟ್ಟು ಕೇಳುವ
ಶರಣರ ಪಾದಕ್ಕೆ ಶರಣಾರ್ತಿ" (೩–೧೫೬)

ಹೀಗೆ 'ಮೈದುನ ರಾಮಯ್ಯನ ಕಥೆ' ಮಂಗಳ ಪ್ರದವಾಗಿ ಮುಕ್ತಾಯವಾಗುತ್ತದೆ. ಭಕ್ತರ ನಿರ್ಮಲ ಭಕ್ತಿ–ಪ್ರೀತಿಗಳಿಗೆ ಶಿವ ಒಲಿಯುತ್ತಾನೆ, ಕೈಲಾಸದಿಂದ ಭೂಮಿಗಿಳಿದು ಬರುತ್ತಾನೆನ್ನುವ ಆಶಯವನ್ನು ಅಜ್ಞಾತಕವಿ ತಿಳಿಯಾದ ಭಾಷೆಯಲ್ಲಿ ನಿರೂಪಿಸಿದ್ದಾನೆ.

ಕಥಾಂಶ ಕಡಿಮೆಯಿರುವುದರಿಂದ ಕವಿ ಬಗೆಬಗೆಯ ವರ್ಣನೆಗಳನ್ನು ತಂದು

---

೯. ಸಂಧಿ : ೩ : ಪದ್ಯಗಳು ೨೭ ರಿಂದ ೫೭ರ ವರೆಗೆ ನೋಡಿ.

೧೦. ಸಂಧಿ : ೩ : ೨೮ ರಿಂದ ೯೭ರ ವರೆಗಿನ ಪದ್ಯಗಳಲ್ಲಿ ಬರುವ ಸೊಪ್ಪು, ತರಕಾರಿ, ತಿಂಡಿ–ತಿನಿಸುಗಳ ಹೆಸರುಗಳು ಕುತೂಹಲಕರವಾಗಿವೆ.

ಕೃತಿಯನ್ನು ವಿಸ್ತರಿಸಿದ್ದಾನೆ. ವರ್ಣನಾ ಭಾಗಗಳಲ್ಲಿ ಕವಿಯ ಪ್ರಕೃತಿ ಪ್ರೀತಿ, ಬದುಕಿನ ಬಗ್ಗೆ ಇರುವ ಎಚ್ಚರ, ಭಕ್ತಿಯ ತಾದಾತ್ಮ್ಯವನ್ನು ಕಾಣಬಹುದು. ವಚನ ರಚನೆ ಕಡಿಮೆಯಾದ ಕಾಲದಲ್ಲಿ ವಚನಕಾರರನ್ನೇ ಎತ್ತಿಕೊಂಡು ಶಿವಕೃತಿಗಳನ್ನು ರಚಿಸಿದ್ದು ಒಂದು ವಿಶೇಷವಾದ ವಿಚಾರವಾಗಿದೆ.

ಪಾತ್ರಗಳು :

ರಾಮಯ್ಯ, ರಾಮಯ್ಯನ ತಾಯಿ ಮಹಾದೇವಿ ಪ್ರಸ್ತುತ ಕೃತಿಯ ಕೇಂದ್ರ ಪಾತ್ರಗಳು. ರಾಮಯ್ಯನ ಮುಗ್ಧ ಮನೋಭಾವ ; ಆತ ತಾಯಿಯನ್ನು ಪ್ರಶ್ನಿಸುವ ವಿಧಾನ ; ತಾಯಿ ಮಗನಿಗೆ ನೀಡುವ ವಾತ್ಸಲ್ಯಪ್ರದ ಉತ್ತರಗಳು ; ಮಗ ಹದಿನೈದು ದಿನಗಳಾದರೂ ಬರದಿದ್ದಾಗ ಆಕೆ ಪಡುವ ಆತಂಕ ಸಹೃದಯರ ಮನಸೆಳೆಯುತ್ತವೆ. ಶೋಕ_ಭಕ್ತಿ ಸಂದರ್ಭದ ಭಾಗಗಳಲ್ಲಿ ತಾಯಿ–ಮಕ್ಕಳ ಅಂತರಂಗವನ್ನೇ ಕವಿ ತೆರೆದಿಟ್ಟಿದ್ದಾನೆ. ಕರುಳ ಕುಡಿಯ ಸಂಬಂಧವೆಷ್ಟರಮಟ್ಟಿನದೆಂಬುದು ಇಲ್ಲಿ ಮರ್ಮಭೇದಕವಾಗಿ ಚಿತ್ರಿತವಾಗಿದೆ.

ಶಿವ–ಶಿವೆಯರ ಪಾತ್ರಗಳೂ ಸಹ ಓದುಗರ ಮನಸೆಳೆಯುತ್ತವೆ. ಭಕ್ತಾದಿಗಳ ಇಷ್ಟಾರ್ಥವನ್ನು ಅವರು ಆರಿತ ಬಗೆ, ಮಾನವರಂತೆ ಅವರು ವರ್ತಿಸಿ ಭೂಲೋಕದಲ್ಲಿ ಅವತರಿಸಿ ತಾಯಿ–ಮಕ್ಕಳಿಗೆ ಸಂತೋಷಪಡಿಸಿ ತೆರಳುವ ವಿಚಾರ ಗಮನಾರ್ಹವಾಗಿದೆ. ಕೃತಿಯ ಆದಿ–ಅಂತ್ಯಗಳಲ್ಲಿ ಹರಿಹರನ ರಗಳೆಗಳ ಪ್ರಭಾವವಾಗಿರುವುದನ್ನು ಗುರುತಿಸಿದರೂ ಕೃತಿಯ ನಿರೂಪಣಾ ವಿಧಾನ ಮಾತ್ರ ಭಿನ್ನವಾಗಿರುವುದನ್ನು ಗಮನಿಸಬೇಕು.

ಭಾಷೆ :

ಈ ಕೃತಿಯ ಭಾಷೆ ತುಂಬ ಸರಳವಾಗಿದೆ ; ಆ ರೀತಿ ಇರಬೇಕೆಂಬುದೂ ಕವಿಯ ಉದ್ದೇಶವಾಗಿದೆ ಎಂಬುದು ಕೃತಿಯನ್ನವಲೋಕಿಸಿದಾಗ ಸ್ಪಷ್ಟವಾಗುತ್ತದೆ. ಕವಿ ಚಿರಪರಿಚಿತವಾದ ದೇಸಿ ಮಾತುಗಳನ್ನು ಉಪಮೆಗಳನ್ನು ಸಹಜವಾಗಿ ಬಳಸಿ ಬಿಡುತ್ತಾನೆ.

'ಬಾಣ ಎದೆಯಲ್ಲಿ ಮುರಿದಂತೆ' ; ' ಬಾಗಿದಳು ಬಳೆ ಸುಳಿಯಂತೆ' ; 'ಮರಿಯಾನೆಯಂತೆ'; 'ಪಾಪಿಯ ಕಣ್ಣಿಗೆ ಪರುಷ ಕಲ್ಲಾದಂತೆ' ; 'ಆವುಗೆಯ ಹುಡಿಯಂತೆ ಕಾವು ಎಸೆದವು' ; 'ಹಾರಿದ ಹುಲ್ಲೆ ಮರಿಯಂತೆ' ; 'ಕರಿಮುಗಿಲೆಡೆಯ ಬಿಳಿಮುಗಿಲೆಡೆಯಾಡುವಂತೆ ಚಮರಿಯ ಢಾಳೈಸಿ' 'ಗಾಳಿಗಿಕ್ಕಿದ ಸೊಡರಂತೆ' ; 'ಬೆಕ್ಕು ಸಿಂಹಕ್ಕೆ ಸರಿಯುಂಟೆ' ; 'ಮಕ್ಕಳಿಲ್ಲದ ಮನೆಯು ಪಕ್ಷಿ ಇಲ್ಲದ ವನವು' ಮುಕ್ಕಣ್ಣನಿಲ್ಲದ ಕೈಲಾಸ ಇವು ಮೂರು ರಾಕ್ಷಸರಿದ್ದ ಪೊಳಲಂತೆ' ಎಂಬಿವೇ ಮುಂತಾದ ಉಪಮೆಗಳಲ್ಲಿ ಕವಿಗೆ ಬದುಕಿನ ಬಗ್ಗೆ ಹಾಗೂ ನಿಸರ್ಗದ ಬಗ್ಗೆ ಇರುವ ಅರಿವು ವ್ಯಕ್ತವಾಗುತ್ತದೆ. ಹೀಗಾಗಿ ಇದೊಂದು 'ದೇಸೀ ಕಾವ್ಯ'ವೆನಿಸುತ್ತದೆ.

'ಒರಗು, ರಂಡೆ, ಪಡಿ, ವಾರೆಗಟ್ಟು, ತರಿ, ಬೆಂದೊಡಲು, ಮಡಗು, ಬೋನ, ಮುಡಿ, ವರಗು, ಉಣ್ಣು, ಕೂಸು, ಇಕ್ಕು, ಒಡವೆ, ಒಲ್ಲೆ, ಮೈಯಿಕ್ಕು, ಅರವಟ್ಟಿಗೆ' ಎಂಬಿವೇ ಮುಂತಾದ ದೇಸೀ ನುಡಿಗಳು ಧಾರಾಳವಾಗಿ ಬಳಕೆಯಾಗಿವೆ. ಆಯಾ ಸಂದರ್ಭಗಳಲ್ಲಿ ಅವಕ್ಕೆ ವಿಶಿಷ್ಟಾರ್ಥಗಳು ಪ್ರಾಪ್ತವಾಗುತ್ತವೆ.

ನೀತಿಯ ಮಾತು ಬಂದಾಗ ಕವಿ ಎಷ್ಟು ಸರಳವಾಗಿ ಬರೆಯುತ್ತಾನೆಂಬುದನ್ನು ನೋಡಿ :

"ಉಂಟಾಗ ಉಡುವಾಗ ಊರೆಲ್ಲ ನಂಟರು
ದಂದುಗ ಬಿದ್ದು ಬಡತನ ಬಂದಾಗ
ಬಂಧುಗಳೆಮ್ಮನರಿಯರು" (೧-೭೬).

ಹೆಣ್ಣಿನ ಮಹತ್ವ (ಸಂಧಿ : ೧ : ಪದ್ಯಗಳು : ೨೯-೮೩) : ಪಾಪದ ಬಗೆ (ಪದ್ಯಗಳು : ೫೪-೭೩, ೭೮) ಗಳನ್ನು ಕುರಿತ ಪದ್ಯಗಳಲ್ಲಿ ಕವಿಯ ಲೋಕಾನುಭವ ವ್ಯಕ್ತವಾಗಿದೆ. ಕರುಣರಸ, ಭಕ್ತಿರಸ, ಹಾಸ್ಯರಸಗಳ ಸಮ್ಮಿಶ್ರಣ ಈ ಕೃತಿಯಲ್ಲಿದೆ. ದಾರಿಯಲ್ಲಿ ಬರುವಾಗ ರಾಮಯ್ಯ ಶಿವನನ್ನು ತಮಾಷೆ ಮಾಡುವ ಸಂದರ್ಭ ಹಾಸ್ಯರಸಕ್ಕೆ ಉದಾಹರಣೆಯಾಗಿದೆ. (ಸಂಧಿ : ೨ : ಪದ್ಯಗಳು : ೬೦-೯೨); ಶಿವನ ಚರಿತ್ರೆಯ ಪುಟಗಳೇ ಇಲ್ಲಿ ತೆರೆದುಕೊಳ್ಳುತ್ತವೆ.

"ಕಮಲ ಕಮಲವು ಕುಂದಿ ಕಮಲದಲಿ ನಡೆವಾಗ
ಕಮಲದಲಿ ರಕ್ತ ಸುರಿವುತ ರಾಮಣ್ಣ
ಕಮಲಪೂಜಿತನ ನೆನೆದನು" (೧-೧೯೮)

"ಗುಂಡುಗುಂಡನೆ ಹತ್ತಿ ಗುಂಡನೇರಿ ಕರೆದನು
ಗುಂಡಿಗೆ ರಕ್ತ ಸುರಿಯುತ್ತ ರಾಮಣ್ಣ
ಬೆಂಡಾಗಿ ಬಾಯಿ ಬಿಡುತಾನೆ" (೧-೨೦೯)

ಎಂಬೀ ಪದ್ಯಗಳು ಶಬ್ದಾಲಂಕಾರಕ್ಕೆ ಸುಂದರ ನಿದರ್ಶನಗಳಾಗಿವೆ. ಸಾಹಿತ್ಯ ರಚನೆ ಕುಂದಿದ ಕಾಲದಲ್ಲಿ ರಚಿತವಾದ ಈ ಕೃತಿ ಆ ಕಾಲಕ್ಕೆ ಒಂದು ಕೊಡುಗೆ ಎಂದು ಹೇಳಬಹುದು.

■

ಸಂಪಾದಕರು ಮತ್ತು ಲೇಖಕರ ವಿಳಾಸಗಳು

ಪ್ರೊ॥ ಜಿ. ಅಬ್ದುಲ್ ಬಷೀರ್ (ಸಂ.)
ನಿವೃತ್ತ ಕನ್ನಡ ಪ್ರಾಧ್ಯಾಪಕರು
ನಂ.೫, ೮ನೆಯ ಅಡ್ಡರಸ್ತೆ
ಬೈರಸಂದ್ರ, ಜಯನಗರ ೧ನೇ ಬ್ಲಾಕ್‌ಪೂರ್ವ
ಬೆಂಗಳೂರು – ೫೬೦ ೦೧೧.
ಮೊಬೈಲ್ : ೯೦೦೮೭೬೩೩೩೬
: ೯೬೬೩೭೭೮೮೬೮

೧. **ಪ್ರೊ. ಡಿ. ಲಿಂಗಯ್ಯ**
೬೯೦, ೭ನೇ ಬ್ಲಾಕ್, ೨ನೇ ಫೇಸ್
ಬನಶಂಕರಿ ೩ನೇ ಹಂತ,
ಬೆಂಗಳೂರು – ೫೬೦ ೦೮೫.

೨. **ಶ್ರೀಮತಿ ಎಂ. ರೇಖಾ**
ಕನ್ನಡ ಉಪನ್ಯಾಸಕರು
ಸರ್ಕಾರಿ ಪದವಿಪೂರ್ವ ಕಾಲೇಜು
ಚೇಳೂರು–೫೬೩ ೧೨೪
ಬಾಗೇಪಲ್ಲಿ ತಾ॥ ಚಿಕ್ಕಬಳ್ಳಾಪುರ ಜಿಲ್ಲೆ

೩. **ಡಾ॥ ಲಕ್ಷ್ಮೀ ಜಿ. ಪ್ರಸಾದ**
ಕನ್ನಡ ಉಪನ್ಯಾಸಕರು
ಸರ್ಕಾರಿ ಪದವಿಪೂರ್ವ ಕಾಲೇಜು
ಬೆಳ್ಳಾರಿ, ಸುಳ್ಯ (ತಾ), ದಕ್ಷಿಣ ಕನ್ನಡ ಜಿಲ್ಲೆ

೪. **ಶ್ರೀ ಎಸ್. ವಿ. ಶ್ರೀನಿವಾಸರಾವ್**
ಗೌ॥ ಕಾರ್ಯದರ್ಶಿಗಳು
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
೩ನೇ ಮುಖ್ಯರಸ್ತೆ, ಎನ್. ಆರ್. ಕಾಲೋನಿ
ಬೆಂಗಳೂರು – ೫೬೦ ೦೧೯.

೫. **ಶ್ರೀ ವೇಮಗಲ್ ಸೋಮಶೇಖರ್**
ನಂ. ೧೬೦, 'ದೀಪ'
೪ನೇ ಅಡ್ಡರಸ್ತೆ, ಲಕ್ಷ್ಮೀಪುರ,
ಕೆಂಪೇಗೌಡ ನಗರ
ಬೆಂಗಳೂರು–೫೬೦ ೦೧೯

೬. **ಶ್ರೀಮತಿ ಎನ್. ಹೆಚ್. ಶಿವಗಂಗಮ್ಮ**
ಸಂಸ್ಕೃತ ಉಪನ್ಯಾಸಕರು
ಎಸ್.ಜೆ.ವಿ.ಪಿ. ಕಾಲೇಜು–ಸ್ವಾಯತ್ತ
ಹರಿಹರ

೭. **ಪ್ರೊ॥ ಎಸ್. ಬಿಳಿಗಿರಿವಾಸನ್**
ನಂ. ೭೮, 'ಶ್ರೀ ಶ್ವೇತಾದ್ರಿ'
ನ್ಯಾನಪ್ಪನಹಳ್ಳಿ, ಬೇಗೂರು ಹೋಬಳಿ
ಬೆಂಗಳೂರು–೫೬೦ ೦೬೮.

೮. **ಪ್ರೊ॥ ಎನ್. ಬಸವಾರಾಧ್ಯ**
ನಂ. ೭೪೩, ೧೨ನೇ ಮೇನ್
೩ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು–೫೬೦ ೦೧೦

೯. **ಪ್ರೊ॥ ಪಿ. ಮಹಾದೇವಪ್ಪ**
ನಿವೃತ್ತ ಪ್ರಾಂಶುಪಾಲರು
ನಂ. ೧೯೭, ೫ನೇ ಮುಖ್ಯರಸ್ತೆ
ವೈಯಾಲಿ ಕಾವಲ್
ಬೆಂಗಳೂರು–೫೬೦ ೦೦೩

೧೦. **ಡಾ॥ ಕೆ. ಎಸ್. ಎನ್. ಉಡುಪ**
ಆಯ್ಕೆ ಶ್ರೇಣಿ ಉಪನ್ಯಾಸಕರು
ಎಸ್. ಎಸ್. ಪದವಿ ಪೂರ್ವ ಕಾಲೇಜು
ಸುಬ್ರಹ್ಮಣ್ಯ, ಸುಳ್ಯ ತಾಲ್ಲೂಕು
ದಕ್ಷಿಣ ಕನ್ನಡ ಜಿಲ್ಲೆ–೫೭೪ ೨೩೮

೧೧. **ಶ್ರೀ ಹಿೀ. ಚಿ. ಶಾಂತವೀರಯ್ಯ**
ಸಾಹಿತಿಗಳು
೯, ಮನುವನ, ವಿಜಯನಗರ
ಬೆಂಗಳೂರು–೫೬೦ ೦೪೦

೧೨. **ಪ್ರೊ॥ ಎಲ್. ಎಸ್. ಶೇಷಗಿರಿರಾವ್**
ನಂ. ೧೧, 'ಪಾರಿಜಾತ'
೨೧ನೇ ಮೇನ್, ೫ನೇ ಕ್ರಾಸ್
ಮಾರೇನಹಳ್ಳಿ
ಜೆ. ಪಿ. ನಗರ ೨ನೇ ಪೇಸ್
ಬೆಂಗಳೂರು–೫೬೦ ೦೭೮

1963 ರಿಂದ ಪ್ರಾರಂಭವಾದ "ಕರ್ನಾಟಕ ಲೋಚನ" ಒಂದು ವಿದ್ವತ್ ಪತ್ರಿಕೆ. ಮುಖ್ಯವಾಗಿ ಸಂಶೋಧನೆ, ಪ್ರಾಚೀನ ಕನ್ನಡ ಸಾಹಿತ್ಯ, ಸಂಸ್ಕೃತಿ ವಿವೇಚನೆಗೆ ಮೀಸಲಾಗಿದೆ. ಕನ್ನಡ ನಾಡಿನ ಹಿರಿಯ ಕಿರಿಯ ಸಾಹಿತ್ಯ ಚಿಂತಕರ ಮೂಲ ಆಶಯಕ್ಕೆ ಧಕ್ಕೆ ಬಾರದ ಹಾಗೆ ಉಪಯುಕ್ತ ಲೇಖನಗಳನ್ನು ಬರೆದು ಕೊಡುವುದರ ಮೂಲಕ ಪತ್ರಿಕೆ ನಡೆಯುತ್ತಿದೆ. ಸಮಗ್ರ ಕನ್ನಡ ಸಾಹಿತ್ಯದ ಸಂವರ್ಧನೆಗೆ ಸಹಾಯಕವಾದ 'ಲೋಚನ' ಸಂಶೋಧನ, ಸಂಸ್ಕೃತಿ ಆಸಕ್ತರಿಗೆ ಉಪಯುಕ್ತವಾಗಿದೆ. ಇದರ ಉಪಯೋಗ ವನ್ನು ಕನ್ನಡ ಸಹೃದಯರು ಬಳಸಿ ಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಪ್ರೊ. ಜಿ. ಅಬ್ದುಲ್ ಬಷೀರ್
ಸಂಪಾದಕರು